ಮಂಗಳೂರು ಆಗಸ್ಟ್ 15 – ಸೆಪ್ಟೆಂಬರ್ 3: 2026 ಸಂಪುಟ 3, ಸಂಚಿಕೆ 2, ಪುಟಗಳು–8 RNI:KNKAN/26/A0422 www.ullalavani.com ullalavani@gmail.com ₹10

# ಉಳ್ಳಾಲ ವಾಣಿ

ಕನ್ನಡ ಪತ್ರಿಕೆ

ಕಡಲ ಮಗಳ್

ಉಳ್ಳಾಲ ವಾಣಿ
ವಾರ್ಷಿಕ ಚಂದಾದಾರಾಗಿರಿ
ಒಂದು ವರ್ಷ ಪೂರ್ತಿ ಪತ್ರಿಕೆ ಮನೆಗೆ ತಲುಪಿಸಲು
₹250 ಪಾವತಿಸಿರಿ

ಸುದ್ದಿ, ಪತ್ರಿಕೆ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿರಿ
ಉಳ್ಳಾಲ ವಾಣಿ
ಅಪ್ಪಚ್ಚಿ ಕಾಂಪ್ಲೆಕ್ಸ್, ಯೆನೆಪೋಯ ಆಸ್ಪತ್ರೆ ಹತ್ತಿರ, ಕುತ್ತಾರುಪದವು
9972528110

ಪುಟ 2 ಕುತ್ತಾರು ಸೌಹಾರ್ದ ವೃತ್ತ ಲೋಕಾರ್ಪಣೆಗೊಳಿಸಿದ ಆರೋಗ್ಯ ಸಚಿವ ಯು.ಟಿ.ಖಾದರ್
ಪುಟ 3 ಶ್ರೀ ವೀರಾಂಜನೇಯ ಸ್ವಾಮಿಯ ನೂತನ ಮಂದಿರಕ್ಕೆ ನಿಧಿಕುಂಭ ಸ್ಥಾಪನೆ
ಪುಟ 4 ಹಲ್ಕಾ ಡಾನ್ ಚಿತ್ರತಂಡದಿಂದ ಕುತ್ತಾರು ಕೊರಗಜ್ಜನಲ್ಲಿ ಪ್ರಾರ್ಥನೆ
ಪುಟ 7 ಅಮ್ಮ ನ್ಯಾಚುರಲ್ ಪ್ರಾಡಕ್ಟ್ ನೂತನ ಮಳಿಗೆ ಶುಭಾರಂಭ




ತೊಕ್ಕೊಟ್ಟು: ಭಕ್ತಿಭಾವ, ಸಂಭ್ರಮ ಹಾಗೂ ಸಡಗರದಿಂದ ನಡೆದ ತೊಕ್ಕೊಟ್ಟು ಮೊಸರು ಕುಡಿಕೆ ಉತ್ಸವ–2026 ಯಶಸ್ವಿಯಾಗಿ ಸಮಾಪನಗೊಂಡಿತು. ಆಕರ್ಷಕ ವಿದ್ಯುತ್ ದೀಪಾಲಂಕಾರ ಹಾಗೂ ವೈಭವದ ಕಾರ್ಯಕ್ರಮಗಳು ಉತ್ಸವಕ್ಕೆ ಮತ್ತಷ್ಟು ಮೆರುಗು ನೀಡಿದವು.




ಉಳ್ಳಾಲ: ಕುಂಪಲ ಶ್ರೀ ಬಾಲಕೃಷ್ಣ ಮಂದಿರದ ಆಶ್ರಯದಲ್ಲಿ ನಡೆಯುವ 29ನೇ ವರ್ಷದ ಕುಂಪಲಾಷ್ಟಮಿ ಉತ್ಸವ ಸಂಪನ್ನಗೊಂಡಿತು. ಮಂದಿರದಲ್ಲಿ ವಿವಿಧ ಧಾರ್ಮಿಕ ವೈದಿಕ, ಭಜನೆ, ಶ್ರೀ ಕೃಷ್ಣ ಪರಮಾತ್ಮನ ವೈಭವದ ಶೋಭಯಾತ್ರೆ ಮನರಂಜಿಸುವ ಸ್ತಬ್ಧಚಿತ್ರ, ದೃಶ್ಯರೂಪ, ನಾಸಿಕ್, ಬ್ಯಾಂಡ್ ವಾದನ, ಸ್ಯಾಕ್ಸೋಫೋನ್ ವಾದನದೊಂದಿಗೆ ನಡೆಯಿತು.

## ಅಶಕ್ತರಿಗೆ ಮನೆ ನಿರ್ಮಿಸುತ್ತಿರುವ ಸಂತೋಷ್ ಬೋಳಿಯಾರ್ ಸೇವೆ ದೇಶಕ್ಕೆ ಮಾದರಿ: ಕ್ಯಾ.ಬ್ರಿಜೇಶ್ ಚೌಟ




**ಅಡ್ಕ:** ದಿ.ಮೈಸೂರು ಎಲೆಕ್ಟ್ರಿಕಲ್ಸ್ ಇಂಡಸ್ಟ್ರೀಸ್ ಲಿ.ನ ಮಾಜಿ ಅಧ್ಯಕ್ಷರು, ಬಿಜೆಪಿ ಮುಖಂಡರಾದ ಸಂತೋಷ್ ಕುಮಾರ್ ರೈ ಬೋಳಿಯಾರ್ ಅವರ ಕನಸ್ಸಿನ ಕೂಸು ನಮೋ ಕುಟೀರದ 7ನೇ ಮನೆಯನ್ನು ಅಡ್ಕದ ದೊಡ್ಡ ಮನೆ ಕಾಂಪೌಂಡ್‌ನಲ್ಲಿ ಉಳ್ಳಾಲ ತಾಲೂಕಿನ ಅಡ್ಕ ಶ್ರೀ ಭಗವತಿ ದೈವಸ್ಥಾನದ ದರ್ಶನ ಪಾತ್ರಿ ಶ್ರವಣ ಬೆಳ್ಳಪ್ಪಾಡರಿಗೆ ನಿರ್ಮಿಸಿದ್ದು,

ನಮೋ ಕುಟೀರದ ಗೃಹಪ್ರವೇಶ ಹಾಗು ಫಲಾನುಭವಿ ಕುಟುಂಬಕ್ಕೆ ನೂತನ ಮನೆಯ ಕೀಲಿ ಕೈ ಹಸ್ತಾಂತರ ಕಾರ್ಯಕ್ರಮ ಸತ್ಯನಾರಾಯಣ ಪೂಜೆಯೊಂದಿಗೆ ನಡೆಯಿತು. ಕಾರ್ಯಕ್ರಮದಲ್ಲಿ ಸಂಸದ ಕ್ಯಾ.ಬ್ರಿಜೇಶ್ ಚೌಟ ಮಾತನಾಡಿ, ತನ್ನನ್ನು ಜನರ ಪ್ರಧಾನ ಸೇವಕರೆನ್ನುವ ದೇಶ ಕಂಡ ಅಪರೂಪದ ಪ್ರದಾನಿ ನರೇಂದ್ರ ಮೋದಿಜಿಯವರನ್ನ ಪ್ರೇರಣೆಯಾಗಿಟ್ಟು–ಕೊಂಡು ಅಶಕ್ತ ವರ್ಗದವರಿಗೆ ನಮೋ ಕುಟೀರದ ಹೆಸರಲ್ಲಿ ಮನೆಗಳನ್ನು ಕಟ್ಟಿಸಿ ಕೊಡುತ್ತಿರುವ ಸಂತೋಷ್ ಬೋಳಿಯಾರ್ ಅವರ ಸೇವಾ ಕಾರ್ಯವು ಜಿಲ್ಲೆ ಮಾತ್ರವಲ್ಲದೆ ಇಡೀ ದೇಶಕ್ಕೆ ಮಾದರಿಯಾಗಿದೆ. ನಿರಂತರ ಸೇವಾ ಕಾರ್ಯದ ಮೂಲಕವೇ ಪಕ್ಷ ಸಂಘಟನೆಯನ್ನು ಗಟ್ಟಿಗೊಳಿಸಿರುವ ಅವರಿಗೆ ಭಗವಂತನು ಉತ್ತಮ ಆರೋಗ್ಯ ಕರುಣಿಸಲಿಯೆಂದು ಆಶಿಸಿದ್ರು.

ಮಾಡೂರು ಮರಿಯಣ್ಣಪಾಲು ಶಿವದುರ್ಗಾಂಭ ಮಠದ ಶ್ರೀ ಶಿವಯೋಗಿ ದುರ್ಗಾನಂದ ಸ್ವಾಮೀಜಿಯವರು ಆಶೀರ್ವಚನ ನೀಡಿದರು. ಇನ್ನು ಸಮಾಜ ಸೇವಕ, ಬಿಜೆಪಿ ಮುಖಂಡ ಸಂತೋಷ್ ರೈ ಬೋಳಿಯಾರ್ ಮಾತನಾಡಿ, ಪ್ರಧಾನಿ ಮೋದಿ ಅವರಲ್ಲಿ ನಾನು ಹತ್ತಿರದಿಂದ ಮಾತನಾಡಿದ್ದೇನೆ. ಅವರಲ್ಲಿರುವ ದೇವತಾ ಶಕ್ತಿಯನ್ನು ನಾನು ಗ್ರಹಿಸಿದ್ದೇನೆ.ಅವರ ಹೆಸರಲ್ಲೇ ಅಶಕ್ತ ವರ್ಗದವರಿಗೆ ಹತ್ತು ಮನೆಗಳನ್ನ ನಿರ್ಮಿಸುವ ಯೋಜನೆ ಹಾಕಿದ್ದು, ಇದೀಗ ಏಳು ಮನೆಗಳ ನಿರ್ಮಾಣ ಕಾರ್ಯವು ಸಾಕಾರಗೊಂಡಿದೆ.

> ಸಂತೋಷ್ ಬೋಳಿಯಾರ್ ಅವರು ರಾಜಕೀಯ ರಂಗದಲ್ಲಿದ್ದರೂ ಸಹ ಅಧಿಕಾರಕ್ಕೆ ಆಸೆ ಪಡದೆ ತನ್ನನ್ನ ಸದಾ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿದ್ದಾರೆ.ಅನಾರೋಗ್ಯದಲ್ಲೂ ಅವರ ಧ್ವನಿಯಲ್ಲಿ ಇಂದಿಗೂ ನಿರಾಸೆ ಎಂಬುದೇ ಕಾಣುತ್ತಿಲ್ಲ. ಈಗಲೂ ಅವರ ಸಂಕಲ್ಪ ಶಕ್ತಿಯು ಸಧೃಡವಾಗಿದೆ.ಸಮಾಜಕ್ಕೆ ಮತ್ತು ಸೇವೆ ನೀಡುವ ಉದ್ದೇಶದಿಂದ ಕಾಯಿಲೆಯಿಂದ ಸಂಪೂರ್ಣ ಗುಣಮುಖರಾಗಿ ಬರುವ ಇಂಗಿತ ಅವರದ್ದಾಗಿದೆ.ಅವರ ಪ್ರೇರಣೆಯಿಂದಲೇ ಇದೀಗ ಅನೇಕ ಮಂದಿ ಸಹೃದಯಿಗಳು ಸಮಾಜದ ಆಶಕ್ತರಿಗೆ ಮನೆಗಳನ್ನು ಕಟ್ಟಿಕೊಡಲು ಮುಂದೆ ಬರುತ್ತಿರುವುದು ಶ್ಲಾಘನೀಯ.
>
> ■ ಪಿ.ಎಸ್.ಪ್ರಕಾಶ್ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ದಕ್ಷಿಣ ಪ್ರಾಂತ ಸಹಕಾರ್ಯವಾಹ

ನಿಮ್ಮೆಲ್ಲರ ಆಶೀರ್ವಾದದಿಂದ ಕಾಯಿಲೆಯಿಂದ ತೊಂಭತ್ತು ಶೇಕಡದಷ್ಟು ಗುಣಮುಖನಾಗಿದ್ದೇನೆ ಎಂದ್ರು. ಇನ್ನು ಈ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯರಾದ ಕಿಶೋರ್ ಕುಮಾರ್ ಪುತ್ತೂರು, ಬಿಜೆಪಿ ಜಿಲ್ಲಾಧ್ಯಕ್ಷರಾದ ಸತೀಶ್ ಕುಂಪಲ ಮಾಜಿ ಮೇಯರ್ ಪ್ರೇಮಾನಂದ ಶೆಟ್ಟಿ, ಹಿರಿಯ ಬಿಜೆಪಿ ಮುಖಂಡ ಸೀತಾರಾಮ ಬಂಗೇರ, ಕೈರಂಗಳ ಶಾರದಾ ಗಣಪತಿ ವಿದ್ಯಾ ಕೇಂದ್ರದ ಸಂಚಾಲಕರಾದ ಟಿ.ಜಿ ರಾಜಾರಾಮ್ ಭಟ್, ಬಿಜೆಪಿ ಕ್ಷೇತ್ರ ಪ್ರಧಾನ ಕಾರ್ಯದರ್ಶಿ ಮೋಹನ್ ರಾಜ್, ಜಿಲ್ಲಾ ಸ್ವಚ್ಛತಾ ರಾಯಭಾರಿ ಶೀನ ಶೆಟ್ಟಿ, ನಿವೃತ್ತ ಮುಖ್ಯ ಶಿಕ್ಷಕ ರವೀಂದ್ರ ರೈ ಕಲಿಮಾರ್, ಪ್ರಮುಖರಾದ ದಿನೇಶ್ ಶರ್ಮ, ಬಿಜೆಪಿ ಮುಖಂಡರಾದ ಚಂದ್ರಶೇಖರ್ ಉಚ್ಚಿಲ್, ಚಂದ್ರಹಾಸ್ ಉಳ್ಳಾಲ್, ಉದ್ಯಮಿ ದಿನೇಶ್ ಎಮ್.ಪಿ, ದೈವಜ್ಞರಾದ ↘ 2ನೇ ಪುಟಕ್ಕೆ

# ಕುಡಿಯುವ ನೀರು ಸ್ಥಗಿತ, ಅನುದಾನ ಬೇರೆ ವಾರ್ಡ್‌ಗೆ ಮೀಸಲಿಡಲು ಆಕ್ಷೇಪ



**ಕೋಟೆಕಾರ್:** ಉಳ್ಳಾಲ, ತುಂಬೆ ಯಿಂದ ಪೂರೈಕೆ ಆಗುವ ಕುಡಿಯುವ ನೀರು ಸ್ಥಗಿತ. ಮೂರನೇ ವಾರ್ಡ್‌ನ ಅನುದಾನ ವನ್ನು ನಾಲ್ಕನೇ ವಾರ್ಡ್‌ಗೆ ಮೀಸಲಿಡುವುದಕ್ಕೆ ಆಕ್ಷೇಪ ವಿಚಾರದಲ್ಲಿ ವ್ಯಾಪಕ ಚರ್ಚೆ ಕೋ–ಟೆಕಾರ್ ಪಟ್ಟಣ ಪಂಚಾಯತ್ ಸಾಮಾನ್ಯ ಸಭೆಯಲ್ಲಿ ನಡೆಯಿತು.

ಕೋಟೆಕಾರ್ ಪಟ್ಟಣ ಪಂಚಾಯತ್ ಅಧ್ಯಕ್ಷ ದಿವ್ಯ ಸತೀಶ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಸುಜಿತ್ ಮಾಡೂರು, ಕುಡಿಯುವ ನೀರು ಸರಬರಾಜು ಬಗ್ಗೆ ಸಭೆ ಮಾಡಿದ್ದೇವೆ ಈ ಬಗ್ಗೆ ಅಧಿಕಾರಿಗಳಿಗೆ ಯಾಕೆ ತಿಳಿಸಿಲ್ಲ ಎಂದು ಪ್ರಶ್ನಿಸಿದರು.

ಅಮೃತ್ 2.0 ಕುಡಿಯುವ ನೀರಿನ ಬಗ್ಗೆ ನಡೆಸಿದ ಸಭೆಯ ವಿಚಾರವನ್ನು ಇಂಜಿನಿಯರ್ ಶೋಭಾ ಲಕ್ಷ್ಮಿ ತಿಳಿಸಿದ್ದೇವೆ. ಈ ಬಾರಿ ಸಭೆಗೆ ಬರಲು ಆಗುವುದಿಲ್ಲ ಎಂದು ಅವರು ಮಾಹಿತಿ ನೀಡಿದ್ದಾರೆ ಎಂದು ಮುಖ್ಯಾಧಿಕಾರಿ ಮಾಲಿನಿ ಹೇಳಿದರು. ನಮ್ಮ ವಾರ್ಡ್‌ಗೆ ನೀರಿಲ್ಲ, ಪೈಪ್ ಲೈನ್ ಆಗಿಲ್ಲ ಈ ವ್ಯವಸ್ಥೆ ಪರಿಹಾರ ಮಾಡಿ ಕೌನ್ಸಿಲರ್ ಸಲೀಮಾ ಆಗ್ರಹಿಸಿದರು.

ಅಮೃತ್ 2.0 ಕುಡಿಯುವ ನೀರಿನ ಸಂಪರ್ಕ ಸ್ಥಗಿತ ಮಾಡುವಾಗ ನಮಗೆ ಸಂಬಂಧಪಟ್ಟವರು ತಿಳಿಸಿಲ್ಲ ಈ ರೀತಿ ಮಾಡಿದರೆ ಎಲ್ಲರಿಗೂ ತೊಂದರೆ ಆಗುತ್ತದೆ. ಮಾಹಿತಿ ನೀಡಿದರೆ ನಾವು ನೀರಿನ ವ್ಯವಸ್ಥೆ ಮಾಡುತ್ತೇವೆ ಎಂದು ಧೀರಜ್ ಹೇಳಿದರು.

ಗೇಟ್ ವಾಲ್ ಇರುವ ಜಾಗದಲ್ಲಿ ಬೆಳೆದಿರುವ ಹು ಳ್ಳು ತೆರವು ಮಾಡಬೇಕು.ನೀರು ಸ್ಥಗಿತ ಮಾಡುವಾಗ ನಮಗೆ ಮಾಹಿತಿ ನೀಡಬೇಕು. ಇಂಜಿನಿಯರ್ ಮಾಹಿತಿ ನೀಡದ ಕಾರಣ ತೊಂದರೆ ಆಗಿದೆ.ಮುಂದಿನ ಹಂತದಲ್ಲಿ ಇಂತಹ ಸಮಸ್ಯೆ ಆಗಬಹುದು ಎಂದು ಕಿರಿಯ ಅಭಿಯಂತರರು ದಿನೇಶ್‌ಗೆ ಅಧ್ಯಕ್ಷ ದಿವ್ಯ ಸತೀಶ್ ಸೂಚನೆ ನೀಡಿದರು.

ನೀರಿನ ಸಮಸ್ಯೆ ಬಗ್ಗೆ ಈ ಹಿಂದೆ ಸಭೆ ನಡೆದಿದೆ. ಈ ಸಭೆಯಲ್ಲಿ ಬಹಳಷ್ಟು ವಿಚಾರ ಚರ್ಚೆ ಆಗಿದೆ. ಇದನ್ನು ಈ ಸಭೆಯ ನೋಟೀಸ್ ನಲ್ಲಿ ಯಾಕೆ ಪ್ರಸ್ತಾಪ ಮಾಡಿಲ್ಲ ನೀರಿಗೆ ಸಂಬಂಧಿಸಿ ನಡೆಸಿದ ಸಭೆ ಅನೌಪಚಾರಿಕವೇ ಎಂದು ಸುಜಿತ್ ಮಾಡೂರು ಪ್ರಶ್ನಿಸಿದರು.

ನೀರಿನ ಸಮಸ್ಯೆ, ಪರಿಹಾರ ಮಾಡುವ ಕುರಿತು ನಡೆಸಿದ ಸಭೆ ಅನೌಪಚಾರಿಕ ಅಲ್ಲ.ಆ ಸಭೆಯಲ್ಲಿ ನಡೆದ ಚರ್ಚೆ ಯ ಬಗ್ಗೆ ನಿರ್ಣಯ ಮಾಡಲಿಕ್ಕಿದೆ.ತುಂಬೆ ಯಿಂದ ಪೂರೈಕೆ ಆಗುವ ನೀರಿನ ಸಂಪರ್ಕ ಆಗದ ಕೆಲವು ಮನೆಗಳಿವೆ. ಈ ಮನೆಗಳ ಸಮಸ್ಯೆ ಇತ್ಯರ್ಥ ಆಗಬೇಕು ಎಂದು ಅಧ್ಯಕ್ಷ ದಿವ್ಯ ಸತೀಶ್ ಹೇಳಿದರು.

ಕೋ.ಪ.ಪಂ.ನ ನಾಲ್ಕನೇ ವಾರ್ಡ್ನ ಬಲ್ಯ ಪರಿಸರದ ನಾಗರಿಕರು ಪ.ಪಂ ನಿಧಿಯಿಂದ ತಮ್ಮ ವಾರ್ಡ್ ಅಭಿವೃದ್ಧಿ ಗಾಗಿ ಮೀಸಲಿಟ್ಟ ಐದು ಲಕ್ಷ ರೂ.ಅನುದಾನವನ್ನ ವಾರ್ಡ್ ಸದಸ್ಯ ಕಿರಣ್ ಪಕ್ಕದ ಮೂರನೇ ವಾರ್ಡಿನ ಮಾಡೂರು ಸರಕಾರಿ ಪ್ರಾಥಮಿಕ ಶಾಲೆಯ ಅಭಿವೃದ್ಧಿಗೆ ನೀಡಲು ಮುಂದಾಗಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಹದಿನೈದು ಜನರ ಸಹಿ ಸಂಗ್ರಹದ ಮನವಿ ಪತ್ರವನ್ನ ಪ.ಪಂ ಗೆ ನೀಡಿದ್ದು, ಅವರ ಮನವಿಯನ್ನು ತಿರಸ್ಕರಿಸಿ ಅನುದಾನವನ್ನ ನಾಲ್ಕನೇ ವಾರ್ಡ್ ಅಭಿವೃದ್ಧಿಗೆ ಮೀಸಲಿಡಬೇಕೆಂದು ಪ.ಪಂ ಅಧ್ಯಕ್ಷರಿಗೆ ಕೌನ್ಸಿಲರ್ ಕಿರಣ್ ನೀಡಿರುವ ಮನವಿ ಪತ್ರದ ಬಗ್ಗೆ ಸಭೆಯಲ್ಲಿ ಮುಖ್ಯಾಧಿಕಾರಿ ಮಾಲಿನಿ ಪ್ರಸ್ತಾಪಿಸಿದಾಗ ವ್ಯಾಪಕ ಚರ್ಚೆ ನಡೆಯಿತು.

### ಮಂಜನಾಡಿ ಕೊಪ್ಪಳ ದುರಂತ ಸ್ಥಳಕ್ಕೆ ದ.ಕ. ಜಿಲ್ಲಾಧಿಕಾರಿ ದರ್ಶನ್ ಭೇಟಿ

## ಅಶ್ವಿನಿಗೆ 5ಸೆಂಟ್ಸ್ ಜಾಗ ನೀಡುವ ಭರವಸೆ



**ಉಳ್ಳಾಲ:** ಮಂಜನಾಡಿ ಕೊಪ್ಪಳದಲ್ಲಿ ಮನೆ ಕುಸಿದು ಇಬ್ಬರು ಮಕ್ಕಳನ್ನು ಹಾಗೂ ಎರಡೂ ಕಾಲುಗಳನ್ನು ಕಳೆದುಕೊಂಡ ಅಶ್ವಿನಿ ಅವರ ಕುಟುಂಬದ ದುರಂತಕ್ಕೆ ಕಾರಣವಾದ ಎನ್ನಲಾಗಿರುವ ಅವೈಜ್ಞಾನಿಕ ಕಾಮಗಾರಿಯ ಸತ್ಯಾಸತ್ಯತೆ ಪರಿಶೀಲಿಸಲು ದಕ್ಷಿಣ ಕನ್ನಡ

**ಅವೈಜ್ಞಾನಿಕ ಕಾಮಗಾರಿ ಪರಿಶೀಲನೆ**

ಜಿಲ್ಲಾಧಿಕಾರಿ ದರ್ಶನ್ ಅವರು ಇಂದು ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ಸಂದರ್ಭ ಅಶ್ವಿನಿ ಅವರಿಗೆ ವಾಸ್ತವ್ಯಕ್ಕಾಗಿ ತಕ್ಷಣವೇ 5 ಸೆಂಟ್ಸ್ ಜಾಗ ಒದಗಿಸುವ ಭರವಸೆ ನೀಡಿದ ಜಿಲ್ಲಾಧಿಕಾರಿ, ಈ ಸಂಬಂಧ ಸಂಪೂರ್ಣ ಪ್ರಸ್ತಾವನೆ (ಟೋಟಲ್ ಪ್ರಪೋಸಲ್) ಸಿದ್ಧಪಡಿಸಿ ಶೀಘ್ರವೇ ಜಿಲ್ಲಾಧಿಕಾರಿ ಕಚೇರಿಗೆ ಸಲ್ಲಿಸುವಂತೆ ತಾಲೂಕು ತಹಶೀಲ್ದಾರ್ ಅವರಿಗೆ ಸೂಚಿಸಿದರು.

ಮೇ30, 2025ರಲ್ಲಿ ದುರಂತ ಸಂಭವಿಸಿತ್ತು. ಇದೀಗ ಒಂದು ವರ್ಷಗಳ ಬಳಿಕ ಜಿಲ್ಲಾಧಿಕಾರಿಗಳ ಮೊದಲ ಭೇಟಿಯಾಗಿದೆ. ಅಶ್ವಿನಿ ಅವರ ಸಹೋದರ ಪವನ್ ಕುಮಾರ್ ಅವರು ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಿ, ಘಟನೆ ಬಳಿಕ ಸರ್ಕಾರದಿಂದ ನಿರೀಕ್ಷಿತ ಸ್ಪಂದನೆ ದೊರೆತಿಲ್ಲ ಎಂದು ಮನವರಿಕೆ ಮಾಡಿದರು. ಕುಟುಂಬಕ್ಕೆ ರಸ್ತೆ ಬದಿಯಲ್ಲೇ ವಾಸ್ತವ್ಯಕ್ಕೆ ಅನುಕೂಲವಾಗುವ ಸ್ಥಳ ಕಲ್ಪಿಸಬೇಕು ಎಂದು ಮನವಿ ಮಾಡಿದರು. ಇದೇ ವೇಳೆ, ಕಾಮಗಾರಿ ↘ 2ನೇ ಪುಟಕ್ಕೆ

## ಸಂಪ್ರದಾಯ, ಸಂಸ್ಕೃತಿಯ ಭಾಗವಾಗಿ ಸಮುದ್ರ ಆರಾಧನೆ: ಯಶವಂತ್ ಅಮೀನ್



**ಉಳ್ಳಾಲ:** ಮೊಗವೀರ ಸಂಘದ ಸಹಕಾರದೊಂದಿಗೆ ಶ್ರೀವಿಠೋಭ ರುಖುಮಾಯಿ ಭಜನಾ ಮಂದಿರದ ವತಿಯಿಂದ ನಡೆಯುವ 93ನೇ ವರ್ಷದ ಸಮುದ್ರ ಪೂಜೆ ಗುರುವಾರ ಸಂಜೆ ಸಂಪನ್ನಗೊಂಡಿದೆ. ಮೊಗವೀರಪಟ್ಟದ ಶ್ರೀ ವಿಠೋಭ ರುಖುಮಾಯಿ ಮಂದಿರಲ್ಲಿ ಸೂರ್ಯೋದಯ–ಕ್ಕೆ ದೇವರಿಗೆ ಹಾಲನ್ನಿಟ್ಟು ಪ್ರಾರ್ಥನೆಯೊಂದಿಗೆ ಭಜನಾ ಸಂಕೀರ್ತನೆಯೊಂದಿಗೆ ಸೂರ್ಯಾಸ್ತಕ್ಕೆ ಮಂದಿರದಿಂದ ಮೊಗವೀರಪಟ್ಟ ಸಮುದ್ರ ತೀರದವರೆಗೆ ಮೆರವಣಿಗೆಯಲ್ಲಿ ಆಗಮಿಸಿ ಕಡಲರಾಜನಿಗೆ ಗಂಗಾ ಮಾತೆಗೆ ಹೂ, ಹಣ್ಣು ಕಾಯಿ ಸೀಯಾಳ ಹಾಲನ್ನ ಸಮರ್ಪಿಸಿ ಹೆಚ್ಚಿನ ರೀತಿಯ ಮತ್ತೆ ಸಂಪತ್ತು ಸಿಗಲಿ ಎಂದು ಪ್ರಾರ್ಥಿಸಲಾಯಿತು. ಉಳ್ಳಾಲ ಮೊಗವೀರ ಸಂಘದ ಅಧ್ಯಕ್ಷ ಯಶವಂತ್ ಅಮೀನ್ ಮಾತನಾಡಿ 'ಪ್ರಕೃತಿ ಆರಾಧನೆಯಂತೆ ↘ 2ನೇ ಪುಟಕ್ಕೆ

ನಿಮ್ಮ ಉಳ್ಳಾಲವಾಣಿ
ಒಂದು ವರ್ಷದ ಚಂದಾ ದರ
₹250/- ಮಾತ್ರ
G Pay
ನಿಮ್ಮ ಸಹಕಾರವೇ ನಮ್ಮ ಶಕ್ತಿ.
ನಿಮ್ಮ ಉಳ್ಳಾಲವಾಣಿ ನಿಮ್ಮದೇ ಪತ್ರಿಕೆ.

### ತೊಕ್ಕೊಟ್ಟು ಫ್ರೀಡಂ ಫ್ರಮ್ ಪ್ಲಾಸ್ಟಿಕ್ ಅಭಿಯಾನದಲ್ಲಿ ಬಟ್ಟೆ ಚೀಲಗಳ ವಿತರಣೆ

# ಬಯಲು ಶೌಚಮುಕ್ತ ಜಿಲ್ಲೆ; ಇದೀಗ ಬಯಲು ಕಸಾಲಯವಾಗಿ ರೂಪಗೊಂಡಿದೆ : ಮಾಜಿ ಒಂಬುಡ್ಸ್ ಮೆನ್ ಶೀನ ಶೆಟ್ಟಿ ಆತಂಕ

**ಉಳ್ಳಾಲ:** ಬಯಲು ಶೌಚಮುಕ್ತ ಜಿಲ್ಲೆಯಾಗಿದ್ದ ಪ್ರದೇಶ ಇಂದು ಬಯಲು ಕಸಾಲಯವಾಗಿ ರೂಪುಗೊಳ್ಳುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಕಸಾಲಯವೇ ವಿಷಾಲಯವಾಗಿ, ವಿಷಾಲಯವೇ ಬಹುದೊಡ್ಡ ಸಮಸ್ಯೆಯಾಗಿದೆ. ಸೆ.18 ರ ಸಚಿವರ ಸಂಪುಟದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏಕಬಳಕೆ ಪ್ಲಾಸ್ಟಿಕ್ ಸಂಪೂರ್ಣ ವಾಗಿ ಉತ್ಪಾದನೆ ನಿಲ್ಲಿಸುವ ಕುರಿತು ಮುಖ್ಯಮಂತ್ರಿಯವರ ಗಮನಕ್ಕೆ ತರಬೇಕು ಎಂದು ಆರೋಗ್ಯ ಸಚಿವರ ಮೂಲಕ ಮನವಿ ಮಾಡಲಾಗಿದೆ. ಸಚಿವರು ಏಕಬಳಕೆ ಪ್ಲಾಸ್ಟಿಕ್ ಉತ್ಪಾದನೆ ನಿಲ್ಲಿಸುವ ಕುರಿತು ಭರವಸೆ ನೀಡಿದ್ದಾರೆ ಎಂದು ಜಿಲ್ಲಾ ಸ್ವಚ್ಛತಾ ರಾಯಭಾರಿ, ಮಾಜಿ ಒಂಬುಡ್ಸ್ ಮೆನ್ ಶೀನ ಶೆಟ್ಟಿ ಹೇಳಿದ್ದಾರೆ.



ದ.ಕ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್, ಸ್ವಚ್ಛ ಭಾರತ್ ಮಿಷನ್ ಮಂಗಳೂರು, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಉಳ್ಳಾಲ, ಉಳ್ಳಾಲ ಪ್ರೆಸ್ ಕ್ಲಬ್ , ಹಸಿರುದಳ ಮಂಗಳೂರು ನೇತೃತ್ವದಲ್ಲಿ ತೊಕ್ಕೊಟ್ಟು ಜಂಕ್ಷನ್ನಿನಲ್ಲಿ ಹಮ್ಮಿಕೊಂಡ ಫ್ರೀಡಂ ಫ್ರಮ್ ಪ್ಲಾಸ್ಟಿಕ್ ಅಭಿಯಾನಕ್ಕೆ ಹಳೇ ಬಟ್ಟೆಗಳನ್ನು ಹಸಿರುದಳಕ್ಕೆ ಹಸ್ತಾಂತರಿಸುವ ಮುಖೇನ ಚಾಲನೆ ನೀಡಿ ಮಾತನಾಡಿದರು.

ಪ್ಲಾಸ್ಟಿಕ್ ತ್ಯಾಜ್ಯ ಪರಿಸರಕ್ಕೆ ದೊಡ್ಡ ಅಪಾಯವಾಗಿ ↘ 2ನೇ ಪುಟಕ್ಕೆ

**ಪ್ಲಾಸ್ಟಿಕ್ ಚೀಲ ಪಡೆದು ಬಟ್ಟೆ ಚೀಲ ಹಂಚಿದರು**

ಜಂಕ್ಷನ್‌ನಲ್ಲಿ ಪ್ಲಾಸ್ಟಿಕ್ ಚೀಲಗಳನ್ನು ಹೊಂದಿದ್ದ ಸಾರ್ವಜನಿಕರನ್ನು ಗುರುತಿಸಿದ ಸದಸ್ಯರು ಹಾಗೂ ಪತ್ರಕರ್ತರು ಅವರಿಂದ ಪ್ಲಾಸ್ಟಿಕ್ ಚೀಲಗಳನ್ನು ಪಡೆದುಕೊಂಡು, ಅವರಿಗೆ ಉಚಿತವಾಗಿ ಬಟ್ಟೆ ಚೀಲಗಳನ್ನು ಹಸ್ತಾಂತರಿಸುವ ಮೂಲಕ ಪ್ಲಾಸ್ಟಿಕ್ ಬಳಕೆ ತ್ಯಜಿಸುವಂತೆ ಮನವಿ ಮಾಡಿದರು.

ಅಭಿಯಾನದ ಸಂದರ್ಭದಲ್ಲಿ 100ಕ್ಕೂ ಅಧಿಕ ಮಂದಿಯಿಂದ ಪ್ಲಾಸ್ಟಿಕ್ ಚೀಲಗಳನ್ನು ಸಂಗ್ರಹಿಸಿ, ಅದರ ಬದಲಾಗಿ ಬಟ್ಟೆ ಚೀಲಗಳನ್ನು ವಿತರಿಸಲಾಯಿತು. ಸಾರ್ವಜನಿಕರಲ್ಲಿ ಪರಿಸರ ಸಂರಕ್ಷಣೆ ಹಾಗೂ ಏಕಬಳಕೆ ಪ್ಲಾಸ್ಟಿಕ್ ಬಳಕೆಯಿಂದಾಗುವ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸಲಾಯಿತು.

ಇದೇ ವೇಳೆ ಬಸ್‌ಗಳೊಳಗೂ ತೆರಳಿದ ವಿದ್ಯಾರ್ಥಿಗಳು, ಅಭಿಯಾನದ ಸದಸ್ಯರು ಹಾಗೂ ಪತ್ರಕರ್ತರು ಪ್ರಯಾಣಿಕರಿಗೆ ಬಟ್ಟೆ ಚೀಲಗಳನ್ನು ವಿತರಿಸಿ, ಪ್ಲಾಸ್ಟಿಕ್ ಚೀಲಗಳ ಬಳಕೆಯನ್ನು ಸಂಪೂರ್ಣವಾಗಿ ತ್ಯಜಿಸುವಂತೆ ಮನವಿ ಮಾಡಿದರು.ಪ್ಲಾಸ್ಟಿಕ್ ಚೀಲಕ್ಕೆ ಪರ್ಯಾಯವಾಗಿ ಬಟ್ಟೆ ಚೀಲವನ್ನು ಬಳಸುವ ಮೂಲಕ ಪರಿಸರ ಸಂರಕ್ಷಣೆಗೆ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂಬ ಸಂದೇಶವನ್ನು ಅಭಿಯಾನದ ಮೂಲಕ ↘ 2ನೇ ಪುಟಕ್ಕೆ

## ಸಂಪಾದಕೀಯ

# ಶ್ರೇಷ್ಠತೆಯ ಮನಃಸ್ಥಿತಿ ಇನ್ನೂ ಏಕೆ?

ಸುಪರೇಟಿಸಂ ಅಂದರೆ "ನಾವು ಬೇರೆ, ನಾವು ಶ್ರೇಷ್ಠರು" ಎಂಬ ವಿಭಜನೆಯ ಮನಸ್ಥಿತಿ – ಇಂದಿಗೂ ನಮ್ಮ ಸಮಾಜದಲ್ಲಿ ಬೇರೆ ಬೇರೆ ರೂಪಗಳಲ್ಲಿ ಜೀವಂತವಾಗಿದೆ. ಕಾಲ ಬದಲಾಗಿದೆ, ಶಿಕ್ಷಣದ ಮಟ್ಟ ಹೆಚ್ಚಾಗಿದೆ, ತಂತ್ರಜ್ಞಾನ ನಮ್ಮನ್ನು ಹತ್ತಿರಕ್ಕೆ ತಂದಿದೆ, ಸಾಮಾಜಿಕ ಮಾಧ್ಯಮಗಳು ಜಗತ್ತನ್ನೇ ಒಂದು ಸಣ್ಣ ಹಳ್ಳಿಯನ್ನಾಗಿ ಮಾಡಿವೆ. ಆದರೂ ಮನುಷ್ಯನ ಮನಸ್ಸಿನೊಳಗೆ ಬೆಳೆದಿರುವ ಕೆಲವು ಹಳೆಯ ಗೋಡೆಗಳು ಇನ್ನೂ ಸಂಪೂರ್ಣವಾಗಿ ಕುಸಿದಿಲ್ಲ.

ಧರ್ಮ ಬದಲಾದರೂ, ಭಾಷೆ ಬದಲಾದರೂ, ರಾಜಕೀಯ ಬದಲಾದರೂ, "ನಾವೇ ಶ್ರೇಷ್ಠರು" ಎಂಬ ಮನಸ್ಥಿತಿ ಬದಲಾಗದಿದ್ದರೆ ನಿಜವಾದ ಸಾಮಾಜಿಕ ಸಮಾನತೆ ಸಾಧ್ಯವಿಲ್ಲ. ಧರ್ಮದ ಮೂಲ ಆಶಯ ಮನುಷ್ಯನನ್ನು ಉತ್ತಮಗೊಳಿಸುವುದಾಗಿದ್ದರೂ, ಕೆಲವೊಮ್ಮೆ ಅದೇ ಧರ್ಮದ ಹೆಸರಿನಲ್ಲಿ ಮನುಷ್ಯರು ತಮ್ಮದೇ ಗುಂಪನ್ನು ಶ್ರೇಷ್ಠವೆಂದು ಭಾವಿಸುವ ಸ್ಥಿತಿಗೆ ತಲುಪುತ್ತಾರೆ. ಇದು ಯಾವುದೇ ಒಂದು ಧರ್ಮಕ್ಕೆ ಮಾತ್ರ ಸೀಮಿತವಾದ ಸಮಸ್ಯೆಯಲ್ಲ. ಇದು ಮನುಷ್ಯನ ಮನಸ್ಥಿತಿಗೆ ಸಂಬಂಧಿಸಿದ ಪ್ರಶ್ನೆ.

ಮುಸ್ಲಿಂ ಸಮಾಜದಲ್ಲಿಯೂ "ನಾವೇ ಶ್ರೇಷ್ಠ ವರ್ಗ" ಎಂಬ ಭಾವನೆ ಕೆಲವರಲ್ಲಿ ಕಾಣಿಸಿಕೊಳ್ಳಬಹುದು. ಅದೇ ರೀತಿ ಹಿಂದೂ ಸಮಾಜದ ವಿವಿಧ ಜಾತಿ, ವರ್ಗ ಮತ್ತು ಸಮುದಾಯಗಳಲ್ಲಿಯೂ "ನಾವೇ ಮೇಲಿನವರು, ನಾವೇ ಶ್ರೇಷ್ಠರು" ಎಂಬ ಮನೋಭಾವ ಇನ್ನೂ ಕೆಲವು ಕಡೆಗಳಲ್ಲಿ ಉಳಿದಿದೆ. ಕ್ರಿಶ್ಚಿಯನ್ ಸಮಾಜವೂ ಈ ಮನಸ್ಥಿತಿಯಿಂದ ಸಂಪೂರ್ಣ ಹೊರತಾಗಿಲ್ಲ. ಧರ್ಮದ ಹೆಸರಿನಲ್ಲಿ ನೇರವಾಗಿ ವ್ಯಕ್ತವಾಗದಿದ್ದರೂ, ಸಮುದಾಯ, ಕುಟುಂಬದ ಹಿನ್ನೆಲೆ, ಆರ್ಥಿಕ ಸ್ಥಿತಿ, ಶಿಕ್ಷಣ, ಉದ್ಯೋಗ, ಸಾಮಾಜಿಕ ಸ್ಥಾನಮಾನ ಅಥವಾ ಪ್ರಭಾವದ ಆಧಾರದ ಮೇಲೆ "ನಾವು ಅವರಿಗಿಂತ ಮೇಲು" ಎಂಬ ಭಾವನೆ ರೂಪುಗೊಳ್ಳಬಹುದು.

ಹೀಗಾಗಿ ಇದನ್ನು ಕೇವಲ ಧರ್ಮದ ಪ್ರಶ್ನೆಯಾಗಿ ನೋಡುವುದು ಸರಿಯಲ್ಲ. ಇದು ಜಾತಿಯ ಪ್ರಶ್ನೆಯೂ ಮಾತ್ರವಲ್ಲ. ಇದು ಮೂಲತಃ ಮಾನಸಿಕತೆಯ ಪ್ರಶ್ನೆ.

ತನ್ನ ಧರ್ಮದ ಬಗ್ಗೆ ಹೆಮ್ಮೆ ಹೊಂದುವುದು ತಪ್ಪಲ್ಲ. ತನ್ನ ಜಾತಿ, ಸಂಸ್ಕೃತಿ, ಪರಂಪರೆ, ಭಾಷೆ ಅಥವಾ ಸಮುದಾಯದ ಬಗ್ಗೆ ಗೌರವ ಹೊಂದುವುದೂ ಸಹಜ. ಆದರೆ ಆ ಹೆಮ್ಮೆ ಮತ್ತೊಬ್ಬರನ್ನು ಕೀಳಾಗಿ ನೋಡುವ ಹಂತಕ್ಕೆ ತಲುಪಿದಾಗ, ಅದು ಹೆಮ್ಮೆಯಾಗಿರುವುದಿಲ್ಲ; ಅದು ಶ್ರೇಷ್ಠತೆಯ ಅಹಂಕಾರವಾಗುತ್ತದೆ. "ನನ್ನದು ಶ್ರೇಷ್ಠ" ಎನ್ನುವ ಭಾವನೆ ಒಂದು ಹಂತದವರೆಗೆ ವೈಯಕ್ತಿಕ ನಂಬಿಕೆಯಾಗಿರಬಹುದು. ಆದರೆ "ನನ್ನದು ಶ್ರೇಷ್ಠ, ಆದ್ದರಿಂದ ನಿನ್ನದು ಕೀಳು" ಎನ್ನುವ ಕ್ಷಣದಿಂದಲೇ ವಿಭಜನೆಯ ಬೀಜ ಬಿತ್ತಲ್ಪಡುತ್ತದೆ. ಅಲ್ಲಿಂದಲೇ ದ್ವೇಷ, ಅಸಹನೆ, ಅಂತರ, ಪೂರ್ವಾಗ್ರಹ ಮತ್ತು ಸಂಘರ್ಷಗಳಿಗೆ ದಾರಿ ತೆರೆದುಕೊಳ್ಳುತ್ತದೆ.

ಇಂತಹ ಮನಸ್ಥಿತಿ ಕುಟುಂಬದಲ್ಲಿಯೇ ಆರಂಭವಾಗಬಹುದು. ಮಕ್ಕಳು ದೊಡ್ಡವರ ಮಾತುಗಳನ್ನು ಗಮನಿಸುತ್ತಾರೆ. ನಾವು ಮತ್ತೊಂದು ಸಮುದಾಯದ ಬಗ್ಗೆ ಹೇಗೆ ಮಾತನಾಡುತ್ತೇವೆ, ಮತ್ತೊಂದು ಜಾತಿಯ ವ್ಯಕ್ತಿಯನ್ನು ಹೇಗೆ ಕರೆಯುತ್ತೇವೆ, ಬಡವನನ್ನು ಹೇಗೆ ನೋಡುತ್ತೇವೆ, ಬೇರೆ ಧರ್ಮದ ವ್ಯಕ್ತಿಯ ಬಗ್ಗೆ ಯಾವ ರೀತಿಯ ಅಭಿಪ್ರಾಯ ವ್ಯಕ್ತಪಡಿಸುತ್ತೇವೆ. ಇವೆಲ್ಲವೂ ಮಕ್ಕಳ ಮನಸ್ಸಿನ ಮೇಲೆ ಪರಿಣಾಮ ಬೀರುತ್ತವೆ. ಹೀಗಾಗಿ ಸಾಮಾಜಿಕ ಸಮಾನತೆಯ ಪಾಠವನ್ನು ಕೇವಲ ಶಾಲೆಗಳಲ್ಲಿ ಕಲಿಸಿದರೆ ಸಾಲದು; ಅದು ಮನೆಯ ಮಾತುಕತೆಯಿಂದಲೇ ಆರಂಭವಾಗಬೇಕು.

ದುರಂತವೆಂದರೆ, ಈ ಸೂಕ್ಷ್ಮ ಸಾಮಾಜಿಕ ವಾಸ್ತವವನ್ನು ಅರಿಯದ ಅನೇಕ ಮುಗ್ಧರು ರಾಜಕೀಯ ಗೊಂದಲಗಳ ನಡುವೆ ಸಿಲುಕಿಕೊಳ್ಳುತ್ತಿದ್ದಾರೆ. ಒಬ್ಬರ ಭಾವನೆಗಳನ್ನು ಮತ್ತೊಬ್ಬರ ವಿರುದ್ಧ ಬಳಸುವುದು, ಒಂದು ಸಮುದಾಯದ ಭಯವನ್ನು ಇನ್ನೊಂದು ಸಮುದಾಯದ ವಿರುದ್ಧ ತಿರುಗಿಸುವುದು, ಇತಿಹಾಸದ ನೋವುಗಳನ್ನು ಇಂದಿನ ಜನರ ಮೇಲೆ ಹೊರೆಸುವುದು. ಇವೆಲ್ಲವೂ ಸಮಾಜವನ್ನು ಮತ್ತಷ್ಟು ವಿಭಜಿಸುತ್ತವೆ. ರಾಜಕೀಯವು ಜನರ ಭಾವನೆಗಳನ್ನು ಬಳಸಿಕೊಳ್ಳಬಹುದು; ಆದರೆ ಅದರ ಬೆಲೆಯನ್ನು ಅಂತಿಮವಾಗಿ ಸಮಾಜವೇ ತೆರಬೇಕಾಗುತ್ತದೆ.

ಚುನಾವಣೆ ಮುಗಿದ ನಂತರ ರಾಜಕಾರಣಿಗಳು ತಮ್ಮ ರಾಜಕೀಯ ಬದುಕಿನತ್ತ ಮುಂದುವರಿಯುತ್ತಾರೆ. ಆದರೆ ಜನರ ನಡುವೆ ಬಿತ್ತಲ್ಪಟ್ಟ ಅನುಮಾನ, ದ್ವೇಷ ಮತ್ತು ಅಂತರ ಅಷ್ಟು ಸುಲಭವಾಗಿ ಮಾಯವಾಗುವುದಿಲ್ಲ. ಒಮ್ಮೆ ನೆರೆಹೊರೆಯವನನ್ನು ಅನುಮಾನದಿಂದ ನೋಡುವ ಮನಸ್ಥಿತಿ ಬೆಳೆದರೆ, ಅದನ್ನು ಮತ್ತೆ ವಿಶ್ವಾಸವಾಗಿ ಪರಿವರ್ತಿಸಲು ವರ್ಷಗಳು ಬೇಕಾಗಬಹುದು.

ಇಲ್ಲಿ ಮತ್ತೊಂದು ಸೂಕ್ಷ್ಮ ಅಂಶವಿದೆ. ಕೆಲವರು "ನಮ್ಮ ಸಮುದಾಯವನ್ನು ರಕ್ಷಿಸಬೇಕು" ಎಂಬ ಹೆಸರಿನಲ್ಲಿ ಶ್ರೇಷ್ಠತೆಯ ಭಾವನೆಯನ್ನು ಸಮರ್ಥಿಸಿಕೊಳ್ಳುತ್ತಾರೆ. ಸಮುದಾಯದ ಹಿತ ಕಾಪಾಡುವುದು ತಪ್ಪಲ್ಲ. ಅನ್ಯಾಯದ ವಿರುದ್ಧ ಧ್ವನಿ ಎತ್ತುವುದೂ ತಪ್ಪಲ್ಲ. ಆದರೆ ಸಮುದಾಯದ ಹಿತವನ್ನು ಕಾಪಾಡುವ ಹೆಸರಿನಲ್ಲಿ ಮತ್ತೊಂದು ಸಮುದಾಯದ ಹಕ್ಕು, ಗೌರವ ಅಥವಾ ಮಾನವೀಯತೆಯನ್ನು ನಿರಾಕರಿಸುವುದು ನ್ಯಾಯವಲ್ಲ.

ನಿಜವಾದ ಸಮುದಾಯದ ಶಕ್ತಿ ಮತ್ತೊಬ್ಬರನ್ನು ಕೆಳಕ್ಕೆ ತಳ್ಳುವುದರಲ್ಲಿ ಇಲ್ಲ; ತನ್ನ ಸದಸ್ಯರನ್ನು ಮೇಲಕ್ಕೆತ್ತುವುದರಲ್ಲಿ ಇದೆ.

ಸಮಾನತೆ ಎಂದರೆ ಎಲ್ಲರೂ ಒಂದೇ ರೀತಿಯಾಗಿ ಇರಬೇಕು ಎಂದಲ್ಲ. ಎಲ್ಲರ ಧರ್ಮ ಒಂದೇ ಆಗಬೇಕು, ಸಂಸ್ಕೃತಿ ಒಂದೇ ಆಗಬೇಕು, ಆಲೋಚನೆ ಒಂದೇ ಆಗಬೇಕು ಎಂಬುದೂ ಅಲ್ಲ. ವೈವಿಧ್ಯತೆಯೇ ಸಮಾಜದ ಸೌಂದರ್ಯ. ಭಿನ್ನಾಭಿಪ್ರಾಯಗಳೂ ಸಹಜ. ಆದರೆ ಆ ಭಿನ್ನತೆಯ ನಡುವೆಯೂ ಪ್ರತಿಯೊಬ್ಬರ ಮಾನವೀಯ ಗೌರವವನ್ನು ಒಪ್ಪಿಕೊಳ್ಳುವುದು ಮುಖ್ಯ. "ಯಾರೂ ಮತ್ತೊಬ್ಬರಿಗಿಂತ ಮನುಷ್ಯನಾಗಿ ಶ್ರೇಷ್ಠರಲ್ಲ" ಎಂಬ ಮೂಲ ಸತ್ಯವನ್ನು ಒಪ್ಪಿಕೊಳ್ಳುವುದೇ ನಿಜವಾದ ಸಮಾನತೆಯ ಆರಂಭ. ಒಬ್ಬನಿಗೆ ದೇವರ ಮೇಲಿನ ನಂಬಿಕೆ ಇರಬಹುದು; ಮತ್ತೊಬ್ಬನಿಗೆ ಬೇರೆ ರೀತಿಯ ನಂಬಿಕೆ ಇರಬಹುದು. ಇನ್ನೊಬ್ಬನಿಗೆ ಯಾವುದೇ ಧಾರ್ಮಿಕ ನಂಬಿಕೆ ಇರದಿರಬಹುದು. ಆದರೆ ಈ ಎಲ್ಲರಿಗೂ ಗೌರವದಿಂದ ಬದುಕುವ ಹಕ್ಕು ಒಂದೇ. ಒಬ್ಬನ ಜಾತಿ ಅವನ ಮಾನವೀಯ ಮೌಲ್ಯವನ್ನು ಹೆಚ್ಚಿಸುವುದಿಲ್ಲ; ಮತ್ತೊಬ್ಬನ ಜಾತಿ ಅದನ್ನು ಕಡಿಮೆ ಮಾಡುವುದಿಲ್ಲ. ಒಬ್ಬನ ಆರ್ಥಿಕ ಸಾಮರ್ಥ್ಯ ಅವನನ್ನು ಹೆಚ್ಚು ಮನುಷ್ಯನನ್ನಾಗಿಸುವುದಿಲ್ಲ.

**ಸಂಪಾದಕ**

# ಸಾಯಿ ನಿಕೇತನ ಸೇವಾಶ್ರಮಕ್ಕೆ ವೀರಕೇಸರಿ ಫ್ರೆಂಡ್ಸ್ ತಂಡ ಭೇಟಿ

**ದೈಗೋಳಿ:** ಮಜಿ ಬೋಳಿಯಾರು ವೀರಕೇಸರಿ ಫ್ರೆಂಡ್ಸ್ (ರಿ.) ತಂಡದ ಸದಸ್ಯರು ದೈಗೋಳಿಯ ಸಾಯಿ ನಿಕೇತನ ಸೇವಾಶ್ರಮಕ್ಕೆ ಭೇಟಿ ನೀಡಿ ಆಶ್ರಮವಾಸಿಗಳ ನಿತ್ಯೋಪಯೋಗಕ್ಕಾಗಿ ತೆಂಗಿನಕಾಯಿ, ಹಣ್ಣುಹಂಪಲು ಹಾಗೂ ಶುಚಿತ್ವ ಸಾಮಗ್ರಿಗಳನ್ನು ವಿತರಿಸಿದರು.




ಸೇವಾ ಮನೋಭಾವದಿಂದ ಆಶ್ರಮಕ್ಕೆ ಅಗತ್ಯವಿರುವ ವಸ್ತುಗಳನ್ನು ಒದಗಿಸಿದ ತಂಡದ ಸದಸ್ಯರ ಕಾರ್ಯಕ್ಕೆ ಆಶ್ರಮವಾಸಿಗಳು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಸಾಯಿ ನಿಕೇತನ ಸೇವಾಶ್ರಮದ ಆಶ್ರಮವಾಸಿಗಳ ಪರವಾಗಿ ವೀರಕೇಸರಿ ಫ್ರೆಂಡ್ಸ್ ತಂಡದ ಸದಸ್ಯರು ಹಾಗೂ ಅವರ ಕುಟುಂಬಸ್ಥರಿಗೆ ಆಯುರಾ–ರೋಗ್ಯ, ಸುಖ?ಸಮೃದ್ಧಿ ಲಭಿಸಲಿ. ಮುಂದೆಯೂ ಇನ್ನಷ್ಟು ಸಮಾಜಮುಖಿ ಸೇವಾ ಕಾರ್ಯಗಳನ್ನು ಕೈಗೊಳ್ಳುವ ಶಕ್ತಿ ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸಲಾಯಿತು.

### ಕುತ್ತಾರು ಜಂಕ್ಷನ್‌ನಲ್ಲಿ ಸೌಹಾರ್ದ ವೃತ್ತ; ವೃತ್ತದ ಮುಕುಟದಲ್ಲಿ ಕೊರಗಜ್ಜನ ಮುಟ್ಟಾಳೆ, ದಂಟೆಯ ಪ್ರತಿಕೃತಿ

# ನೂತನ ವೃತ್ತ ಸಚಿವ ಯು.ಟಿ.ಖಾದರ್‌ರಿಂದ ಲೋಕಾರ್ಪಣೆ

**ಕುತ್ತಾರು;** ಸೌಹಾರ್ದತೆಗೆ ಹೆಸರಾಗಿರುವ ಉಳ್ಳಾಲ ಕ್ಷೇತ್ರದಲ್ಲಿ ಧರ್ಮ, ಜಾತಿ, ರಾಜಕೀಯದ ಎಲ್ಲೆಗಳನ್ನು ಮೀರಿ ಸೌಹಾರ್ದತೆಯ ಸಂದೇಶ ಸಾರುವ ಮತ್ತೊಂದು ಪ್ರಯತ್ನ ನಡೆದಿದೆ. ಕುತ್ತಾರು ಜಂಕ್ಷನ್‌ನಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಸೌಹಾರ್ದ ವೃತ್ತವನ್ನು ಆರೋಗ್ಯ ಸಚಿವ ಯು.ಟಿ. ಖಾದರ್ ಲೋಕಾರ್ಪಣೆಗೊಳಿಸಿದರು.




ಸಚಿವ ಯು.ಟಿ. ಖಾದರ್ ಅವರು ರಾಜಕೀಯಕ್ಕೂ ಮೀರಿದ ಸೌಹಾರ್ದತೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಾ, ಮಠ, ಮಂದಿರ, ಚರ್ಚ್ ಹಾಗೂ ಮಸೀದಿಗಳಿಗೆ ಭೇಟಿ ನೀಡುವ ಮೂಲಕ ವಿವಿಧ ಧರ್ಮಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ. ಉಳ್ಳಾಲ ಕ್ಷೇತ್ರದಲ್ಲಿ ನಡೆಯುವ ಹಲವು ಕಾರ್ಯಕ್ರಮಗಳು ಕೂಡ ಸೌಹಾರ್ದತೆಯ ಸಂದೇಶವನ್ನು ಸಾರುತ್ತಿವೆ. ಇದೀಗ ಕುತ್ತಾರು ಜಂಕ್ಷನ್‌ನಲ್ಲಿ ಸೌಹಾರ್ದದ ಹೆಸರಿನಲ್ಲಿ ವೃತ್ತ ನಿರ್ಮಿಸುವ ಮೂಲಕ ಮತ್ತೊಮ್ಮೆ ಇದಕ್ಕೆ ಉದಾಹರಣೆಯಾಗಿದ್ದಾರೆ.

ನೂತನ ಸೌಹಾರ್ದ ವೃತ್ತದ ಮುಕುಟದಲ್ಲಿ ಕೊರಗಜ್ಜನ ಮುಟ್ಟಾಲೆ ಹಾಗೂ ದಂಟೆಯ ಹೊಳಪಿನ ಪ್ರತಿಕೃತಿಯನ್ನು ಅಳವಡಿಸಲಾಗಿದೆ. ಅಲ್ಲದೆ, ವೃತ್ತದಲ್ಲಿ ಕೊರಗಜ್ಜನ ಆದಿಕ್ಷೇತ್ರ, ರಾಣಿಪುರ ಚರ್ಚ್ ಹಾಗೂ ಕುಂಡೂರು ಜುಮಾ ಮಸೀದಿಗೆ ತೆರಳುವ ಮಾರ್ಗಗಳ ಮಾರ್ಗಸೂಚಿ ಫಲಕವನ್ನೂ ಅಳವಡಿಸಲಾಗಿದೆ.

ಸೌಹಾರ್ದ ವೃತ್ತವನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಸಚಿವ ಯು.ಟಿ. ಖಾದರ್, ಧಾರ್ಮಿಕ ನಂಬಿಕೆಗಳು ದೌರ್ಬಲ್ಯವಲ್ಲ, ಅದು ಈ ಮಣ್ಣಿನ ಶಕ್ತಿ ಎಂದು ಹೇಳಿದರು.

ಎಲ್ಲಾ ಧರ್ಮಗಳ ಸಂದೇಶವೂ ಇನ್ನೊಬ್ಬರ ದೇಹದ ಗಾಯ ಹಾಗೂ ಮನಸ್ಸಿನ ನೋವನ್ನು ಗುಣಪಡಿಸುವ ಔಷಧಿಯಂತಿದೆ. ಈ ವೃತ್ತದ ಅನಾವರಣದ ಮೂಲಕ ಇಡೀ ದೇಶಕ್ಕೆ ಕುತ್ತಾರಿನಿಂದಲೇ ಸೌಹಾರ್ದದ ಸಂದೇಶ ರವಾನೆಯಾಗಬೇಕು ಎಂದರು.ಅಭಿವೃದ್ಧಿಯ ಪರ್ವ ಇಲ್ಲಿಗೆ ನಿಲ್ಲುವುದಿಲ್ಲ. ಕುತ್ತಾರಿನಿಂದ ಅಂಬ್ಲಮೊಗರು ರಸ್ತೆ ಅಗಲೀಕರಣಕ್ಕೆ ನಾಳೆಯೇ ಚಾಲನೆ ನೀಡಲಾಗುವುದು. ಇದಕ್ಕಾಗಿ ಲೋಕೋಪಯೋಗಿ ಇಲಾಖೆಯಿಂದ ಮೂರು ಕೋಟಿ ರೂ. ಅನುದಾನ ಮೀಸಲಿಡಲಾಗಿದೆ ಎಂದು ಸಚಿವರು ತಿಳಿಸಿದರು.

ಮುಂದಿನ ದಿನಗಳಲ್ಲಿ ಕುತ್ತಾರು ಪ್ರದೇಶವು ಸೌಹಾರ್ದತೆ ಮತ್ತು ಸೋದರತ್ವದ ಪ್ರದೇಶವಾಗಿ ನಿರ್ಮಾಣಗೊಳ್ಳಲಿದೆ. ಉಳ್ಳಾಲಕ್ಕೆ ಶೇಕಡ 20ಕ್ಕೂ ಅಧಿಕ ಪ್ರವಾಸಿಗರು ಆಗಮಿಸಲು ಕೊರಗಜ್ಜನ ಕ್ಷೇತ್ರವೂ ಪ್ರಮುಖ ಕಾರಣವಾಗಿದೆ ಎಂದು ಯು.ಟಿ. ಖಾದರ್ ಹೇಳಿದರು.

ಕಾರ್ಯಕ್ರಮದಲ್ಲಿ ಕುತ್ತಾರು ಪಂಜಂದಾಯ, ಬಂಟ, ವೈದ್ಯನಾಥ, ಆದಿ ಕೊರಗತನಿಯ ಕ್ಷೇತ್ರದ ಆನುವಂಶಿಕ ಆಡಳಿತ ಮೊಕ್ತೇಸರರಾದ ಬಿ. ಶ್ರೀಧರ ಶೆಟ್ಟಿ ಮಾಗಣತ್ತಡಿ, ಪಂಜಂದಾಯ ಬಂಟ ವೈದ್ಯನಾಥ ಆದಿ ಕೊರಗತನಿಯ ಸೇವಾ ಟ್ರಸ್ಟ್ ಉಪಾಧ್ಯಕ್ಷರಾದ ಎಂ. ಮಹಾಬಲ ಹೆಗ್ಡೆ ದೆಬ್ಬೇಲಿ, ಪ್ರಮುಖರಾದ ರತ್ನಾಕರ ಕಾವ ಕುತ್ತಾರ್ ಗುತ್ತು, ರಾಜಣ್ಣ ಬೋಳ್ಯಗುತ್ತು, ಪದ್ಮನಾಭ ಶೆಟ್ಟಿ ಗೇಣಿಮನೆ, ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯದ ಕುಲಾಧಿಪತಿ ವಿಶಾಲ್ ಹೆಗ್ಡೆ, ಸಾರ್ವಜನಿಕ ಸಂಪರ್ಕಾಧಿಕಾರಿ ಹೇಮಂತ್ ಶೆಟ್ಟಿ, ಕಣಚೂರು ಸಮೂಹ ಸಂಸ್ಥೆಗಳ ಅಧ್ಯಕ್ಷರಾದ ಕಣಚೂರು ಮೋನು, ಮದನಿನಗರ ಜುಮಾ ಮಸೀದಿ ಅಧ್ಯಕ್ಷರಾದ ಅಝೀಝ್, ರಾಣಿಪುರ ಚರ್ಚ್ನ ಧರ್ಮಗುರು ಎರಿಕ್ ಕ್ರಾಸ್ತಾ, ಕುತ್ತಾರು ಶ್ರೀ ರಾಜರಾಜೇಶ್ವರಿ ಕ್ಷೇತ್ರದ ಅಧ್ಯಕ್ಷರಾದ ಪವಿತ್ರಗಟ್ಟಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಕೊಲ್ಯ ಶಾರದಾ ಮಂಟಪದಲ್ಲಿ ಸಂಸದ ಕ್ಯಾ. ಬ್ರಿಜೇಶ್ ಚೌಟರಿಗೆ ಸನ್ಮಾನ

**ಕೊಲ್ಯ ;** ಭಾರತೀಯ ಜನತಾ ಪಾರ್ಟಿ ಮಂಗಳೂರು ಮಂಡಲದ ಬೂತ್ ಮಟ್ಟದ ಅಧಿಕಾರಿಗಳ ಸಮಾವೇಶವು ಕೊಲ್ಯ ಶ್ರೀ ಶಾರದಾ ಮಂಟಪದಲ್ಲಿ ನಡೆಯಿತು.

ಈ ಸಂದರ್ಭದಲ್ಲಿ ಮಂಗಳೂರು ರೈಲ್ವೆ ಪ್ರದೇಶವನ್ನು ಪಾಲಕ್ಕಾಡ್ ವಿಭಾಗದಿಂದ ದಕ್ಷಿಣ–ಪಶ್ಚಿಮ ರೈಲ್ವೆಯ ಮೈಸೂರು ವಿಭಾಗಕ್ಕೆ ವರ್ಗಾಯಿಸುವ ನಿಟ್ಟಿನಲ್ಲಿ ಶ್ರಮಿಸಿದ ಮಂಗಳೂರು ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರನ್ನು ಸನ್ಮಾನಿಸಲಾಯಿತು. ರೈಲ್ವೆ ವಿಭಾಗದ ವರ್ಗಾವಣೆಯಿಂದ ಮಂಗಳೂರು ಹಾಗೂ ಕರಾವಳಿ ಭಾಗದ ರೈಲ್ವೆ ಅಭಿವೃದ್ಧಿಗೆ ಹೆಚ್ಚಿನ ವೇಗ ದೊರೆಯುವ




ನಿರೀಕ್ಷೆ ವ್ಯಕ್ತವಾಯಿತು. ಈ ಸಂದರ್ಭದಲ್ಲಿ ಬಿಜೆಪಿ ಮಂಗಳೂರು ಮಂಡಲದ ಪ್ರಧಾನ ಕಾರ್ಯದರ್ಶಿ ಮೋಹನ್‌ರಾಜ್ ಕೆ.ಆರ್, ಬಿಜೆಪಿ ಮಂಗಳೂರು ಮಂಡಲದ ಅಧ್ಯಕ್ಷರಾದ ಜಗದೀಶ್ ಆಳ್ವ ಕುವೆತ್ತಬೈಲ್, ಕೋಟೆಕಾರು ಪಟ್ಟಣ ಪಂಚಾಯತ್ ಅಧ್ಯಕ್ಷರಾದ ದಿವ್ಯಸತೀಶ್ ಶೆಟ್ಟಿ, ಧನಲಕ್ಷ್ಮೀ ಗಟ್ಟಿ, ಪಕ್ಷದ ಪ್ರಮುಖರು, ಬಿ.ಎಲ್.ಒ.ಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ತೊಕ್ಕೊಟ್ಟಿನ ಅಂಬೇಡ್ಕರ್ ಮೈದಾನದ ಸ್ಥಿತಿಯನ್ನೊಮ್ಮೆ ನೋಡಿ

**ತೊಕ್ಕೊಟ್ಟು:** ತೊಕ್ಕೊಟ್ಟಿನ ಡಾ. ಬಿ.ಆರ್. ಅಂಬೇಡ್ಕರ್ ಮೈದಾನ ನಿರ್ವಹಣೆಯ ಕೊರತೆಯಿಂದಾಗಿ ಅವ್ಯವಸ್ಥೆಯ ತಾಣವಾಗಿ ಮಾರ್ಪಟ್ಟಿದ್ದು, ಮೈದಾನವನ್ನು ಅಭಿವೃದ್ಧಿಪಡಿಸುವಂತೆ ನಾಗರಿಕರು ಆಗ್ರಹಿಸಿದ್ದಾರೆ.

ಇತಿಹಾಸ ಪ್ರಸಿದ್ಧ ತೊಕ್ಕೊಟ್ಟು ಕೃಷ್ಣ ಜನ್ಮಾಷ್ಟಮಿ, ಮೊಸರು ಕುಡಿ–ಕೆ ಸೇರಿದಂತೆ ಹಲವು ಪ್ರಮುಖ ಕಾರ್ಯಕ್ರಮಗಳಿಗೆ ಸಾಕ್ಷಿಯಾಗಿರುವ ಈ ಮೈದಾನ ಇದೀಗ ಸಮರ್ಪಕ ನಿರ್ವಹಣೆಯಿಲ್ಲದೆ ಹದಗೆಟ್ಟಿದೆ. ಸಾರ್ವಜನಿಕರು ಹಾಗೂ ವಿವಿಧ ಕಾರ್ಯಕ್ರಮಗಳಿಗಾಗಿ ಬಳಸುವ ಮೈದಾನವು ಈ ಸ್ಥಿತಿಗೆ ತಲುಪಿರುವುದು ಬೇಸರದ ಸಂಗತಿ ಎಂದು ಸ್ಥಳೀಯರು



ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ತೊಕ್ಕೊಟ್ಟಿನ ಪ್ರಮುಖ ಪ್ರದೇಶದಲ್ಲಿರುವ ಈ ಮೈದಾನದ ಅವ್ಯವಸ್ಥೆ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಗಮನಕ್ಕೆ ಬಂದಿಲ್ಲವೇ ಎಂಬ ಪ್ರಶ್ನೆಯೂ ನಾಗರಿಕ–ರಿಂದ ಕೇಳಿಬಂದಿದೆ. ಪ್ರತಿನಿತ್ಯ ಈ ಭಾಗದಲ್ಲಿ ಸಂಚರಿಸುವ ಶಾಸಕರು, ಜನಪ್ರತಿನಿಧಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಮೈದಾನದ ಸ್ಥಿತಿಗತಿಗಳತ್ತ ಗಮನಹರಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಮೈದಾನವನ್ನು ಸಮರ್ಪಕವಾಗಿ ಸ್ವಚ್ಛಗೊಳಿಸಿ, ಅಗತ್ಯ ಮೂಲಸೌಕರ್ಯ ಕಲ್ಪಿಸಿ ಅಭಿವೃದ್ಧಿಪಡಿಸುವ ಮೂಲಕ ಸಾರ್ವಜನಿಕರು ಹಾಗೂ ವಿವಿಧ ಸಂಘ–ಸಂಸ್ಥೆಗಳು ಕಾರ್ಯಕ್ರಮಗಳನ್ನು ನಡೆಸಲು ಅನುಕೂಲ ಮಾಡಿಕೊಡಬೇಕು. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖೆ ಹಾಗೂ ಜನಪ್ರತಿನಿಧಿಗಳು ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ನಾಗರಿಕರು ಆಗ್ರಹಿಸಿದ್ದಾರೆ.

# ಅಸೈಗೋಳಿ: ಕ್ರೀಡೆಯಿಂದ ಆರೋಗ್ಯ: ಪ್ರೊ. ರಮೇಶ್

**ಅಸೈಗೋಳಿ:** ಪ್ರಸ್ತುತ ದಿನಗಳಲ್ಲಿ ಕೇವಲ ಪಠ್ಯ ಶಿಕ್ಷಣ ಸಾಲದು, ಪಠ್ಯೇತರ ಚಟುವಟಿಕೆಗಳೂ ಅಗತ್ಯ. ಸ್ಪರ್ಧೆಗಳ ಅಯೋಜನೆಯಿಂದ ಮಕ್ಕಳು ಮೊಬೈಲ್ ಬಿಟ್ಟು ಮೈದಾನದಲ್ಲಿ ಕಳೆಯುವ ಅವಕಾಶ ಸಿಗುತ್ತದೆ, ಮಕ್ಕಳಿಗೆ ಎಷ್ಟೇ ಆಸ್ತಿಯನ್ನು ಮಾಡಿಟ್ಟರೂ ಅರೋಗ್ಯ ಇಲ್ಲ ಅಂ–ದ್ರೆ ಯಾವುದೇ ಪ್ರಯೋಜನ ಇಲ್ಲ. ಹಾಗಾಗಿ ಕ್ರೀಡೆ ಬಹಳ ಪ್ರಮುಖ್ಯವಾಗಿದೆ ಎಂದು ಮಂಗಳೂರು ವಿವಿ ದೈಹಿಕ ಶಿಕ್ಷಣ ವಿಭಾಗ ಸಹಾಯಕ ನಿರ್ದೇಶಕ ಪ್ರೊ.ರಮೇಶ್ ಹೇಳಿದರು.

ಅಸೈಗೋಳಿ ಯುವಕ ಮಂಡಲ ಮತ್ತು ಸಾರ್ವಜನಿಕ ಮೊಸರು ಕುಡಿಕೆ ಉತ್ಸವ ಸಮಿತಿಯಿಂದ ನಡೆಯಲಿರುವ 38ನೇ ವರ್ಷದ ಶ್ರೀ ಕೃಷ್ಣ ಜನ್ಮಾಷ್ಟಮಿ 'ಅಸೈಗೋಳಿ ಮೊಸರು ಕುಡಿಕೆ' ಉತ್ಸವದ ಪ್ರಯುಕ್ತ ಅಸೈಗೋಳಿ ಯುವಕ ಮಂಡಲದ ಕೇಂದ್ರ ಮೈದಾನದಲ್ಲಿ ಭಾನುವಾರ ನಡೆದ 'ಕ್ರೀಡಾ ಸಂಭ್ರಮ–2026' ಉದ್ಘಾಟಿಸಿ ಮಾತನಾಡಿದರು.



ಬಂಟರ ಸಂಘ ಉಳ್ಳಾಲ ವಲಯಾಧ್ಯಕ್ಷ ರವೀಂದ್ರ ರೈ ಕಲ್ಲಿಮಾರ್ ಮಾತನಾಡಿ, ಕ್ರೀಡೆ ಕೇವಲ ಮನರಂಜನೆಗೆ ಸೀಮಿತವಲ್ಲ. ಮಾನಸಿಕ, ದೈಹಿಕ ಆರೋಗ್ಯ, ಸರ್ವಧರ್ಮ ಸಮನ್ವಯತೆ, ಪ್ರೀತಿ, ತಾಳ್ಮೆ, ಪರಸ್ಪರ ಬೆರೆಯುವಿಕೆ ಮುಂತಾದ ಜೀವನ ಮೌಲ್ಯಗಳಿವೆ ಎಂದು ತಿಳಿಸಿದರು.

ಅಸೈಗೋಳಿ ಯುವಕ ಮಂಡಲದ ಅಧ್ಯಕ್ಷ ಸಂತೋಷ್ ಕುಮಾರ್ ಶೆಟ್ಟಿ ಫುಲ್ಲು ಅಧ್ಯಕ್ಷತೆ ವಹಿಸಿ, ಕ್ರೀಡೆಗೆ ಜಾತಿ, ಧರ್ಮದ ಹಂಗಿಲ್ಲ. ಎಲ್ಲರೂ ಭಾಗವಹಿಸುವ ಕ್ರೀಡಾಕೂಟ ಸಮಾಜದಲ್ಲಿ ಸಾಮರಸ್ಯ ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದರು.

ಕೊಣಾಜೆ ಮಂಗಳ ಗ್ರಾಮೀಣ ಯುವಕ ಸಂಘದ ಅಧ್ಯಕ್ಷ ಎ.ಕೆ.ಅಬ್ದುಲ್ ರಹ್ಮಾನ್ ಕೋಡಿಜಾಲ್, ಪರಂಜ್ಯೋತಿ ಮಾತೃಮಂಡಳಿ ಅಧ್ಯಕ್ಷೆ ನಾಗವೇಣಿ ಶೆಟ್ಟಿ, ಸಂಚಾಲಕ ಕೃಷ್ಣಪ್ಪ, ಸಿದ್ಧಾರ್ಥ್ ಶೆಟ್ಟಿ ಜತೆಕಾರ್ಯದರ್ಶಿ ವಿಶ್ವನಾಥ ಪೂಜಾರಿ, ವನಿತಾ ಮನಮೋಹನ್ ಮೊದಲಾದವರು ಉಪಸ್ಥಿತರಿದ್ದರು.

ಉತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ತ್ಯಾಗಂ ಹರೇಕಳ ಪ್ರಸ್ತಾವನೆಯೊಂದಿಗೆ ಸ್ವಾಗತಿಸಿದರು. ಕ್ರೀಡಾ ಸಂಚಾಲಕ ರಾಧಾಕೃಷ್ಣ ರೈ ವಂದಿಸಿದರು.ದೈಹಿಕ ಶಿಕ್ಷಣ ಶಿಕ್ಷಕ ರಾಜೀವ ಟಿ.ನಾಯಕ ನಿರೂಪಿಸಿದರು.

# ಅಶ್ವಿನಿಗೆ 5ಸೆಂಟ್ಸ್ ಜಾಗ

↗1ನೇ ಪುಟದಿಂದ ಅವೈಜ್ಞಾನಿಕವಾಗಿ ನಡೆದಿರುವ ಕುರಿತು ದಾಖಲೆಗಳ ಸಹಿತ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರು.

ಆರ್‌ಟಿಐ ಕಾಯ್ದೆಯಡಿ ಪಡೆದುಕೊಂಡಿರುವ ದಾಖ ಲೆಗಳು ಹಾಗೂ ಸಂಬಂಧ ಪಟ್ಟ ಇಂಜಿನಿಯರ್‌ಗಳು ನೀಡಿರುವ ವರದಿಗಳನ್ನು ಜಿಲ್ಲಾಧಿಕಾರಿಗಳಿಗೆ ಹಸ್ತಾಂತ ರಿಸಿ, ಅವುಗಳ ಆಧಾ ರದ ಮೇಲೆ ಹೆಚ್ಚಿನ ತನಿಖೆ ನಡೆಸುವಂತೆ ಮನವಿ ಮಾಡಲಾಯಿತು. ಘಟನೆಗೆ ಸಂಬಂಧಿಸಿದ ತನಿಖೆಗೆ ಸಂಪೂರ್ಣ ಸಹಕಾರ ನೀಡುವುದಾಗಿ ಗ್ರಾಮಸ್ಥರು ತಿಳಿಸಿದರು. ಗ್ರಾಮಸ್ಥರೂ ಸಹ ಸ್ಥಳದಲ್ಲಿ ನಡೆದಿರುವ ಕಾಮಗಾರಿಯಲ್ಲಿನ ಲೋಪಗಳ ಕುರಿತು ಜಿಲ್ಲಾಧಿಕಾರಿಗಳಿಗೆ ಮಾಹಿತಿ ನೀಡಿದರು.

ಈ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ದರ್ಶನ್, "ಅವೈಜ್ಞಾನಿಕ ಕಾಮಗಾರಿ ನಡೆದಿರುವ ಕುರಿತು ಸತ್ಯಾಸತ್ಯತೆ ತಿಳಿದುಕೊಳ್ಳುವ ಉದ್ದೇಶದಿಂದ ಸ್ಥಳಕ್ಕೆ ಭೇಟಿ ನೀಡಿದ್ದೇನೆ. ಅಶ್ವಿನಿ ಅವರಿಗೆ ಅತಿಶೀಘ್ರದಲ್ಲಿ ವಾಸ್ತವ್ಯಕ್ಕಾಗಿ 5 ಸೆಂಟ್ಸ್ ಜಾಗ ಕಲ್ಪಿಸುವ ಕುರಿತು ಕ್ರಮ ಕೈಗೊಳ್ಳಲಾಗುವುದು. ಈ ಸಂಬಂಧ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು. ಅಗತ್ಯ ದಾಖಲೆಗಳು ಮತ್ತು ವರದಿಗಳನ್ನು ತಕ್ಷಣ ಜಿಲ್ಲಾಧಿಕಾರಿ ಕಚೇರಿಗೆ ತಲುಪಿಸುವಂತೆ ತಹಶೀಲ್ದಾರ್ ಅವರಿಗೆ ಸೂಚಿಸಲಾಗುವುದು" ಎಂದು ತಿಳಿಸಿದರು.

ಭೇಟಿ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿನಾಯಕ್ ಖರ್ಬೀಕರ್, ಕಾರ್ಯನಿರ್ವಹಣಾಧಿಕಾರಿ ಗುರುದತ್, ತಹಶೀಲ್ದಾರ್ ಪ್ರಶಾಂತ್ ಪಾಟೀಲ್, ಕಂದಾಯ ನಿರೀಕ್ಷಕ ಪ್ರಮೋದ್, ಗ್ರಾಮ ಆಡಳಿತ ಅಧಿಕಾರಿ ಚೈತ್ರಾ, ಇಂಜಿನಿಯರ್ ನಿತಿನ್, ಅಶ್ವಿನಿ ಅವರ ಪತಿ ಸೀತಾರಾಮ ಸೇರಿದಂತೆ ಸ್ಥಳೀಯರು ಉಪಸ್ಥಿತರಿದ್ದರು.

# ಸಂಪ್ರದಾಯ, ಸಂಸ್ಕೃತಿಯ ಭಾಗವಾಗಿ ಸಮುದ್ರ ಆರಾಧನೆ

↗1ನೇ ಪುಟದಿಂದ ಸಮುದ್ರ ಆರಾಧನೆಯೂ ಇದೆ. ಭಾರತಾದ್ಯಂತ ಸಮುದ್ರವನ್ನು ಆರಾಧಿಸುವ ಸಂಪ್ರದಾಯವಿದೆ. ಮೀನುಗಾರನ ಊಟದ ಬಟ್ಟಲು ಸಮುದ್ರವೇ ಆಗಿದ್ದು, ಹೋರಾಟದ ಬದುಕಿನಲ್ಲಿರುವ ಮೊಗವೀರ ಸಮುದಾಯಕ್ಕೆ ಸಮುದ್ರವೇ ಜೀವನಾಧಾರ", ಪ್ರಕೃತಿ ಆರಾಧನೆಯೊಂದಿಗೆ ಸಮುದ್ರದ ಆರಾಧನೆಯನ್ನೂ ಮುಂದುವರಿಸುವುದು ನಮ್ಮ ಸಂಪ್ರದಾಯ ಹಾಗೂ ಸಂಸ್ಕೃತಿಯ ಭಾಗವಾಗಿದೆ ಎಂದು ಅವರು ತಿಳಿಸಿದರು. ಈ ಸಂದರ್ಭದಲ್ಲಿ ಕಾರ್ಯದರ್ಶಿ ದಯಾನಂದ ಬಂಗೇರ, ಮಾಜಿ ಅಧ್ಯಕ್ಷ ಸದಾನಂದ ಬಂಗೇರ, ಶ್ರೀ ವಿಠೋಭ ರುಖುಮಾಯಿ ಭಜನಾ ಮಂದಿರದ ಅರ್ಚಕ ತಾರಾನಾಥ್ ಸುವರ್ಣ, ಪ್ರತೀಶ್ ಕೋಟ್ಯಾನ್ ಅಧ್ಯಕ್ಷ ಪ್ರಶಾಂತ್ ಬಿ.ಉಳ್ಳಾಲ್, ಕಾರ್ಯದರ್ಶಿ ಸುಧೀರ್ ಬಂಗೇರ, ಕೋಶಾಧಿಕಾರಿ ವಿನೋದ್ ಬಂಗೇರ, ಶ್ರೀ ರಾಮ ಭಜನಾ ಮಂದಿರದ ಅಧ್ಯಕ್ಷ ರೋಹಿನಾಥ್ ಕೋಟ್ಯಾನ್, ಕಾಶಿನಾಥ್ ಕೋಟ್ಯಾನ್, ಸತೀಶ್ ಕೋಟ್ಯಾನ್, ಮಂಗಳೂರು ಟ್ರಾಲ್ ಬೋಟ್ ಮೀನುಗಾರರ ಸಂಘದ ಅಧ್ಯಕ್ಷ ರಾಜೇಶ್ ಪುತ್ರನ್, ದಾಮೋದರ್ ಸಾಲ್ಯಾನ್, ರೋಹಿದಾಸ್ ಬಂಗೇರ, ಮಧ್ಯಸ್ಥರು, ಗುರಿಕಾರ ವೃಂದದವರು, ಸಮಿತಿ ಸದಸ್ಯರು ಎಲ್ಲಾ ಸಂಘ ಸಂಸ್ಥೆಯ ಪಾದಾಧಿಕಾರಿಗಳು, ಸದಸ್ಯರುಗಳು ಉಪಸ್ಥಿತರಿದ್ದರು.

# ಸಂತೋಷ್ ಬೋಳಿಯಾರ್ ಸೇವೆ ದೇಶಕ್ಕೆ ಮಾದರಿ

↗1ನೇ ಪುಟದಿಂದ ದಿನೇಶ್ ಪಣಿಕ್ಕರ್, ಮೂರೂರ ಬೋವಿ ಮಹಾಸಭಾ ಅಧ್ಯಕ್ಷರಾದ ಹರೀಶ್ ಟಿ.ಉಚ್ಚಿಲ್, ಸಂತೋಷ್ ಬೋಳಿಯಾರ್ ಅವರ ಪತ್ನಿ ವೀಣಾ ಎಸ್.ರೈ, ಪುತ್ರ ಸಮ್ಯಕ್ ರೈ, ಪುತ್ರಿ ಸ್ಪರ್ಶ ಎಸ್.ರೈ ಮೊದಲಾದವರು ಉಪಸ್ಥಿತರಿದ್ದರು. ಆನಂದ ಶೆಟ್ಟಿ ಪ್ರಾಸ್ತಾವಿಕ ಮಾತುಗಳನ್ನಾಡಿದರು.ರವಿ ರೈ ಪಜೀರು ವಂದಿಸಿದ್ದಾರೆ.

# ಬಯಲು ಶೌಚಮುಕ್ತ ಜಿಲ್ಲೆ; ಇದೀಗ ಬಯಲು ಕಸಾಲಯವಾಗಿ ರೂಪಗೊಂಡಿದೆ

↗1ನೇ ಪುಟದಿಂದ ಪ ರಿ ಣ ಮಿ ಸಿ ದ್ ್ದ, ಬೇಸಿಗೆಯಲ್ಲಿ ಪ್ಲಾಸ್ಟಿಕ್ ಸುಡುವುದರಿಂದ ವಿಷಕಾರಿ ಹೊಗೆ, ಮಳೆಗಾಲದಲ್ಲಿ ಪ್ಲಾಸ್ಟಿಕ್ ಮಳೆ ಎದುರಾಗುತ್ತಿದೆ. ಅಂತರಂಗ ಹಾಗೂ ಬಹಿರಂಗ ಶುದ್ಧತೆ ಮನುಷ್ಯನನ್ನು ದೈವತ್ವದತ್ತ ಕೊಂಡೊಯ್ಯುತ್ತದೆ. ಪರಿಸರ ಸಂರಕ್ಷಣೆಗಾಗಿ ಸ್ವಚ್ಛತಾ ಹೋರಾಟವನ್ನು ಸ್ವಾತಂತ್ರ್ಯ ಹೋರಾಟದಷ್ಟೇ ಮಹತ್ವದಿಂದ ಪರಿಗಣಿಸಬೇಕಾಗಿದೆ. ಅಂಗಡಿಗಳಲ್ಲಿ ನಿಷೇಧಿತ ಏಕಬಳಕೆ ಪ್ಲಾಸ್ಟಿಕ್‌ಗಳನ್ನು ಬಳಸಬಾರದು ಎಂಬ ಕಾನೂನು ಈಗಾಗಲೇ ಜಾರಿಯಲ್ಲಿದ್ದು, ನಿಯಮ ಉಲ್ಲಂಘಿಸುವವರ ವಿರುದ್ಧ ದಂಡಾಸ್ತ್ರ ಪ್ರಯೋಗಿಸಲು ಅವಕಾಶವಿದೆ. ಆದರೆ ಕಾನೂನಿನ ಭಯದಿಂದಲ್ಲ, ಸ್ವಯಂಪ್ರೇರಣೆಯಿಂದಲೇ ಏಕಬಳಕೆ ಪ್ಲಾಸ್ಟಿಕ್‌ನಿಂದ ದೂರವಾಗುವುದು ಅತ್ಯಂತ ಉತ್ತಮ ಮಾರ್ಗ . 2005ರಿಂದ ಜಿಲ್ಲೆಯಲ್ಲಿ ಸಂಪೂರ್ಣ ಸ್ವಚ್ಛತಾ ಅಭಿಯಾನಕ್ಕೆ ಸರ್ಕಾರ ಒತ್ತು ನೀಡಿದೆ. ಕುಡಿಯುವ ನೀರು, ಹಾಲು ಸೇರಿದಂತೆ ದಿನನಿತ್ಯದ ಬಳಕೆಯ ವಸ್ತುಗಳಲ್ಲಿಯೂ ಮೈಕ್ರೋಪ್ಲಾಸ್ಟಿಕ್ ಪತ್ತೆಯಾಗುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ. ಮೈಕ್ರೋಪ್ಲಾಸ್ಟಿಕ್ ಮಾನವ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುವ ಸಾಧ್ಯತೆಯಿದ್ದು, ವಿಶೇಷವಾಗಿ ಮಹಿಳೆಯರಲ್ಲಿ ಹಾರ್ಮೋನ್ ಅಸಮತೋಲನ ಸೇರಿದಂತೆ ವಿವಿಧ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಬಹುದು ಎಂದು ಅವರು ಎಚ್ಚರಿಸಿದರು. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ನಿಷೇಧಿತ ಏಕಬಳಕೆ ಪ್ಲಾಸ್ಟಿಕ್ ಉತ್ಪಾದನೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಬೇಕು ಎಂದು ಹಲವು ಮನವಿ ಪತ್ರಗಳನ್ನು ಬರೆಯಲಾಗಿದೆ. ಸೆ.18 ರಂದು ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಏಕಬಳಕೆ ಪ್ಲಾಸ್ಟಿಕ್ ಸಂಪೂರ್ಣ ನಿಷೇಧದ ನಿರ್ಧಾರ ಕೈಗೊಳ್ಳುವ ಭರವಸೆ ಆರೋಗ್ಯ ಸಚಿವರಿಂದ ದೊರೆತಿದೆ ಎಂದರು.

ದ.ಕ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪುಷ್ಪರಾಜ್ ಬಿ.ಎನ್. ಮಾತನಾಡಿ, 1970ರ ದಶಕದಲ್ಲಿ ಹುಟ್ಟಿಕೊಂಡ ಪ್ಲಾಸ್ಟಿಕ್ ಇಂದು ನಮ್ಮ ಬದುಕಿನ ಬಹುತೇಕ ಎಲ್ಲ ಕ್ಷೇತ್ರಗಳಲ್ಲೂ ಆವರಿಸಿಕೊಂಡಿದೆ. ಸಾಂಪ್ರದಾಯಿಕ ವಸ್ತುಗಳಿಗೆ ಪರ್ಯಾಯವಾಗಿ ಬಂದ ಪ್ಲಾಸ್ಟಿಕ್ ಬಳಕೆ ಹೆಚ್ಚಾದಂತೆ ಅನೇಕ ಸ್ಥಳೀಯ ಕಲೆ, ಸಂಪ್ರದಾಯ ಹಾಗೂ ಪರಿಸರ ಸ್ನೇಹಿ ವಸ್ತುಗಳು ಮರೆಯಾಗಿವೆ. ಕುಂಬಾರಿಕೆಯಂತಹ ಸಾಂಪ್ರದಾಯಿಕ ಕಲೆಗಳೂ ಇಂದು ಕಣ್ಮರೆಯಾಗುವ ಹಂತಕ್ಕೆ ತಲುಪಿವೆ ಎಂದು ಹೇಳಿದರು.

ಈ ಸಂದರ್ಭ ಜನಶಿಕ್ಷಣ ಟ್ರಸ್ಟಿನ ಕೃಷ್ಣ ಮೂಲ್ಯ , ಉಳ್ಳಾಲ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಶಿಧರ್ ಪೊಯ್ಯತ್ತಬೈಲ್ , ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀನಿವಾಸ್ ನಾಯಕ್ ಇಂದಾಜೆ, ಉಳ್ಳಾಲ ಪ್ರೆಸ್ ಕ್ಲಬ್ ಅಧ್ಯಕ್ಷ ವಸಂತ್ ಎನ್ ಕೊಣಾಜೆ, ನಿಟ್ಟೆ ಕಾಲೇಜು ಉಪನ್ಯಾಸಕ ಹೆಚ್.ಟಿ ಶಿವಕುಮಾರ್, ಉಪಸ್ಥಿತರಿದ್ದರು.

ಪ್ರಜ್ವಲ್ ನಿರೂಪಿಸಿದರು. ಹಸಿರುದಳ ನಾಗರಾಜ್ ಪ್ರಸ್ತಾವಿಕ ಮಾತುಗಳನ್ನಾಡಿದರು. ಉಳ್ಳಾಲ ತಾಲೂಕು ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ದಿನೇಶ್ ನಾಯಕ್ ತೊಕ್ಕೊಟ್ಟು ವಂದಿಸಿದರು.

## ಪ್ಲಾಸ್ಟಿಕ್ ಚೀಲ ಪಡೆದು ಬಟ್ಟೆ ಚೀಲ ಹಂಚಿದರು

↗1ನೇ ಪುಟದಿಂದ ನೀಡಲಾಯಿತು. ಅಷ್ಟಮಿ ಪ್ರಯುಕ್ತ ತೊಕ್ಕೊಟ್ಟು ಜಂಕ್ಷನ್‌ನಲ್ಲಿ ಜನಜಂಗುಳಿ ಹೆಚ್ಚಿದ್ದ ಸಂದರ್ಭದಲ್ಲಿ ಪ್ಲಾಸ್ಟಿಕ್ ಬಳಕೆಯ ವಿರುದ್ಧ ವಿಶೇಷ ಜಾಗೃತಿ ಅಭಿಯಾನ ನಡೆಯಿತು. ಕಳೆದ ಎರಡು ವರ್ಷಗಳಿಂದ ಜಿಲ್ಲೆಯ 10 ಗ್ರಾಮ ಪಂಚಾಯಿತಿಗಳನ್ನು ಮಾದರಿ ಗ್ರಾಮ ಪಂಚಾಯಿತಿಗಳನ್ನಾಗಿ ರೂಪಿಸುವ ನಿಟ್ಟಿನಲ್ಲಿ ತ್ಯಾಜ್ಯ ನಿರ್ವಹಣೆಗೆ ವಿಶೇಷ ಆದ್ಯತೆ ನೀಡಲಾಗಿದೆ. ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲೂ ತ್ಯಾಜ್ಯವನ್ನು ವೈಜ್ಞಾನಿಕವಾಗಿ ನಿರ್ವಹಿಸುವ ವ್ಯವಸ್ಥೆ ಕಲ್ಪಿಸುವ ಪ್ರಯತ್ನ ನಡೆಯುತ್ತಿದೆ. ಪಾವೂರು ಗ್ರಾಮ ಪಂಚಾಯಿತಿಯಲ್ಲಿ ಕಳೆದ ಏಳು ವರ್ಷಗಳಿಂದ ತ್ಯಾಜ್ಯ ಸಂಸ್ಕರಣಾ ಘಟಕವಿದ್ದರೂ, ಸಮರ್ಪಕ ನಿರ್ವಹಣೆಯ ಕೊರತೆಯಿಂದಾಗಿ ನಿರೀಕ್ಷಿತ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರಲಿಲ್ಲ. ಇದೀಗ ವ್ಯವಸ್ಥೆಯನ್ನು ಸುಧಾರಿಸಲಾಗಿದ್ದು, ಹಸಿಕಸವನ್ನು ಗೊಬ್ಬರವಾಗಿ ಪರಿವರ್ತಿಸಿ, ಒಣಕಸವನ್ನು ಎಂಆರ್‌ಎಫ್ (ಮೆಟೀರಿಯಲ್ ರಿಕವರಿ ಫೆಸಿಲಿಟಿ) ಘಟಕಕ್ಕೆ ಕಳುಹಿಸಲಾಗುತ್ತಿದೆ. ಇದರಿಂದ ತ್ಯಾಜ್ಯ ನದಿ ಹಾಗೂ ಭೂಮಿಗೆ ಸೇರುವುದನ್ನು ತಡೆಯಲು ಸಾಧ್ಯವಾಗುತ್ತಿದೆ.ಪ್ಲಾಸ್ಟಿಕ್ ಜೊತೆಗೆ ಹಳೆಯ ಬಟ್ಟೆಗಳೂ ತ್ಯಾಜ್ಯ ನಿರ್ವಹಣೆಯಲ್ಲಿ ದೊಡ್ಡ ಸಮಸ್ಯೆಯಾಗುತ್ತಿವೆ. ಉತ್ತಮ ಗುಣಮಟ್ಟದ ಹಳೆಯ ಬಟ್ಟೆಗಳನ್ನು ಮರುಬಳಕೆ ಹಾಗೂ ಅಪ್ಸೈಕ್ಲಿಂಗ್ ಮಾಡುವ ಉದ್ದೇಶದಿಂದ ಸಂಜೀವಿನಿ ಮಹಿಳಾ ಒಕ್ಕೂಟದ ಸದಸ್ಯರನ್ನು ಒಳಗೊಳ್ಳಿಸಿ ಬಟ್ಟೆ ಚೀಲಗಳನ್ನು ಹೊಲಿಯುವ ತರಬೇತಿ ನೀಡಲಾಗಿದೆ. ಹಳೆಯ ಬಟ್ಟೆಗಳ ಸಂಗ್ರಹ ಅಭಿಯಾನವನ್ನೂ ನಡೆಸಲಾಗುತ್ತಿದ್ದು, ಈಗಾಗಲೇ ಸುಮಾರು 2 ಟನ್ ಹಳೆಯ ಬಟ್ಟೆಗಳು ಸಂಗ್ರಹವಾಗಿವೆ. ಈ ಮೂಲಕ ತ್ಯಾಜ್ಯ ಕಡಿಮೆ ಮಾಡುವುದರ ಜೊತೆಗೆ ಮಹಿಳೆಯರಿಗೆ ಉದ್ಯೋಗಾವಕಾಶ ಕಲ್ಪಿಸಿ ಆರ್ಥಿಕ ಸ್ವಾವಲಂಬನೆಗೆ ಉತ್ತೇಜನ ನೀಡಲಾಗುತ್ತಿದೆ. ಸಂಗ್ರಹಿಸಿದ ಬಟ್ಟೆಗಳನ್ನು ಮರುಬಳಕೆ ಮಾಡುವ ಮೂಲಕ ತಯಾರಿಸಿದ ಬಟ್ಟೆ ಚೀಲಗಳನ್ನು ಸಾರ್ವಜನಿಕರಿಗೆ ಉಚಿತವಾಗಿ ವಿತರಿಸಲಾಗುತ್ತಿದೆ. ತ್ಯಾಜ್ಯದ ಪ್ರತಿಯೊಂದು ವಸ್ತುವನ್ನೂ ಪ್ರತ್ಯೇಕವಾಗಿ ವಿಂಗಡಿಸಿ ಸೂಕ್ತ ರೀತಿಯಲ್ಲಿ ನಿರ್ವಹಿಸುವ ವ್ಯವಸ್ಥೆ ರೂಪಿಸಲಾಗುತ್ತಿದೆ. ಹಸಿಕಸಕ್ಕೆ ಪ್ರತ್ಯೇಕ ಸಂಸ್ಕರಣಾ ಘಟಕ ಸೇರಿದಂತೆ ಸಮಗ್ರ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಉದ್ದೇಶ ಹೊಂದಲಾಗಿದೆ ಎಂದು ನಾಗರಾಜ್ ಹಸಿರುದಳ ತಿಳಿಸಿದರು.

### ಶ್ರೀ ವೀರಾಂಜನೇಯ ಸ್ವಾಮಿಯ ನೂತನ ಮಂದಿರಕ್ಕೆ ನಿಧಿಕುಂಭ ಸ್ಥಾಪನಾ ಕಾರ್ಯಕ್ರಮದಲ್ಲಿ ಕಟೀಲು ಲಕ್ಷ್ಮೀನಾರಾಯಣ ಅಸ್ರಣ್ಣ

# ಭಕ್ತಿಯಿಂದ ಶಕ್ತಿ, ವಿಶ್ವಾಸವಿದ್ದಷ್ಟು ಫಲ ದೊರೆಯುತ್ತದೆ




**ಉಳ್ಳಾಲ:** ಹನುಮಂತನು ಭಕ್ತಿಪ್ರಧಾನ ದೇವರಾಗಿದ್ದು, ಭಕ್ತಿಯ ಶಕ್ತಿಯಿಂದ ಮಾನವನು ದೈವತ್ವವನ್ನು ಪಡೆಯಬಹುದು ಎಂಬುದನ್ನು ತೋರಿಸಿಕೊಟ್ಟಿದ್ದಾನೆ ಎಂದುಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ, ಕಟೀಲು ಇದರ ಅನುವಂಶಿಕ ಅರ್ಚಕರಾದ ವೇ.ಮೂ. ಶ್ರೀ ಕಟೀಲು ಲಕ್ಷ್ಮೀನಾರಾಯಣ ಅಸ್ರಣ್ಣ ಅಭಿಪ್ರಾಯಪಟ್ಟರು.

ಅವರು ಶ್ರೀ ವೀರಾಂಜನೇಯ ಸೇವಾ ಟ್ರಸ್ಟ್ (ರಿ.) ಹಾಗೂ ಶ್ರೀ ವೀರಾಂಜನೇಯ ವ್ಯಾಯಾಮ ಶಾಲೆ (ರಿ.) ವತಿಯಿಂದ ಆಯೋಜಿಸಲಾದ ಹನುಮಾನ್ ನಗರ, ಮಾಸ್ತಿಕಟ್ಟೆಯ ಶ್ರೀ ವೀರಾಂಜನೇಯ ವ್ಯಾಯಾಮ ಶಾಲೆಯಲ್ಲಿ ನಿರ್ಮಾಣಗೊಳ್ಳಲಿರುವ ಶ್ರೀ ವೀರಾಂಜನೇಯ ಸ್ವಾಮಿಯ ನೂತನ ಮಂದಿರದ ನಿಧಿಕುಂಭ ಸ್ಥಾಪನಾ ಕಾರ್ಯಕ್ರಮದಲ್ಲಿ ಸೋಮವಾರ ಉದ್ಘಾಟಿಸಿ ಮಾತನಾಡಿದರು.

ಭಕ್ತಿಯಲ್ಲಿ ಶಕ್ತಿಯಿದೆ. ಆ ಶಕ್ತಿಗೆ ದೇವರ ಅನುಗ್ರಹವೂ ಇದೆ ಎಂಬುದನ್ನು ಹನುಮಂತನ ಕಥೆಯಿಂದ ತಿಳಿದುಕೊಳ್ಳಬಹುದು. ಮಾನವರಾಗಿ ಹುಟ್ಟಿ ದೈವತ್ವವನ್ನು ಪಡೆದ ಮಹಾನ್ ವ್ಯಕ್ತಿತ್ವಗಳ ಜೀವನ ನಮಗೆ ಭಕ್ತಿ ಮತ್ತು ಶ್ರದ್ಧೆಯ ಮಹತ್ವವನ್ನು ತಿಳಿಸುತ್ತದೆ .ದೇವಸ್ಥಾನಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಸೇರುತ್ತಿರುವುದು ಜನರಲ್ಲಿ ಭಕ್ತಿಯ ಜೊತೆಗೆ ಶ್ರದ್ಧೆಯೂ ಇದೆ ಎಂಬುದಕ್ಕೆ ಸಾಕ್ಷಿಯಾಗಿದೆ. ವಿಶ್ವಾಸವಿದ್ದಷ್ಟು ಫಲ ದೊರೆಯುತ್ತದೆ. ಸನಾತನ ಪರಂಪರೆಯಲ್ಲಿ ಹುಟ್ಟಿರುವುದಕ್ಕೆ ನಾವು ಸಂತೋಷಪಡಬೇಕು. ಜಗತ್ತು ಒಪ್ಪಿಕೊಳ್ಳುವ ಧರ್ಮವಾಗಿ ಹಿಂದೂ ಧರ್ಮದ ಮಹತ್ವವನ್ನು ಅರಿತುಕೊಳ್ಳಬೇಕು. ದೇವರ ಮೇಲಿನ ನಂಬಿಕೆ ಮನುಷ್ಯನಿಗೆ ಶಕ್ತಿಯನ್ನು ನೀಡುತ್ತದೆ. ಹನುಮಂತ ದೇವರಿಗೆ ವಿಶೇಷವಾದ ಶಕ್ತಿಯಿದೆ. ನಾವು ದೇವರನ್ನು ಗಟ್ಟಿಯಾಗಿ ಹಿಡಿದುಕೊಂಡರೆ, ದೇವರೂ ನಮ್ಮನ್ನು ಗಟ್ಟಿಯಾಗಿ ಹಿಡಿದು ಕಾಪಾಡುತ್ತಾನೆ ಎಂಬ ವಿಶ್ವಾಸ ಇರಬೇಕು. ದೇವರಿಗೆ ನಮ್ಮ ಸೇವೆಯ ಅಗತ್ಯವಿಲ್ಲ. ಆದರೆ ಸಮಾಜಕ್ಕೆ ಮತ್ತು ಜನರಿಗೆ ನಮ್ಮ ಸೇವೆಯ ಅಗತ್ಯವಿದೆ. ದೇವರಿಗೆ ನೀಡುವ ಹಣವನ್ನು ಫಿಕ್ಸೆಡ್ ಡಿಪಾಸಿಟ್‌ನಂತೆ ಪರಿಗಣಿಸಬೇಕು. ದಾನ–ಧರ್ಮದ ಮೂಲಕ ಜೀವನದಲ್ಲಿ ಸುಖ, ಶಾಂತಿ ಮತ್ತು ನೆಮ್ಮದಿ ದೊರೆಯುತ್ತದೆ. ದೇವಸ್ಥಾನದ ಜೀರ್ಣೋದ್ಧಾರ ಮಾಡುವುದು ಬಹುದೊಡ್ಡ ಪುಣ್ಯದ ಕೆಲಸ. ದೇವಸ್ಥಾನ ನಿರ್ಮಾಣ ಅಥವಾ ಜೀರ್ಣೋದ್ಧಾರಕ್ಕೆ ನಿಧಿಕುಂಭ ಪ್ರಮುಖ ಸಹಕಾರಿಯಾಗುತ್ತದೆ. ಒಬ್ಬ ವ್ಯಕ್ತಿ ಮಾತ್ರ ದೊಡ್ಡ ಮೊತ್ತದ ಹಣ ನೀಡುವುದಕ್ಕಿಂತ, ಸಾರ್ವಜನಿಕರು ಒಗ್ಗಟ್ಟಾಗಿ ತಮ್ಮ ಕೈಲಾದಷ್ಟು ಕೊಡುಗೆ ನೀಡಿದಾಗ ಅದರಿಂದ ವಿಶೇಷವಾದ ಶಕ್ತಿ ನಿರ್ಮಾಣವಾಗುತ್ತದೆ ಎಂದು ಅವರು ಹೇಳಿದರು.

ಶ್ರೀ ಧಾಮ ಮಾಣಿಲ ಮಹಾಲಕ್ಷ್ಮೀ ಕ್ಷೇತ್ರದ ಶ್ರೀ ಮೋಹನದಾಸ ಸ್ವಾಮೀಜಿ ಮಾತನಾಡಿ ವಿಶ್ವದಲ್ಲಿ ಇಂದು ಯುದ್ಧಗಳು, ವಿವಿಧ ಪಂಥಗಳ ನಡುವೆ ಸಂಘರ್ಷಗಳು ನಡೆಯುತ್ತಿವೆ. ಇಂತಹ ಸಂದರ್ಭದಲ್ಲಿ ಪರಿಸರದ ಜನರ ಐಕ್ಯತೆ ಹಾಗೂ ಕ್ಷೇತ್ರದ ಮೇಲಿನ ಅಭಿಮಾನದಿಂದ ವಿವಿಧ ಸಮಾಜಮುಖಿ ಚಟುವಟಿಕೆಗಳು ನಡೆಯುತ್ತಿರುವುದು ಸಂತಸದ ವಿಚಾರ . ಕಳೆದ 45 ವರ್ಷಗಳಿಂದ ಕ್ರೈಸ್ತ ಸಮುದಾಯದವರ ಮನೆಯಲ್ಲಿ ಗರಡಿ ನಡೆಸಲು ಅವಕಾಶ ನೀಡಿರುವುದು ಹಾಗೂ ವ್ಯಾಯಾಮ ಶಾಲೆ ನಡೆಸಲು ಅವರು ನೀಡುತ್ತಿರುವ ಪ್ರೋತ್ಸಾಹ ಮತ್ತು ಸಹಕಾರವು ಅರ್ಥಪೂರ್ಣವಾಗಿದೆ. ಪರಸ್ಪರ ಸಹಕಾರ, ಸೌಹಾರ್ದತೆ ಹಾಗೂ ಸಾಮರಸ್ಯದ ಈ ಮನೋಭಾವ ಸಮಾಜಕ್ಕೆ ಉತ್ತಮ ಸಂದೇಶ ನೀಡುತ್ತದೆ. ಆಕ್ರೋಶ ಮತ್ತು ಉದ್ವೇಗದ ವಾತಾವರಣದಿಂದ ಸಮಾಜದಲ್ಲಿ ಹಲವು ಅನಾಹುತಗಳು ನಡೆಯುತ್ತಿವೆ. ಹಿಂದೂ ಸಮಾಜದಲ್ಲಿಯೂ ಇಂತಹ ಘಟನೆಗಳು ನಡೆಯುತ್ತಿರುವುದು ಆತಂಕಕಾರಿ. ಕೇವಲ ಮಂದಿರ ನಿರ್ಮಾಣ ಮಾಡಿದರೆ ಸಾಲದು; ಮಕ್ಕಳನ್ನು ಮಂದಿರದತ್ತ ಕರೆತಂದು ಧಾರ್ಮಿಕ ಹಾಗೂ ನೈತಿಕ ಮೌಲ್ಯಗಳನ್ನು ಕಲಿಸಬೇಕಾಗಿದೆ. ಮಕ್ಕಳಿಗೆ ಧರ್ಮಶಿಕ್ಷಣ ನೀಡದಿದ್ದರೆ ಅವರಲ್ಲಿ ಆತ್ಮಸ್ಥೈರ್ಯ ಬೆಳೆಸುವುದು ಕಷ್ಟ. ಮನೆಯೊಳಗಿನ ಸಂಸ್ಕೃತಿ ಮತ್ತು ಮೌಲ್ಯಗಳು ನಾಶವಾಗುತ್ತಿರುವುದರಿಂದ ಸಮಾಜದಲ್ಲಿ ಹಲವು ರೀತಿಯ ವಿಕೃತಿಗಳು ಹಾಗೂ ಅಶಾಂತಿಗಳು ಉಂಟಾಗುತ್ತಿವೆ. ಆದ್ದರಿಂದ ಮಹಿಳೆಯರು ಜಾಗೃತರಾಗಿ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿ, ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸುವ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಬೇಕು ಎಂದರು.



> ❝ ಸುಮಾರು ರೂ.1.50 ಕೋಟಿ ವೆಚ್ಚದಲ್ಲಿ ಶ್ರೀ ವೀರಾಂಜನೇಯ ಸ್ವಾಮಿಯ ನೂತನ ಮಂದಿರ ನಿರ್ಮಾಣಗೊಳ್ಳಲಿದ್ದು, ಮಂದಿರ ನಿರ್ಮಾಣಕ್ಕೆ ಭಕ್ತಾದಿಗಳು ಹಾಗೂ ಸಹೃದಯಿ ದಾನಿಗಳಿಂದ ತನು-ಮನ-ಧನದ ಸಹಕಾರ ಕೋರಲಾಗಿದೆ. ನೂತನ ಮಂದಿರದ ಗರ್ಭಗುಡಿಯನ್ನು ಶ್ರೀ ರಾಮನಾಮ ಕೆತ್ತನೆಯುಳ್ಳ ಶಿಲೆಕಲ್ಲಿನಿಂದ ನಿರ್ಮಿಸಲು ಯೋಜಿಸಲಾಗಿದ್ದು, ಒಂದು ಶಿಲಾಕಲ್ಲಿಗೆ ರೂ.2,000 ದೇಣಿಗೆ ನಿಗದಿಪಡಿಸಲಾಗಿದೆ. ಅಲ್ಲದೆ, ಮಂದಿರ ನಿರ್ಮಾಣಕ್ಕಾಗಿ ಹೆಚ್ಚುವರಿ ಜಾಗ ಖರೀದಿಸುವ ಯೋಜನೆಯಿದ್ದು, ಭೂದಾನದ ರೂಪದಲ್ಲಿ ಪ್ರತಿ ಚದರ ಅಡಿಗೆ ರೂ.1,000 ನಿಗದಿಪಡಿಸಲಾಗಿದೆ. ಮಂದಿರ ನಿರ್ಮಾಣದ ಒಂದು ಚದರ ಅಡಿ ದೇಣಿಗೆಗೆ ರೂ.3,000 ನಿಗದಿಪಡಿಸಲಾಗಿದ್ದು, ಒಟ್ಟು 3,000 ಚದರ ಅಡಿ ಗ್ರಾನೈಟ್ ಕಲ್ಲಿನ ಅಗತ್ಯವಿದ್ದು, ಪ್ರತಿ ಚದರ ಅಡಿಗೆ ರೂ.200ರಂತೆ ಸೇವಾ ರೂಪದಲ್ಲಿ ಸಹಕರಿಸುವಂತೆ ಮನವಿ ಮಾಡಲಾಗಿದೆ. ನಿಧಿಕುಂಭ ಕಾರ್ಯಕ್ರಮದ ಅಂಗವಾಗಿ ಭಕ್ತರಿಗೆ ಬೆಳ್ಳಿ ನಾಣ್ಯ ಸಮರ್ಪಣೆಯ ವಿಶೇಷ ಅವಕಾಶವನ್ನೂ ಕಲ್ಪಿಸಲಾಗಿತ್ತು. ಒಂದು ಬೆಳ್ಳಿ ನಾಣ್ಯಕ್ಕೆ ರೂ.300 ಸಮರ್ಪಣಾ ಮೊತ್ತ ನಿಗದಿಪಡಿಸಲಾಗಿತ್ತು.
>
> ■ **ನವನೀತ್,** ಅಧ್ಯಕ್ಷರು, ಶ್ರೀ ವೀರಾಂಜನೇಯ ವ್ಯಾಯಾಮ ಶಾಲೆ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಹನುಮ ಸೇವಕ ಸಮಿತಿ ಮಹಾಸಂಚಾಲಕರು ಕೃಷ್ಣ ಶಿವಕೃಪಾ ಕುಂಜತ್ತೂರು ಮಾತನಾಡಿ, ಪ್ರತಿಯೊಂದು ಗ್ರಾಮದಲ್ಲೂ ಹನುಮಂತನ ಸೇವೆ ಹಾಗೂ ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಹನುಮಸೇವಕರ ತಂಡವಿದ್ದರೆ ಆ ಊರಿಗೂ, ಗ್ರಾಮಕ್ಕೂ ಒಳಿತಾಗಲಿದೆ. ಹನುಮಂತನು ಭಕ್ತಿ, ಶಕ್ತಿ, ಶ್ರದ್ಧೆ, ಸೇವೆ ಹಾಗೂ ಶಿಸ್ತಿನ ಪ್ರತೀಕ. ಹನುಮಂತನ ಆದರ್ಶವನ್ನು ಜೀವನದಲ್ಲಿ ಅಳವಡಿಸಿಕೊಂಡು ಯುವಜನತೆ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಾಗ ಗ್ರಾಮದಲ್ಲಿ ಉತ್ತಮ ವಾತಾವರಣ ನಿರ್ಮಾಣವಾಗುತ್ತದೆ. ಯುವಕರನ್ನು ದುಶ್ಚಟಗಳಿಂದ ದೂರವಿಟ್ಟು, ದೈಹಿಕ ಹಾಗೂ ಮಾನಸಿಕವಾಗಿ ಸದೃಢರನ್ನಾಗಿ ಮಾಡುವಲ್ಲಿ ಹನುಮಸೇವಕರ ಪಾತ್ರ ಮಹತ್ವದ್ದಾಗಿದೆ ಎಂದರು.

ಶಾಲೆಯ ದೈವಜ್ಞರಾದ ರಂಗ ಐತಾಳ್ ಹಾಗೂ ತಂತ್ರಿವರ್ಯರಾದ ಪ್ರಸಾದ್ ನಲ್ಲೂರಾಯ ಮತ್ತು ಉಳ್ಳಾಲ್ತಿ ಧರ್ಮರಸರ ಕ್ಷೇತ್ರದ ಧರ್ಮದರ್ಶಿ ದೇವು ಮೂಲ್ಯಣ್ಣ ಅವರ ಮಾರ್ಗದರ್ಶನದಲ್ಲಿ ನಿಧಿಕುಂಭ ಸ್ಥಾಪನೆ ನೆರವೇರಿತು. ಶ್ರೀ ಕದ್ರಿ ನವನೀತ ಶೆಟ್ಟಿಯವರ ಮುಂದಾಳತ್ವದಲ್ಲಿ, ಶಿವಗಿರಿ ಶಿಲ್ಪಕಲಾ ತಂಡದ ಎಸ್. ಹರೀಶ್ ರಾಯಿ ಅವರ ನೇತೃತ್ವದಲ್ಲಿ ನೂತನ ಮಂದಿರ ನಿರ್ಮಾಣ ಕಾರ್ಯ ನಡೆಯಲಿದೆ.

ಶ್ರೀ ಸಾರ್ವಜನಿಕ ಶಾರದೋತ್ಸವ ಸಮಿತಿ ಉಳ್ಳಾಲದ ಶ್ರೀಕರ ಕಿಣಿ, ಶ್ರೀ ಸಾಯಿ ಪ್ರಾಪರ್ಟೀಸ್ ಆಂಡ್ ಇನ್ಫ್ರಾಸ್ಟ್ರಕ್ಚರ್ ನ ಸುಧೀನ್ ಚೌಟ, ರಾಧೇಶ್ ಚೌಟ, ವಿ.ಹಿಂ.ಪ ಸಹ ಕಾರ್ಯದರ್ಶಿ ಗುರುಪ್ರಸಾದ್ ಕದಂಬರ್, ಉಳ್ಳಾಲ ಬರಿಕೆ ಗುತ್ತು ಬರಿಕೆ ಫ್ಯಾಮಿಲಿ ಟ್ರಸ್ಟ್ ಅಧ್ಯಕ್ಷ ಸತೀಶ್ ಶೆಟ್ಟಿ, ಸಮಾಜ ಸೇವಕ ಹಾಗೂ ಉದ್ಯಮಿಗಳಾದ ಸತೀಶ್ ಉಳ್ಳಾಲ್ ದುಬೈ, ರಾಜೇಶ್ ಕುತ್ತಾರ್, ಉಳ್ಳಾಲ ನಗರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅಮಿತಾ ಅಶ್ವಿನ್, ಉಳ್ಳಾಲ ಶ್ರೀ ಚೀರುಂಭ ಭಗವತೀ ಕ್ಷೇತ್ರದ ಮಾಜಿ ಅಧ್ಯಕ್ಷ ಚಂದ್ರಹಾಸ್ ಉಳ್ಳಾಲ್, ರಾಮಚಂದ್ರ ಉಚ್ಚಿಲ್, ಶ್ರೀ ವ್ಯಾಘ್ರ ಚಾಮುಂಡೇಶ್ವರಿ ಕ್ಷೇತ್ರ ಮೊಗವೀರಪಟ್ನ ಉಳ್ಳಾಲದ ಮುಖ್ಯ ಅರ್ಚಕ ಸುಭಾಶ್ ಪೂಜಾರಿ, ಶ್ರೀ ಮಹಾಗಣಪತಿ ವೈದ್ಯನಾಥ ದೈವಸ್ಥಾನ ಬೈದ್ಯರಪಾಲು ಕ್ಷೇತ್ರದ ದೈವ ಸೇವಕ ಉಮೇಶ್ ಪೂಜಾರಿ ಬೈದ್ಯೆರಪಾಲು ಉಪಸ್ಥಿತರಿದ್ದರು.

ಶ್ರೀ ವೀರಾಂಜನೇಯ ವ್ಯಾಯಾಮ ಶಾಲೆ ನವನೀತ್ ಅಧ್ಯಕ್ಷರಾದ ನವನೀತ್ ಸ್ವಾಗತಿಸಿ, ಪ್ರಸ್ತಾವನೆಗೈದರು. ದೀಪಕ್ ಅಡ್ಯಾರ್ ನಿರೂಪಿಸಿ ವಂದಿಸಿದರು.

---


## ಕೃಷಿಭೂಮಿಯ ನಡುವೆ ನಗರದ ಸೌಲಭ್ಯ, ಹಳ್ಳಿಯ ನೆಮ್ಮದಿ;

# ತೊಕ್ಕೊಟ್ಟು ಪಿಲಾರಿನಲ್ಲಿ ಮಹಾಲಕ್ಷ್ಮೀ ಗಾರ್ಡನ್ಸ್

**ತೊಕ್ಕೊಟ್ಟು:** ಯಾರಿಗೂ ಕಿರಿಕಿರಿಯಿಲ್ಲದ ಪ್ರಶಾಂತ ವಾತಾವರಣ, ಸುತ್ತಲೂ ಹಸಿರು ಕೃಷಿಭೂಮಿ, ನಗರದ ಸೌಲಭ್ಯಗಳೊಂದಿಗೆ ಹಳ್ಳಿಯ ನೆಮ್ಮದಿ – ಇಂತಹ ಪರಿಸರದಲ್ಲಿ ಸ್ವಂತ ಮನೆ ನಿರ್ಮಿಸಿ ವಾಸಿಸುವುದು ಪ್ರತಿಯೊಬ್ಬರ ಕನಸು. ಈ ಕನಸಿಗೆ ಸೂಕ್ತವಾದ ಅವಕಾಶ ಇದೀಗ ಕುಟ್ಟಾರು, ತೊಕ್ಕೊಟ್ಟು, ದೇರಳಕಟ್ಟೆ ಭಾಗದಲ್ಲಿ ದೊರೆಯುತ್ತಿದೆ.

ಯೆನೆಪೋಯ ಆಸ್ಪತ್ರೆ ಸೇರಿದಂತೆ ಪ್ರಮುಖ ಆಸ್ಪತ್ರೆಗಳು ಹಾಗೂ ವೈದ್ಯಕೀಯ ಕಾಲೇಜುಗಳ ಸಮೀಪದಲ್ಲಿರುವ ಈ ಪ್ರದೇಶವು ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಪ್ರಮುಖ ವಸತಿ ಪ್ರದೇಶವಾಗಿದೆ. ಇಂತಹ ಉತ್ತಮ ಸ್ಥಳದಲ್ಲಿ ಪ್ರಶಾಂತ ವಾತಾವರಣದೊಂದಿಗೆ ಸೈಟ್ ದೊರೆಯುವುದು ಅಪರೂಪ.

ಈ ಹಿನ್ನೆಲೆಯಲ್ಲಿ ಪಿಲಾರು, ತೊಕ್ಕೊಟ್ಟಿನಲ್ಲಿ 'ಮಹಾಲಕ್ಷ್ಮೀ ಗಾರ್ಡನ್ಸ್' ಸುಸಜ್ಜಿತ ಡೆವಲಪ್ಡ್ ಲೇಔಟ್ ಆಗಿ ರೂಪುಗೊಂಡಿದೆ. ನೀರು, ವಿದ್ಯುತ್, ಪಾರ್ಕ್ ಸೇರಿದಂತೆ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಲಾಗಿದ್ದು, ಮನೆ ನಿರ್ಮಾಣಕ್ಕೆ ಅನುಕೂಲಕರವಾದ ಪರಿಸರವನ್ನು ಹೊಂದಿದೆ.

ನಗರದ ಗದ್ದಲದಿಂದ ದೂರವಿದ್ದರೂ ಪ್ರಮುಖ ಪ್ರದೇಶಗಳಿಗೆ ಸುಲಭ ಸಂಪರ್ಕ ಹೊಂದಿರುವ ಈ ಲೇಔಟ್‌ನಲ್ಲಿ ರೀಸನೇಬಲ್ ದರದಲ್ಲಿ ಸೈಟ್‌ಗಳು ಲಭ್ಯವಿವೆ. ಸ್ವಂತ ಮನೆ ನಿರ್ಮಿಸುವವರಿಗೆ ಮಾತ್ರವಲ್ಲದೆ, ಭವಿಷ್ಯದ ಹೂಡಿಕೆಯ ದೃಷ್ಟಿಯಿಂದಲೂ ಇದು ಗಮನಾರ್ಹ ಅವಕಾಶವಾಗಿದೆ.

'ಇಂತಹ ಸ್ಥಳದಲ್ಲಿ ಮನೆ ಕಟ್ಟುವುದೇ ಒಂದು ಖುಷಿ' ಎನ್ನುವ ಅನುಭವವನ್ನು ನೀಡುವಂತೆ ಪ್ರಕೃತಿಯ ಮಡಿಲಿನಲ್ಲಿ ಅಭಿವೃದ್ಧಿಪಡಿಸಿರುವ ಮಹಾಲಕ್ಷ್ಮೀ ಗಾರ್ಡನ್ಸ್, ನೆಮ್ಮದಿಯ ಜೀವನಶೈಲಿಯನ್ನು ಬಯಸುವ ಕುಟುಂಬಗಳಿಗೆ ಉತ್ತಮ ಆಯ್ಕೆಯಾಗಿದೆ.








### ಗುಣಮಟ್ಟಕ್ಕೆ ತನ್ನದೇ ಆದ ಛಾಪು

- ರಿಯಲ್ ಎಸ್ಟೇಟ್ ಮತ್ತು ನಿರ್ಮಾಣ ಕ್ಷೇತ್ರದಲ್ಲಿ ದಶಕಗಳ ಅನುಭವ ಹೊಂದಿರುವ ಶ್ರೀ ಮೂಕಾಂಬಿಕಾ ಕನ್‌ಸ್ಟ್ರಕ್ಷನ್ಸ್ ಗುಣಮಟ್ಟ, ಪ್ರಾಮಾಣಿಕತೆ, ಪಾರದರ್ಶಕತೆ ಹಾಗೂ ಗ್ರಾಹಕರ ವಿಶ್ವಾಸಕ್ಕೆ ಆದ್ಯತೆ ನೀಡುತ್ತಾ ತನ್ನದೇ ಆದ ಛಾಪು ಮೂಡಿಸಿದೆ.
- ಸಂಸ್ಥೆಯ ಪ್ರೊಪ್ರೈಟರ್ ಶ್ರೀ ಚಂದ್ರಹಾಸ ಅವರ ನೇತೃತ್ವದಲ್ಲಿ, ಕೇವಲ ಕಟ್ಟಡಗಳನ್ನು ನಿರ್ಮಿಸುವುದಲ್ಲದೆ, ಗ್ರಾಹಕರ ಜೀವನಶೈಲಿಯನ್ನು ಉತ್ತಮಗೊಳಿಸುವ ಗುಣಮಟ್ಟದ ವಾಸಸ್ಥಳಗಳನ್ನು ರೂಪಿಸುವುದು ಸಂಸ್ಥೆಯ ಪ್ರಮುಖ ಉದ್ದೇಶವಾಗಿದೆ.
- ಆಧುನಿಕ ತಂತ್ರಜ್ಞಾನ, ಉತ್ತಮ ನಿರ್ಮಾಣ ಪದ್ಧತಿ ಹಾಗೂ ಗ್ರಾಹಕಕೇಂದ್ರಿತ ಸೇವೆಯೊಂದಿಗೆ ಪ್ರತಿಯೊಂದು ಯೋಜನೆಯಲ್ಲೂ ನಿಖರತೆ, ಗುಣಮಟ್ಟ ಮತ್ತು ಸಮಯಪಾಲನೆಗೆ ಸಂಸ್ಥೆ ಒತ್ತು ನೀಡುತ್ತಿದೆ.
- ಸ್ವಂತ ಮನೆ ಎಂಬ ಕನಸನ್ನು ನನಸಾಗಿಸಿಕೊಳ್ಳಲು ಇಂತಹ ಅವಕಾಶಗಳು ಪದೇಪದೇ ಸಿಗುವುದಿಲ್ಲ. ಇದೀಗಲೇ ಸೈಟ್ ಖರೀದಿಸಿ, ನಿಮ್ಮ ಕನಸಿನ ಸುಸಜ್ಜಿತ ಮನೆಯನ್ನು ನಿಮ್ಮದಾಗಿಸಿಕೊಳ್ಳಿ.

**ಸಂಪರ್ಕಿಸಿ: ಶ್ರೀ ಮೂಕಾಂಬಿಕಾ ಕನ್‌ಸ್ಟ್ರಕ್ಷನ್ಸ್, 3ನೇ ಮಹಡಿ, ಅನಂತೇಶ್ ಕಮರ್ಷಿಯಲ್ ಬಿಲ್ಡಿಂಗ್, ಫ್ಲವರ್ ಮಾರ್ಕೆಟ್ ಪಕ್ಕದಲ್ಲಿ, ಕಾರ್‌ಸ್ಟ್ರೀಟ್, ಮಂಗಳೂರು–575001.**

**+91 90369 99349, +91 95381 39394**

### ಮಂಗಳೂರಿನಲ್ಲಿ 'ಹಲ್ಕಾ ಡಾನ್' ಚಿತ್ರೀಕರಣ ಬಹುತೇಕ ಪೂರ್ಣ; ಕುತ್ತಾರು ಕೊರಗಜ್ಜ ಆದಿಸ್ಥಳಕ್ಕೆ ಚಿತ್ರತಂಡ ಭೇಟಿ

# 'ಹಲ್ಕಾ ಡಾನ್' ತುಳು ಭಾಷೆಯಲ್ಲೂ ಚಿತ್ರ ಬಿಡುಗಡೆಗೆ ನಿರ್ಧಾರ



**ಉಳ್ಳಾಲ:** ವೀನಸ್ ಎಂಟರ್ ಟೈನರ್ ಬ್ಯಾನರ್ ಅಡಿಯಲ್ಲಿ "ಸಲಗ" ಚಿತ್ರ ಖ್ಯಾತಿಯ ನಿರ್ಮಾಪಕ ಕೆ.ಪಿ. ಶ್ರೀಕಾಂತ್ ನಿರ್ಮಾಣದಲ್ಲಿ ಹಾಗೂ ವೆಂಕಟಾಚಲ (ಚಲಂ) ನಿರ್ದೇಶನದಲ್ಲಿ ಮಂಗಳೂರನ್ನು ಕೇಂದ್ರವಾಗಿರಿಸಿಕೊಂಡು ಚಿತ್ರೀಕರಣಗೊಳ್ಳುತ್ತಿರುವ ಕನ್ನಡ–ತೆಲುಗು ದ್ವಿಭಾಷಾ ಆ್ಯಕ್ಷನ್ ಹಾಸ್ಯಚಿತ್ರ 'ಹಲ್ಕಾ ಡಾನ್' ಚಿತ್ರದ ಚಿತ್ರೀಕರಣ ಬಹುತೇಕ ಪೂರ್ಣಗೊಂಡಿದೆ.

ಈ ಹಿನ್ನೆಲೆಯಲ್ಲಿ ಚಿತ್ರತಂಡ ಸೋಮವಾರ ಕುತ್ತಾರು ದೆಕ್ಕಾಡು ಕೊರಗಜ್ಜ ಆದಿಸ್ಥಳಕ್ಕೆ ಭೇಟಿ ನೀಡಿ ವಿಶೇಷ ಪ್ರಾರ್ಥನೆ ಸಲ್ಲಿಸಿ, ಆಶೀರ್ವಾದ ಪಡೆದಿತು. ಬಳಿಕ ಅಲ್ಲಿಯೇ ಸುದ್ದಿಗೋಷ್ಠಿ ನಡೆಸಿ ಚಿತ್ರದ ಕುರಿತು ಮಾಹಿತಿ ಹಂಚಿಕೊಂಡಿತು.

ಚಿತ್ರದಲ್ಲಿ ಪ್ರಮೋದ್ ಪಂಜು, ರಾಕ್ ಸ್ಟಾರ್ ರೂಪೇಶ್ ಶೆಟ್ಟಿ ಹಾಗೂ ಅಮೃತಾ ಅಯ್ಯಂಗಾರ್ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸುತ್ತಿದ್ದು, ತುಳು ಹಾಗೂ ಕನ್ನಡ ಚಿತ್ರರಂಗದ ಖ್ಯಾತ ಕಲಾವಿದರಾದ ಅರವಿಂದ್ ಬೋಳಾರ್ ಸೇರಿದಂತೆ ಸಾಯಿ ಕುಮಾರ್, ಜ್ಯೋತಿ ಪೂರ್ವಜ್ ಹಾಗೂ ರಮೇಶ್ ಇಂದಿರಾ ಪ್ರಮುಖ ಪೋಷಕ ಪಾತ್ರಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಸತ್ಯ ಹೆಗ್ಡೆ ಛಾಯಾಗ್ರಹಣ, ಅರ್ಜುನ್ ಕಿಟ್ಟು ಸಂಕಲನ ಹಾಗೂ ವಿ. ಹರಿಕೃಷ್ಣ ಸಂಗೀತ ಸಂಯೋಜನೆ ಚಿತ್ರಕ್ಕಿದೆ.

ನಾಯಕ ನಟ ಪ್ರಮೋದ್ ಪಂಜು ಮಾತನಾಡಿ, ಮಂಗಳೂರಿನಲ್ಲಿ ನಡೆಯುವ ಕಥೆಯನ್ನು ಆಧರಿಸಿದ ಚಿತ್ರದಲ್ಲಿ ಅಭಿನಯಿಸಲು ಅವಕಾಶ ದೊರೆತಿರುವುದು ಸಂತಸ ತಂದಿದೆ ಎಂದರು. ಚಿತ್ರದಲ್ಲಿ ಅನುಭವಿ ಕಲಾವಿದರಾದ ಅರವಿಂದ್ ಬೋಳಾರ್ ಹಾಗೂ ರೂಪೇಶ್ ಶೆಟ್ಟಿ ಅವರೊಂದಿಗೆ ಕೆಲಸ ಮಾಡುತ್ತಿರುವುದು ಉತ್ತಮ ಅನುಭವ ನೀಡಿದೆ ಎಂದು ಹೇಳಿದರು. ಚಿತ್ರದ ಬಹುತೇಕ ಚಿತ್ರೀಕರಣ ಮಂಗಳೂರಿನಲ್ಲಿ ನಡೆದಿರುವ ಹಿನ್ನೆಲೆಯಲ್ಲಿ ಸ್ಥಳೀಯ ಜನರಿಗೆ ತಮ್ಮದೇ ಭಾಷೆಯಲ್ಲಿ ಚಿತ್ರವನ್ನು ತಲುಪಿಸುವ ಉದ್ದೇಶದಿಂದ ತುಳು ಭಾಷೆಯಲ್ಲೂ ಚಿತ್ರವನ್ನು ನಿರ್ಮಿಸಲು ನಿರ್ಧರಿಸಲಾಗಿದೆ ಎಂದು ಅವರು ತಿಳಿಸಿದರು.

ನಟ ರೂಪೇಶ್ ಶೆಟ್ಟಿ ಮಾತನಾಡಿ, ತುಳು ಹಾಗೂ ಕನ್ನಡ ಚಿತ್ರಗಳಲ್ಲಿ ಈ ಹಿಂದೆ ಅಭಿನಯಿಸಿದ್ದರೂ ಉತ್ತಮ ಬ್ಯಾನರ್‌ನೊಂದಿಗೆ ಕೆಲಸ ಮಾಡಬೇಕು ಎಂಬ ಆಸೆಯಿತ್ತು. ಇದೀಗ 'ಹಲ್ಕಾ ಡಾನ್' ಮೂಲಕ ಆ ಅವಕಾಶ ದೊರೆತಿರುವುದು ಸಂತಸ ತಂದಿದೆ ಎಂದರು.

"ನಿರ್ಮಾಪಕ ಕೆ.ಪಿ. ಶ್ರೀಕಾಂತ್ ಅವರು ಕಥೆ ಹೇಳಿದಾಗಲೇ ಚಿತ್ರದಲ್ಲಿ ಅಭಿನಯಿಸಲು ಒಪ್ಪಿಕೊಂಡೆ. ನಿರ್ದೇಶಕ ಚಲಂ ಅವರೊಂದಿಗೆ ಮೊದಲ ಭೇಟಿಯಲ್ಲೇ ಸಾಕಷ್ಟು ನಕ್ಕಿದ್ದೆ. 'ಹಲ್ಕಾ ಡಾನ್' ಎಂಬ ಶೀರ್ಷಿಕೆಯೇ ಕುತೂಹಲ ಮೂಡಿಸುತ್ತದೆ. ಮಂಗಳೂರಿನ ಡಾನ್ ಒಬ್ಬನ ಕಥೆಯನ್ನು ವಿಭಿನ್ನ ಹಾಗೂ ಹಾಸ್ಯಮಯವಾಗಿ ಚಿತ್ರದಲ್ಲಿ ಕಟ್ಟಿಕೊಡಲಾಗಿದೆ. ಚಿತ್ರದ ಪ್ರಚಾರವನ್ನೂ ವಿಭಿನ್ನ ರೀತಿಯಲ್ಲಿ ನಡೆಸುವ ಆಲೋಚನೆ ಇದೆ," ಎಂದು ಹೇಳಿದರು.

ನಿರ್ದೇಶಕ ವೆಂಕಟಾಚಲ (ಚಲಂ) ಮಾತನಾಡಿ, 'ಹಲ್ಕಾ ಡಾನ್' ಒಬ್ಬ ಆಕರ್ಷಕ ಆದರೆ ಮುಗ್ಧ ಸ್ವಭಾವದ ವ್ಯಕ್ತಿ ಅನಿರೀಕ್ಷಿತವಾಗಿ ಪ್ರಬಲ ಗ್ಯಾಂಗ್‌ನ ಮುಖವಾಗುವ ಕಥೆಯನ್ನು ಒಳಗೊಂಡಿದೆ. ಬಳಿಕ ಸ್ಥಳೀಯ ಭೂಗತ ಲೋಕದ ಪೈಪೋಟಿಯಲ್ಲಿ ಸಿಲುಕಿಕೊಳ್ಳುವ ನಾಯಕ, ತನ್ನ ಬುದ್ಧಿವಂತಿಕೆ, ಅನಿರೀಕ್ಷಿತ ಮೈತ್ರಿಗಳು ಹಾಗೂ ಅಮೃತಾ ಅವರ ಪಾತ್ರದ ನೆರವಿನಿಂದ ಎದುರಾಗುವ ಸವಾಲುಗಳನ್ನು ಹೇಗೆ ಎದುರಿಸುತ್ತಾನೆ ಎಂಬುದನ್ನು ಹಾಸ್ಯ ಹಾಗೂ ಆಕ್ಷನ್‌ನೊಂದಿಗೆ ಚಿತ್ರಿಸಲಾಗಿದೆ ಎಂದರು. "ಇದು ನನ್ನ ನಿರ್ದೇಶನದ ಮೊದಲ ಚಿತ್ರ. ಇಷ್ಟು ದೊಡ್ಡ ಬ್ಯಾನರ್‌ನಲ್ಲಿ ಕೆಲಸ ಮಾಡುವ ಅವಕಾಶ ನೀಡಿದ ನಿರ್ಮಾಪಕರು ಹಾಗೂ ಇಡೀ ಚಿತ್ರತಂಡಕ್ಕೆ ನಾನು ಕೃತಜ್ಞ," ಎಂದು ಚಲಂ ಹೇಳಿದರು.

ಈಗಾಗಲೇ ಕನ್ನಡದಲ್ಲಿ ಮೈಲಾರಿ, ಟಗರು, ಸಲಗ, U I, ನಂತಹ ಸೂಪರ್ ಹಿಟ್ ಸಿನಿಮಾಗಳನ್ನು ನಿರ್ಮಿಸಿರುವ ನಿರ್ಮಾಪಕ ಕೆ.ಪಿ. ಶ್ರೀಕಾಂತ್ ಮಾತನಾಡಿ, ಆರಂಭದಲ್ಲಿ ಕನ್ನಡ ಹಾಗೂ ತೆಲುಗು ಭಾಷೆಗಳಲ್ಲಿ ಚಿತ್ರ ನಿರ್ಮಿಸುವ ಉದ್ದೇಶವಿತ್ತು. ಆದರೆ ಚಿತ್ರದ ಬಹುತೇಕ ಚಿತ್ರೀಕರಣ ಮಂಗಳೂರಿನಲ್ಲಿ ನಡೆದಿರುವುದರಿಂದ ಇಲ್ಲಿನ ಜನರ ಭಾಷೆಯಾದ ತುಳುವಿನಲ್ಲೂ ಚಿತ್ರವನ್ನು ನಿರ್ಮಿಸಿ ಪ್ರೇಕ್ಷಕರಿಗೆ ತಲುಪಿಸಬೇಕು ಎಂಬ ಆಶಯ ಮೂಡಿತು. ಈ ಹಿನ್ನೆಲೆಯಲ್ಲಿ ತುಳು ಭಾಷೆಯಲ್ಲೂ ಚಿತ್ರವನ್ನು ತರುವ ನಿರ್ಧಾರ ಕೈಗೊಳ್ಳಲಾಗಿದೆ ಎಂದರು.

"ಕುತ್ತಾರು ಕೊರಗಜ್ಜ ಸನ್ನಿಧಿಗೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿ ಆಶೀರ್ವಾದ ಪಡೆದಿದ್ದೇವೆ. ಮಂಗಳೂರಿನಲ್ಲಿ ಚಿತ್ರೀಕರಣಗೊಂಡಿರುವ ಚಿತ್ರವನ್ನು ಇಲ್ಲಿನ ಜನರ ಭಾಷೆಯಾದ ತುಳುವಿನಲ್ಲಿ ನೀಡಬೇಕು ಎಂಬುದು ನಮ್ಮ ಆಶಯ. ಮಂಗಳೂರಿನಲ್ಲಿ ಚಿತ್ರ ಯಶಸ್ವಿಯಾದರೆ ಇಡೀ ಕರ್ನಾಟಕದಲ್ಲೇ ಯಶಸ್ವಿಯಾದಂತೆ ಎಂಬ ನಂಬಿಕೆ ನಮ್ಮದು. ದಕ್ಷಿಣ ಕನ್ನಡ ಜಿಲ್ಲೆಯ ಪ್ರೇಕ್ಷಕರು ಉತ್ತಮ ಸಿನಿಮಾಗಳನ್ನು ಗುರುತಿಸುವ ಸಾಮರ್ಥ್ಯ ಹೊಂದಿದ್ದಾರೆ. ಚಿತ್ರಕ್ಕೆ ಪರಶುರಾಮನ ಆಶೀರ್ವಾದ ಸದಾ ಇರಲಿ ಎಂಬುದು ನಮ್ಮ ಆಶಯ," ಎಂದು ಕೆ ಪಿ ಶ್ರೀಕಾಂತ್ ಹೇಳಿದರು.

ಹಾಸ್ಯನಟ ಅರವಿಂದ್ ಬೋಳಾರ್ ಮಾತನಾಡಿ, ಕೆ.ಪಿ. ಶ್ರೀಕಾಂತ್ ಹಾಗೂ ನಾಗೇಂದ್ರ ಪ್ರಸಾದ್ ಅವರ ಸಹಯೋಗದಲ್ಲಿ ಉತ್ತಮ ಚಿತ್ರವೊಂದು ನಿರ್ಮಾಣವಾಗುತ್ತಿದೆ. ಚಿತ್ರತಂಡದೊಂದಿಗೆ ಕೆಲಸ ಮಾಡುತ್ತಿರುವುದು ಸಂತಸ ತಂದಿದೆ ಎಂದರು. ತಮಗೆ ನಾಯಕಿಯ ಪಾತ್ರ ಸಿಕ್ಕಿಲ್ಲ ಎಂದು ಹಾಸ್ಯವಾಗಿ ಹೇಳಿದ ಬೋಳಾರ್, ಜನಪ್ರಿಯ ಕನ್ನಡ ಧಾರಾವಾಹಿಯಲ್ಲಿ ಅಭಿನಯಿಸಿದ್ದ ನಾಯಕ ಇಂದು ದೊಡ್ಡ ನಾಯಕನಾಗಿ ಬೆಳೆದಿರುವುದು ಅವರ ಪರಿಶ್ರಮಕ್ಕೆ ಸಾಕ್ಷಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. "ಚಿತ್ರದ ಸೆಟ್‌ನ ವಾತಾವರಣ ತುಂಬಾ ಉತ್ತಮವಾಗಿದೆ. ಒಳ್ಳೆಯ ತಂಡದೊಂದಿಗೆ ಉತ್ತಮ ಚಿತ್ರದಲ್ಲಿ ಕೆಲಸ ಮಾಡುತ್ತಿರುವ ಸಂತೋಷವಿದೆ. 'ಹಲ್ಕಾ ಡಾನ್' ಯಶಸ್ವಿಯಾಗುವುದರಲ್ಲಿ ಯಾವುದೇ ಅನುಮಾನವಿಲ್ಲ," ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ನಿರ್ದೇಶಕ ಹಾಗೂ ನಟ ಸುಜಯ್ ಶಾಸ್ತ್ರಿ, ಮೆನೇಜರ್ ಸುಧೀರ್, ನಿರ್ದೇಶಕ ಛಲಂ, ನಿರ್ಮಾಪಕ ಕೆ.ಪಿ ಶ್ರೀಕಾಂತ್, ತುಳುನಾಡ ಮಾಣಿಕ್ಯ ಅರವಿಂದ ಬೋಳಾರ್, ಕ್ಯಾಮರಾಮೆನ್ ಸತ್ಯ ಹೆಗಡೆ, ಶ್ರೀ ಪಂಜಂದಾಯ ಬಂಟ ವೈದ್ಯನಾಥ ಆದಿ ಕೊರಗತನಿಯ ಸೇವಾ ಟ್ರಸ್ಟೀ ಮಹಾಬಲ ಹೆಗ್ಡೆ ದೆಪ್ಪೆಲಿಮಾರ್, ನಟ ರೂಪೇಶ್ ಶೆಟ್ಟಿ, ಗೌತಮ್ ಮಂಗಳೂರು ಉಪಸ್ಥಿತರಿದ್ದರು.

## ಗ್ರಾಹಕರಿಗೆ ಉತ್ತಮ ಸೇವೆ; ಮೆಸ್ಕಾಂ ಮೆಕ್ಯಾನಿಕ್ ಸಂತೋಷ್ ಲೋಬೋರಿಗೆ ಸಚಿವರಿಂದ ಸನ್ಮಾನ



**ಕುತ್ತಾರು:** ಗ್ರಾಹಕರಿಗೆ ಉತ್ತಮ ಸೇವೆ ನೀಡಿರುವ ಮೆಸ್ಕಾಂ ಉಳ್ಳಾಲ ಶಾಖೆ–ಯ ಮೆಕ್ಯಾನಿಕ್ ಸಂತೋಷ್ ಲೋಬೋ ಅವರನ್ನು ಕುತ್ತಾರು ಮದನಿನಗರದ ಮದನಿನಗರ ಜುಮಾ ಮಸೀದಿ, ಖುವತ್ತುಲ್ ಇಸ್ಲಾಂ ಮದರಸ ವತಿಯಿಂದ ಈದ್ ಮಿಲಾದ್ ಪ್ರಯುಕ್ತ ಆಯೋಜಿಸಲಾಗಿದ್ದ ಮೆಹಫಿಲ್ ತ್ವೈಬಾ ಕಾರ್ಯಕ್ರಮದಲ್ಲಿ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಯು.ಟಿ. ಖಾದರ್ ಅವರು ಸನ್ಮಾನಿಸಿದರು.

ಈ ಸಂದರ್ಭ ಮದನಿನಗರದ ಖತೀಬರಾದ ಖತೀಬ್ ಉಸ್ತಾದ್, ಉಳ್ಳಾಲ ಸೈಯ್ಯದ್ ಮದನಿ ದರ್ಗಾ ಅಧ್ಯಕ್ಷ ಹನೀಫ್ ಹಾಜಿ , ಸಾಮಾಜಿಕ ಮುಖಂಡ ಹೈದರ್ ಪರ್ತಿಪ್ಪಾಡಿ, ಸಾಖೀಲ್ ಮಾಖವಿ ಸೌದಿ ಅರೇಬಿಯಾ, ಮದನಿ ನಗರ ಜಮಾಅತ್ ಅಧ್ಯಕ್ಷ ಅಬ್ದುಲ್ ಅಝೀಝ್ ಮದನಿ, ಉಪಾಧ್ಯಕ್ಷರಾದ ಸಿರಾಜ್ ಮದನಿನಗರ, ಉಳ್ಳಾಲ ದರ್ಗಾ ಸಮಿತಿ ಸದಸ್ಯರಾದ ಮುಸ್ತಾಫ, ಹಾಶಿರ್, ಸಾದಿಕ್ ಎಂ.ಕೆ, ಮುನಾವರ್, ಅಶ್ರಫ್, ಮುನ್ನೂರು ಗ್ರಾ.ಪಂ. ಮಾಜಿ ಉಪಾಧ್ಯಕ್ಷ ಮಹಾಬಲ್ ಟಿ ದೆಪ್ಪೆಲಿಮಾರ್, ಫಾರುಕ್, ಅಶ್ರಫ್, ಅಝೀಝ್, ಪುತ್ತುಬಾವ ಉಪಸ್ಥಿತರಿದ್ದರು.

## ಭಜನಾ ಮಂದಿರಕ್ಕೆ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಭೇಟಿ



**ಉಳ್ಳಾಲ:** ಮುಲಾರ ಪೂರ್ಣಗಿರಿಯ ಶ್ರೀ ಗೋಪಾಲಕೃಷ್ಣ ಭಜನಾ ಮಂದಿರದಲ್ಲಿ ಆ.12ರಿಂದ ಸೆ.4ರವರೆಗೆ ಶ್ರೀಕೃಷ್ಣ ಜನ್ಮಾಷ್ಟಮಿಯ ಅಂಗವಾಗಿ ನಡೆಯುತ್ತಿರುವ 24 ದಿನಗಳ ಸಂಧ್ಯಾ ಭಜನಾ ಕಾರ್ಯಕ್ರಮ ಭಕ್ತಿಭಾವದಿಂದ ಸಾಗುತ್ತಿದೆ.

ಭಜನಾ ಕಾರ್ಯಕ್ರಮದ 15ನೇ ದಿನವಾದ ಆ.26ರಂದು ದಕ್ಷಿಣ ಕನ್ನಡ ಜಿಲ್ಲೆಯ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರು ತಮ್ಮ ತಂಡದೊಂದಿಗೆ ಶ್ರೀ ಗೋಪಾಲಕೃಷ್ಣ ಭಜನಾ ಮಂದಿರಕ್ಕೆ ಭೇಟಿ ನೀಡಿ ಭಜನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಬಳಿಕ ಭಕ್ತರು ಹಾಗೂ ಕಾರ್ಯಕ್ರಮದ ಆಯೋಜಕರಿಗೆ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಮಂದಿರ ಹಾಗೂ ಮಾತೃ ಮಂಡಳಿಯ ಅಧ್ಯಕ್ಷರು, ಪದಾಧಿಕಾರಿಗಳು, ಮಂದಿರದ ಹಿರಿಯರು, ಕಿರಿಯರು, ಭಜನಾ ತಂಡದ ಸದಸ್ಯರು ಹಾಗೂ ಭಕ್ತ ಮಿತ್ರರು ಉಪಸ್ಥಿತರಿದ್ದರು.

ಸನಾತನ ಸಂಸ್ಕೃತಿ, ಭಜನಾ ಪರಂಪರೆ ಹಾಗೂ ಧಾರ್ಮಿಕ ಆಚರಣೆಗಳ ಸಂರಕ್ಷಣೆ ಮತ್ತು ಅವುಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ನಿಟ್ಟಿನಲ್ಲಿ ಇಂತಹ ಕಾರ್ಯಕ್ರಮಗಳು ಮಹತ್ವದ ಪಾತ್ರ ವಹಿಸುತ್ತವೆ ಎಂದು ಸಂಸದರು ಹೇಳಿದರು.

ಮಂಜೇಶ್ವರ ಹೊಸಬೆಟ್ಟು ಜಮ್ಮದ ಮನೆ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಸಭಾಂಗಣದಲ್ಲಿ ನಡೆದ ಶ್ರೀ ಗುರು ರಾಘವೇಂದ್ರ ಸ್ವಾಮಿಗಳ 355ನೇ ಆರಾಧನಾ ಮಹೋತ್ಸವದಲ್ಲಿ ಅನುಗ್ರಹ ಸಂದೇಶ ನೀಡಿ ಅವರು ಮಾತನಾಡಿದರು.

## ಸಾಂಬಾರಿನಲ್ಲಿ ಜಿರಳೆ ಇದೆಯೆಂಬ ದೂರಿನ್ವಯ ತೊಕ್ಕೊಟ್ಟು ಹೋಟೆಲ್‌ಗೆ ದಾಳಿ!



**ತೊಕ್ಕೊಟ್ಟು:** ಇತ್ತೀಚೆಗೆ ಆಹಾರ ಸುರಕ್ಷತಾ ಕ್ರಮಗಳನ್ನು ಪಾಲಿಸದ ಕೆಲವೊಂದಿಷ್ಟು ಹೋಟೆಲ್ ಸೇರಿದಂತೆ ಆಹಾರ ತಯಾರಿಕಾ ಘಟಕಗಳಿಗೆ ಆಹಾರ ಇಲಾಖಾ ಅಧಿಕಾರಿಗಳು ದಾರಿಯನ್ನು ನಡೆಸುತ್ತಿದ್ದಾರೆ. ಇದೀಗ ತೊಕ್ಕೊಟ್ಟುವಿಲ್ಲಿ ಕಾರ್ಯಾಚರಿಸುತ್ತಿರುವ ಹೋಟೆಲ್‌ವೊಂದಕ್ಕೆ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಈ ಬಗ್ಗೆ ಜಿಲ್ಲಾ ಆಹಾರ ಸುರಕ್ಷತಾ ಅಂಕಿತ ಅಧಿಕಾರಿ ಡಾ.ಪ್ರವೀಣ್ ಕುಮಾರ್ ಮಾತನಾಡಿ, ಸಾಂಬಾರಿನಲ್ಲಿ ಜಿರಳೆ ಇದೆ ಎಂದು ಗ್ರಾಹಕರೊಬ್ಬರು ನೀಡಿದ ದೂರಿನ ಮೇರೆಗೆ ದಾಳಿ ನಡೆಸಲಾಗಿದೆ. ಅಡುಗೆ ಕೋಣೆಯಲ್ಲಿ ಆಹಾರ ದಾಸ್ತನು ಮಾಡಲು ಪ್ರತ್ಯೇಕ ಕೊಠಡಿಯಿಲ್ಲದೆ ಎಲ್ಲೆಂದರಲ್ಲಿ ಆಹಾರ ಪದಾರ್ಥಗಳನ್ನು ರಾಶಿ ಹಾಕಲಾಗಿತ್ತಿ. ಎಲ್ಲ ಆಹಾರ ಪದಾರ್ಥ ತೆರವುಗೊಳಿಸಿ ಅಡುಗೆ ಕೋಣೆ ಶುಚಿಗೊಳಿಸಲಾಗಿದೆ. ಆಹಾರ ಪದಾರ್ಥಗಳನ್ನು ಪ್ರತ್ಯೇಕವಾಗಿ ಜೋಡಿಸಿಡಲು ಹೋಟೆಲ್ ಮಾಲೀಕರಿಗೆ ನಿರ್ದೇಶನ ನೀಡಲಾಗಿದೆ. ಇದರ ಜೊತೆಗೆ ಮಾಲೀಕರಿಗೆ ನೋಟಿಸ್ ನೀಡಿ ಎಡಿಸಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸುವುದಾಗಿ ತಿಳಿಸಿದ್ದಾರೆ.

## ಮುಂಬೈಯಲ್ಲಿ 'ವೆಲ್ಡ್ ಘಡಿ' ಸಂಗೀತ ಟೀಸರ್ ಹಾಗೂ ಪೋಸ್ಟರ್ ಬಿಡುಗಡೆ



**ಮುಂಬೈ:** ಜಾನ್ ವಿಲ್ಸನ್ ಲೋಬೋ ನಿರ್ಮಾಣದ ಬಹುನಿರೀಕ್ಷಿತ 'ವೆಲ್ಡ್ ಘಡಿ' ಕೊಂಕಣಿ ಚಿತ್ರದ ಸಂಗೀತ ಟೀಸರ್ ಹಾಗೂ ಪೋಸ್ಟರ್ ಬಿಡುಗಡೆ ಕಾರ್ಯಕ್ರಮ ಮುಂಬೈನ ಸಕಿನಾಕಾ ಖಾಸಗಿ ಸಭಾಂಗಣದಲ್ಲಿ ನಡೆಯಿತು.

ಬಾಂಬೆ ಹೈಕೋರ್ಟ್ ವಕೀಲೆ ಹಾಗೂ ಮೆ| ಪಿ. ವಾಸ್ & ಕಂಪನಿಯ ಪಾಲುದಾರೆ ಅಡ್ವೋಕೇಟ್ ಜೆನೆವೀವ್ ಪಿ. ವಾಸ್ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ ಚಲನಚಿತ್ರಗಳು ಭಾಷಾಭಿಮಾನದ ಜಾಗೃತಿಗೆ ಪೂರಕವಾಗಿವೆ. ಕೊಂಕಣಿ ಸಿನಿರಸಿಕರನ್ನು ಒಂದೆಡೆ ಸೇರಿಸಿ ಭಾಷಾಭಿಮಾನವನ್ನು ಮೆರೆಯುತ್ತಿರುವುದು ಸ್ತುತ್ಯರ್ಹ. ಇದು ಕೊಂಕಣಿ ಭಾಷೆಯ ವೈಭವ ಮತ್ತು ಸಾಂಸ್ಕೃತಿಕ ಹಿರಿಮೆಯ ಪ್ರತೀಕವಾಗಿದೆ. ಮಾತೃಭಾಷೆಯ ಪರಂಪರೆಯನ್ನು ಜೀವಂತವಾಗಿರಿಸಲು ಹಾಗೂ ಕೊಂಕಣಿ ಚಿತ್ರರಂಗದ ಬೆಳವಣಿಗೆಗೆ ಪ್ರೋತ್ಸಾಹ ನೀಡುವಲ್ಲಿ ಚಿತ್ರ ಪ್ರದರ್ಶನಗಳು ಮಹತ್ವದ ಸೇತುವೆಯಾಗಿವೆ. 'ವೇಳ್ ಘಡಿ' ಚಿತ್ರ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿ ಇತಿಹಾಸದ ಪುಟ ಸೇರುವಂತಾಗಲಿ ಎಂದು ಹೇಳಿದರು.





ಈಸಂದರ್ಭದಲ್ಲಿಲೋಬೋಪ್ರೊಡಕ್ಷನ್' ಸಂಸ್ಥೆಗೆ ಚಾಲನೆ ನೀಡಲಾಯಿತು. ಸಜಾನ್ ಮೂವಿ ಪ್ರೊಡ್ಯೂಸರ್ ಲಾರೆನ್ಸ್ ಡಿಸೋಜಾ, ಹ್ಯಾರಿ ಫೆರ್ನಾಂಡಿಸ್, ವಾಲ್ಟರ್ ನಂದಲಿಕೆ, ಎಂಸಿಸಿ ಬ್ಯಾಂಕ್ ಅಧ್ಯಕ್ಷ ಅನಿಲ್ ಲೋಬೊ, ಮಹಾರಾಷ್ಟ್ರ ಕನ್ನಡಿಗರ ಪತ್ರಕರ್ತರ ಸಂಘ ಮಾಜಿ ಅಧ್ಯಕ್ಷ ರೋನ್ಸ್ ಬಂಟ್ವಾಳ್ ಮುಖ್ಯ ಅತಿಥಿಯಾಗಿ ಭಾಗವಹಿಸಿದರು.

ಯುವ ಲೇಖಕ ಹಾಗೂ ಕಲಾ ನಿರ್ದೇಶಕ ಸ್ಟ್ಯಾನಿ ಬೇಳಾ, ಮೈಕಲ್ ಡಿ'ಸೋಜಾ, ಕೋ–ಡೈರೆಕ್ಟರ್ ರೋಷನ್ ನೆಲ್ಲಿಗುಡ್ಡೆ, ವೈಲೆಟ್ ವಿಲ್ಸನ್ ಲೋಬೋ, ಲಿಯೋ ರಾಣಿಪುರ, ಮೂವಿ ಹೇರಿಯೋನ್ ಜೇಸ್ಲಿನ್ ನೂರನ್ಹ, ತಾರಾ ಬಂಟ್ವಾಳ್, ಸೇರಿದಂತೆ 'ವೇಳ್ ಘಡಿ' ಚಿತ್ರದ ತಂಡದ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಅಡ್ಕರೆ ಪಡ್ಪು: ಉಳ್ಳಾಲ ಹೋಬಳಿ ಮಟ್ಟದ ಬಾಲಕ–ಬಾಲಕಿಯರ ಕಬಡ್ಡಿ ಪಂದ್ಯಾಟ



**ದೇರಳಕಟ್ಟೆ :** ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಶಾಲಾ ಶಿಕ್ಷಣ ಇಲಾಖೆ ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿ ಮಂಗಳೂರು ದಕ್ಷಿಣ ವಲಯ ಹಾಗೂ ಜಮೀಯ್ಯತುಲ್ ಫಲಾಹ್ ಗ್ರೀನ್ ವೀವ್ ಪ್ರೌಢ ಶಾಲೆ, ಅಡ್ಕರೆ ಪಡ್ಪು ಕೊಣಾಜೆ ಇವರ ಸಹಯೋಗದಲ್ಲಿ 17 ವರ್ಷದ ವಯೋಮಿತಿಯ 2026–27 ನೇ ಸಾಲಿನ ಪ್ರೌಢ ಶಾಲಾ ಬಾಲಕ – ಬಾಲಕಿಯರ ಹೋಬಳಿ ಮಟ್ಟದ ಕಬಡ್ಡಿ ಪಂದ್ಯಾಟವು ಜಮೀಯ್ಯತುಲ್ ಫಲಾಹ್ ಗ್ರೀನ್ ವೀವ್ ಪ್ರೌಢ ಶಾಲೆಯಲ್ಲಿ ಸೋಮವಾರ ಜರುಗಿತು. ಡೆಲ್ಟಾ ಇಂಡಸ್ಟ್ರೀಸ್ ನಿರ್ದೇಶಕರು ನೂರುಲ್ ಹುದಾ ವಿದ್ಯಾ ಸಂಸ್ಥೆಯ ಮಾಜಿ ಅಧ್ಯಕ್ಷರು ರಾಜ್ಯ ಕಬಡ್ಡಿ ತಂಡದ ಮಾಜಿ ಆಟಗಾರರು ಆಗಿರುವ ಬದ್ರುದ್ದೀನ್ ಪಣಂಬೂರು ಅವರು ಕಬಡ್ಡಿ ಪಂದ್ಯಾಟವನ್ನು ಪ್ರಾತ್ಯಕ್ಷಿಕೆಯ ಮೂಲಕ ಉದ್ಘಾಟಿಸಿ ಕ್ರೀಡೆಯಲ್ಲಿ ಶಿಸ್ತು, ತಂಡದ ಮನೋಭಾವ, ಕ್ರೀಡಾಸ್ಫೂರ್ತಿಯನ್ನು ಕಾಪಾಡಿಕೊಳ್ಳುವಂತೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಗ್ರೀನ್ ವೀವ್ ವಿದ್ಯಾ ಸಂಸ್ಥೆಯ ಸಂಚಾಲಕರಾದ ಪರ್ವೇಜ್ ಅಲಿ, ದೈಹಿಕ ಶಿಕ್ಷಣ ಶಿಕ್ಷಕ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ತ್ಯಾಗಂ ಹರೇಕಳ, ದೈಹಿಕ ಶಿಕ್ಷಣ ಶಿಕ್ಷಕ ಸಂಘದ ತಾಲೂಕು ಕಾರ್ಯದರ್ಶಿ ಮೋಹನ್ ಶಿರ್ಲಾಲ್, ದೈಹಿಕ ಶಿಕ್ಷಣ ಶಿಕ್ಷಕ ಸಂಘದ ನೋಡಲ್ ಅಧಿಕಾರಿ ರಾಜೀವ್ ನಾಯ್, ಶಾಲಿನಿ ಮೇಡಂ, ಎಸ್. ಬಿ. ಸಿ ಅಧ್ಯಕ್ಷ ಎ. ಬಿ. ಹಸೈನಾರ್, ಪ್ರೌಢ ಶಾಲಾ ಮುಖ್ಯ ಶಿಕ್ಷಕಿ ನಮಿತಾ.ಬಿ.ಎನ್ ಹಾಗೂ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕ ತಿಪ್ಪೋಜಿ.ಎಂ. ವೈ ಅವರು ಉಪಸ್ಥಿತರಿದ್ದರು.

ಉಳ್ಳಾಲ "ಎ" ವಲಯದ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಭಗವತಿ ಆಂಗ್ಲ ಮಾಧ್ಯಮ ಪ್ರೌಢ ಶಾಲೆ ಉಚ್ಚಿಲ,ಉಳ್ಳಾಲ "ಬಿ" ವಲಯದ ಬಾಲಕರ ವಿಭಾಗದಲ್ಲಿ ಜಮೀಯತುಲ್ ಫಲಾಹ್ ಗ್ರೀನ್ ವೀವ್ ಪ್ರೌಢ ಶಾಲೆ, ಅಡ್ಕರೆ ಪಡ್ಪು ಬಾಲಕಿಯರ ವಿಭಾಗದಲ್ಲಿ ಸರಕಾರಿ ಪ್ರೌಢ ಶಾಲೆ ಕೊಣಾಜೆ ಪದವು – ಶಾಲೆಗಳ ವಿದ್ಯಾರ್ಥಿಗಳು ಪ್ರಥಮ ಸ್ಥಾನವನ್ನು ಪಡೆದು ಮಂಗಳೂರು ತಾಲೂಕು ಮಟ್ಟದ ಪಂದ್ಯಾಟಕ್ಕೆ ಆಯ್ಕೆ ಆಗಿರುತ್ತಾರೆ.

ಗ್ರೀನ್ ವೀವ್ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾದ ಅಬೂಬಕ್ಕರ್ ಅವರು ಸ್ವಾಗತಿಸಿ ದೈಹಿಕ ಶಿಕ್ಷಣ ಶಿಕ್ಷಕ ಮೊಹಮ್ಮದ್ ಅಶ್ರಫ್.ಎಂ.ಕೆ ವಂದಿಸಿದರು. ಶಿಕ್ಷಕಿ ರಶ್ಮಿಕಾರ್ಯಕ್ರಮವನ್ನು ನಿರೂಪಿಸಿದರು.

## ಸುರಯ್ಯ ಅಂಜುಮ್ ಸೇರಿದಂತೆ ನಕಲಿ ಮಹಿಳಾಪರರಿಗೆ ಎಂ. ಸಿರಾಜ್ ಅಡ್ಕರೆ ಎಚ್ಚರಿಕೆ

**ಸುಲ್ತಾನುಲ್ ಉಲಮಾ ವಿರುದ್ಧ ಹೇಳಿಕೆ**



■ ಸಾವಿರಾರು ಮಹಿಳೆಯರಿಗೆ ತಮ್ಮ ಸಂಸ್ಥೆಗಳಲ್ಲಿ ಗೌರವಯುತ ಉದ್ಯೋಗದ ಅವಕಾಶಗಳನ್ನು ಒದಗಿಸಿದ್ದಾರೆ

**ಮಂಗಳೂರು:** ಸುಲ್ತಾನುಲ್ ಉಲಮಾ ಎ.ಪಿ. ಕಾಂತಪುರಂ ಉಸ್ತಾದರ ಹೇಳಿಕೆಯನ್ನು ಮುಂದಿಟ್ಟುಕೊಂಡು ಅವರನ್ನು ಹಾಗೂ ಇಸ್ಲಾಂ ಧರ್ಮವನ್ನು ಮಹಿಳಾ ವಿರೋಧಿ ಎಂದು ಬಿಂಬಿಸುವ ಪ್ರಯತ್ನ ನಡೆಯುತ್ತಿದೆ ಎಂದು ಅಡ್ಕರೆ ಫೌಂಡೇಶನ್ ಸ್ಥಾಪಕ ಎಂ. ಸಿರಾಜ್ ಅಡ್ಕರೆ ಆರೋಪಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಅವರು, ಸುಲ್ತಾನುಲ್ ಉಲಮಾ ಎ.ಪಿ. ಕಾಂತಪುರಂ ಉಸ್ತಾದರು ನೀಡಿರುವ ಹೇಳಿಕೆ ಇಸ್ಲಾಂ ಧರ್ಮದ ಧಾರ್ಮಿಕ ಚೌಕಟ್ಟಿಗೆ ಸಂಬಂಧಿಸಿದ ವಿಚಾರವಾಗಿದೆ. ಅದನ್ನು ರಾಜಕೀಯವಾಗಿ ಬಳಸಿಕೊಂಡು ಅನಗತ್ಯ ವಿವಾದ ಸೃಷ್ಟಿಸುವ ಪ್ರಯತ್ನ ನಡೆಯುತ್ತಿದೆ ಎಂದು ಹೇಳಿದ್ದಾರೆ.

ಉಸ್ತಾದರು ತಮ್ಮ ಸಂಸ್ಥೆಗಳ ಮೂಲಕ ಲಕ್ಷಾಂತರ ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸದ ಅವಕಾಶ ಕಲ್ಪಿಸಿದ್ದು, ಅವರು ಸಮಾಜದಲ್ಲಿ ಗೌರವಯುತವಾಗಿ ಬದುಕಲು ನೆರವಾಗಿದ್ದಾರೆ. ಅಲ್ಲದೆ, ಸಾವಿರಾರು ಮಹಿಳೆಯರಿಗೆ ತಮ್ಮ ಸಂಸ್ಥೆಗಳಲ್ಲಿ ಗೌರವಯುತ ಉದ್ಯೋಗದ ಅವಕಾಶಗಳನ್ನು ಒದಗಿಸಿದ್ದಾರೆ ಎಂದು ಸಿರಾಜ್ ಅಡ್ಕರೆ ತಿಳಿಸಿದ್ದಾರೆ.

ಮಹಿಳೆಯರ ಮೇಲೆ ದೌರ್ಜನ್ಯ ಹಾಗೂ ಅತ್ಯಾಚಾರ ಪ್ರಕರಣಗಳು ನಡೆದಾಗಲೆಲ್ಲ ನ್ಯಾಯದ ಪರವಾಗಿ ಹಾಗೂ ಮಹಿಳೆಯರ ಪರವಾಗಿ ಅವರು ಧ್ವನಿ ಎತ್ತಿದ್ದಾರೆ. ಇಂತಹ ಅಗ್ರಮಾನ್ಯ ವ್ಯಕ್ತಿತ್ವದ ವಿರುದ್ಧ ಕೇವಲ ರೀಲ್ಸ್ ಅಥವಾ ರಾಜಕೀಯ ಉದ್ದೇಶಗಳಿಗಾಗಿ ಹೇಳಿಕೆಗಳನ್ನು ನೀಡುವುದು ಸರಿಯಲ್ಲ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಕಾಂಗ್ರೆಸ್ ನಾಯಕಿ ಸುರಯ್ಯ ಅಂಜುಮ್ ಸೇರಿದಂತೆ ಮಹಿಳಾ ಪರ ಎಂದು ಹೇಳಿಕೊಳ್ಳುವವರು ಯಾವುದೇ ವಿಚಾರವನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳದೆ, ವಾಸ್ತವಾಂಶಗಳನ್ನು ಅರಿತು ಮಾತನಾಡಬೇಕು. ಇಲ್ಲವಾದಲ್ಲಿ ಅಂತಹ ನಕಲಿ ಮಹಿಳಾಪರ ವ್ಯಕ್ತಿತ್ವಗಳ ವಿರುದ್ಧ ಜನರು ಪ್ರಶ್ನೆ ಮಾಡುವಂತಾಗುತ್ತದೆ ಎಂದು ಎಂ. ಸಿರಾಜ್ ಅಡ್ಕರೆ ಎಚ್ಚರಿಸಿದ್ದಾರೆ.

## ಕೆಸರ್ಡ್ ಗೊಬ್ಬುಲು ಕ್ರೀಡಾಕೂಟ ಯಶಸ್ವಿ



**ಕೈರಂಗಳ:** ಶಾರದಗಣಪತಿ ವಿದ್ಯಾಕೇಂದ್ರ, ಪುಣ್ಯಕೋಟಿ ನಗರ, ಕೈರಂಗಳ ಇದರ ವಿದ್ಯಾರ್ಥಿಗಳಿಗಾಗಿ ಪಾವೂರು ಗ್ರಾಮದ ಭಂಡಾರಮನೆ ಸಮೀಪದ ಪಾವೂರು ಗುತ್ತು ಗದ್ದೆಯಲ್ಲಿ 'ಕೆಸರ್ಡ್ ಗೊಬ್ಬುಲು' ಸಾಂಪ್ರದಾಯಿಕ ಕ್ರೀಡಾಕೂಟವನ್ನು ಸಂಭ್ರಮದಿಂದ ಆಯೋಜಿಸಲಾಯಿತು.

ಕಾರ್ಯಕ್ರಮದಲ್ಲಿ ಪಾವೂರು ಗುತ್ತು ಗದ್ದೆಯ ಯಜಮಾನರಾದ ರಕ್ಷಿತ್ ಶೆಟ್ಟಿ, ಇನೋಳಿ ದುರ್ಗಾಪರಮೇಶ್ವರಿ?ಸೋವನಾಥೇಶ್ವರ ದೇವಸ್ಥಾನದ ಮೊಕ್ತೇಸರ ಚಂದ್ರಹಾಸ ಪೂಂಜ, ಉದ್ಯಮಿ ರವಿ ರೈ ಪಜೀರು, ರಘುಚಂದ್ರ ಹೊಸಮನೆ (ಪಾವೂರು), ಶಾಲಾ ಅಧ್ಯಕ್ಷ ಟಿ.ಜಿ. ರಾಜಾರಾಮ ಭಟ್, ಜಯರಾಮ ಶೆಟ್ಟಿ (ಕಂಬಳಪದವು) ಹಾಗೂ ಸಂಸ್ಥೆಯ ಪ್ರಾಂಶುಪಾಲ ಚಂದ್ರಕುಮಾರ್ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.

ಕ್ರೀಡಾಕೂಟದಲ್ಲಿ ವಿದ್ಯಾರ್ಥಿಗಳಿಗಾಗಿ ಗದ್ದೆಯಲ್ಲಿ ವಿವಿಧ ಸಾಂಪ್ರದಾಯಿಕ ಹಾಗೂ ಮನರಂಜನಾತ್ಮಕ ಕ್ರೀಡೆಗಳನ್ನು ಆಯೋಜಿಸಲಾಗಿದ್ದು, ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡು ತಮ್ಮ ಪ್ರತಿಭೆ ಪ್ರದರ್ಶಿಸಿದರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಗಣ್ಯರ ಸಮ್ಮುಖದಲ್ಲಿ ಬಹುಮಾನ ವಿತರಿಸಿ ಅಭಿನಂದಿಸಲಾಯಿತು.

ವಿದ್ಯಾರ್ಥಿಗಳಲ್ಲಿ ದೈಹಿಕ ಸಾಮರ್ಥ್ಯ, ತಂಡದ ಮನೋಭಾವ ಹಾಗೂ ಗ್ರಾಮೀಣ ಸಾಂಪ್ರದಾಯಿಕ ಕ್ರೀಡೆಗಳ ಬಗ್ಗೆ ಆಸಕ್ತಿ ಬೆಳೆಸುವಲ್ಲಿ 'ಕೆಸರ್ಡ್ ಗೊಬ್ಬುಲು' ಕ್ರೀಡಾಕೂಟ ಮಹತ್ವದ ಪಾತ್ರ ವಹಿಸಿತು.

## ನಡುಪದವಿನಲ್ಲಿ ಭಾರತ್ ಜೋಡೋ ಯುವ ಸಮಿತಿಗೆ ಚಾಲನೆ



**ಉಳ್ಳಾಲ:** ತಾಲೂಕಿನ ಬಾಳೆಪುಣಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೈರಂಗಳ ಗ್ರಾಮದ ನಡುಪದವು ಶಾಲಾ ಆವರಣದಲ್ಲಿ ಆ.20ರಂದು ಪಂಚಾಯಿತಿ ಮಟ್ಟದ ಭಾರತ್ ಜೋಡೋ ಯುವ ಸಮಿತಿಗೆ ಚಾಲನೆ ನೀಡಲಾಯಿತು.

ನಿಕಟಪೂರ್ವ ಪಂಚಾಯಿತಿ ಉಪಾಧ್ಯಕ್ಷ ಸಿಎಂ ಶರೀಫ್ ಪಟ್ಟೋರಿ ಅವರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮವನ್ನು ಯುವ ಉದ್ಯಮಿ ನಾಸಿರ್ ನಡುಪದವು ಉದ್ಘಾಟಿಸಿದರು. ಇಬ್ರಾಹಿಂ ನಡುಪದವು ಪ್ರಾಸ್ತಾವಿಕವಾಗಿ ಮಾತನಾಡಿದರು. ಬಾಳೆಪುಣಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವೆಂಕಟೇಶ್ ಹಾಗೂ ಕಾರ್ಯದರ್ಶಿ ಆಯಿಷಾ ಬಿ.ಎ. ಅವರು ಸಲಹೆ, ಸೂಚನೆಗಳನ್ನು ನೀಡಿದರು.

ಕೆಲವು ಆಧಾರ್ ಒಟಿಪಿ ಸಮಸ್ಯೆಗಳನ್ನು ಹೊರತುಪಡಿಸಿ ನೋಂದಣಿ ಪ್ರಕ್ರಿಯೆ ಸುಗಮವಾಗಿ ನಡೆಯಿತು. ನಡುಪದವು ವಾರ್ಡ್‌ನ ಪ್ರತಿ ಮನೆಯಿಂದ ಕನಿಷ್ಠ ಮೂವರನ್ನು ಭಾರತ್ ಜೋಡೋ ಯುವ ಸಮಿತಿಗೆ ನೋಂದಾಯಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ 'ಭಾರತ್ ಜೋಡೋ ಯಂಗ್ ಬ್ರಿಗೇಡ್ ನಡುಪದವು' ಸಮಿತಿಯನ್ನು ರಚಿಸಲಾಯಿತು. ಅಧ್ಯಕ್ಷರಾಗಿ ಹಮ್ನೀಫ್ ಸಿ.ಎ. ನಡುಪದವು, ಪ್ರಧಾನ ಕಾರ್ಯದರ್ಶಿಯಾಗಿ ಹರ್ಷಾದ್ ಮೂಲೆ ನಡುಪದವು ಹಾಗೂ ಕೋಶಾಧಿಕಾರಿಯಾಗಿ ಶಾಝಿಲ್ ಎನ್.ಎಸ್. ನಡುಪದವು ಆಯ್ಕೆಯಾದರು.

ಉಪಾಧ್ಯಕ್ಷರಾಗಿ ಫಯಾಝ್ ಕೆ. ನಡುಪದವು ಹಾಗೂ ನೌಶಾದ್ ಎಂ. ನಡುಪದವು, ಜೊತೆ ಕಾರ್ಯದರ್ಶಿಗಳಾಗಿ ಶಾಝ್ ಎ.ಎಂ. ನಡುಪದವು ಹಾಗೂ ಶಹಝಾದ್ ಸಿ.ಎಂ. ನಡುಪದವು, ಮಾಧ್ಯಮ ಕಾರ್ಯದರ್ಶಿಯಾಗಿ ಜಝೀಲ್ ನಡುಪದವು ಆಯ್ಕೆಯಾದರು. ಕಾರ್ಯಕಾರಿ ಸಮಿತಿ ಸದಸ್ಯರಾಗಿ ನಿಫಾಲ್ ನಡುಪದವು, ಸಫ್ವಾನ್ ಸಿ.ಎಂ. ನಡುಪದವು ಹಾಗೂ ಅರಫಾ ನಡುಪದವು ಅವರನ್ನು ಆಯ್ಕೆ ಮಾಡಲಾಯಿತು.

ಹಮ್ನೀಫ್ ಸಿ.ಎ. ಕಾರ್ಯಕ್ರಮ ನಿರೂಪಿಸಿದರು. ಸಿಎಂ ಶರೀಫ್ ಸ್ವಾಗತಿಸಿ, ಕೊನೆಯಲ್ಲಿ ವಂದಿಸಿದರು.

## ಉದ್ಯೋಗಾವಕಾಶ

ಮಂಗಳೂರಿನ ಪ್ರತಿಷ್ಠಿತ ಮಾಂಸಾಹಾರಿ ಫ್ಯಾಮಿಲಿ ರೆಸ್ಟೋರೆಂಟ್‌ಗೆ ಕೆಳಕಂಡ ಹುದ್ದೆಗಳಿಗೆ ಹುಡುಗರು/ಹುಡುಗಿಯರು ಬೇಕಾಗಿದ್ದಾರೆ.

**ಕ್ಯಾಶಿಯರ್:** ಉತ್ತಮ ವಾತಾವರಣದಲ್ಲಿ ಕೆಲಸ ಮಾಡುವ ಅವಕಾಶ ಹಾಗೂ ಉತ್ತಮ ವೇತನ.

ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ: 733773 4442. ನಮ್ಮ ತಂಡದೊಂದಿಗೆ ಕೈಜೋಡಿಸಿ, ನಿಮ್ಮ ವೃತ್ತಿಜೀವನಕ್ಕೆ ಹೊಸ ಹೆಜ್ಜೆ ಇಡಿ.

## ಉದ್ಯೋಗಾವಕಾಶ

ಮಂಗಳೂರಿನ ಪ್ರತಿಷ್ಠಿತ ಮಾಂಸಾಹಾರಿ ಫ್ಯಾಮಿಲಿ ರೆಸ್ಟೋರೆಂಟ್‌ಗೆ ಕೆಳಕಂಡ ಹುದ್ದೆಗಳಿಗೆ ಹುಡುಗರು/ಹುಡುಗಿಯರು ಬೇಕಾಗಿದ್ದಾರೆ:

**ಕ್ಯಾಶಿಯರ್, ವೇಟರ್, ಕ್ಲೀನರ್**

ಸಂಪರ್ಕ ಸಂಖ್ಯೆ: +91 83106 73276

ನಮ್ಮ ತಂಡದೊಂದಿಗೆ ಕೈಜೋಡಿಸಿ, ನಿಮ್ಮ ವೃತ್ತಿಜೀವನಕ್ಕೆ ಹೊಸ ಹೆಜ್ಜೆ ಇಡಿ.


## ಮುಡಿಪು, ಉಪ್ಪಿನಂಗಡಿ, ಸುರತ್ಕಲ್‌ನಲ್ಲಿ ವಾಹನ ಕಳವು; ಜಾಗ್ರತೆಗೆ ಪೊಲೀಸರ ಸೂಚನೆ

**ಮುಡಿಪು:** ಮುಡಿಪು ಭಾಗದಲ್ಲಿ ರಾತ್ರಿ ವೇಳೆ ಅನುಮಾನಾಸ್ಪದವಾಗಿ ಸಂಚರಿಸುತ್ತಿರುವ ವ್ಯಕ್ತಿಗಳ ತಂಡವೊಂದು ಎರಡು ಬೈಕ್‌ಗಳನ್ನು ಕಳವು ಮಾಡಿರುವ ಶಂಕೆ ವ್ಯಕ್ತವಾಗಿದ್ದು, ಸಾರ್ವಜನಿಕರು ಎಚ್ಚರಿಕೆ ವಹಿಸುವಂತೆ ಪೊಲೀಸ್ ಇಲಾಖೆ ಸಂದೇಶ ನೀಡಿದೆ.



ರಾತ್ರಿ ಸಮಯದಲ್ಲಿ ಸಂಚರಿಸುತ್ತಿರುವ ಈ ಅನುಮಾನಾಸ್ಪದ ವ್ಯಕ್ತಿಗಳು ಮುಡಿಪು ಭಾಗದಲ್ಲಿ ಎರಡು ಬೈಕ್‌ಗಳ ಕಳವು ಕೃತ್ಯ ನಡೆಸಿರುವ ಕುರಿತು ಮಾಹಿತಿ ಲಭ್ಯವಾಗಿದೆ. ಇದೇ ತಂಡವು ಉಪ್ಪಿನಂಗಡಿ ಹಾಗೂ ಸುರತ್ಕಲ್ ಭಾಗಗಳಲ್ಲಿಯೂ ವಾಹನ ಕಳವು ಕೃತ್ಯಗಳಲ್ಲಿ ಭಾಗಿಯಾಗಿರುವ ಅನುಮಾನ ವ್ಯಕ್ತವಾಗಿದೆ.

ರಾತ್ರಿ ವೇಳೆ ಅನುಮಾನಾಸ್ಪದ ವ್ಯಕ್ತಿಗಳು ಅಥವಾ ವಾಹನಗಳು ಕಂಡುಬಂದಲ್ಲಿ ಸಾರ್ವಜನಿಕರು ಎಚ್ಚರಿಕೆ ವಹಿಸಬೇಕು. ತಮ್ಮ ಮನೆ, ಅಂಗಡಿ ಹಾಗೂ ವಾಹನಗಳ ಸುರಕ್ಷತೆ ಬಗ್ಗೆ ಹೆಚ್ಚಿನ ಗಮನಹರಿಸುವಂತೆ ಪೊಲೀಸರು ಸೂಚಿಸಿದ್ದಾರೆ.

ಅನುಮಾನಾಸ್ಪದ ವ್ಯಕ್ತಿಗಳು ಅಥವಾ ಚಟುವಟಿಕೆಗಳು ಕಂಡುಬಂದರೆ ಸಾರ್ವಜನಿಕರು ಸ್ವಯಂ ವಿಚಾರಣೆ ನಡೆಸದೆ ತಕ್ಷಣ ಪೊಲೀಸರಿಗೆ ಮಾಹಿತಿ ನೀಡಬೇಕು. ವಾಹನಗಳನ್ನು ಸುರಕ್ಷಿತ ಸ್ಥಳದಲ್ಲಿ ನಿಲ್ಲಿಸುವುದು ಹಾಗೂ ಸೂಕ್ತ ಭದ್ರತಾ ಕ್ರಮಗಳನ್ನು ಕೈಗೊಳ್ಳುವ ಮೂಲಕ ಕಳವು ಪ್ರಕರಣಗಳನ್ನು ತಡೆಯಲು ಸಹಕರಿಸುವಂತೆ ಪೊಲೀಸ್ ಇಲಾಖೆ ಮನವಿ ಮಾಡಿದೆ.

ರಾತ್ರಿ ವೇಳೆ ಅನುಮಾನಾಸ್ಪದವಾಗಿ ತಿರುಗಾಡುವ ವ್ಯಕ್ತಿಗಳ ಚಲನವಲನಗಳ ಕುರಿತು ಸಾರ್ವಜನಿಕರು ಜಾಗರೂಕರಾಗಿದ್ದು, ಯಾವುದೇ ಅನುಮಾನಾಸ್ಪದ ಚಟುವಟಿಕೆ ಕಂಡುಬಂದಲ್ಲಿ ಪೊಲೀಸರಿಗೆ ಮಾಹಿತಿ ನೀಡುವಂತೆ ಇಲಾಖೆ ಸೂಚಿಸಿದೆ.

## ಲಾರಿ ಅಪಘಾತ; ಆರೋಗ್ಯ ಸಚಿವರ ಸಂಬಂಧಿ ಸಾವು...!

**ಉಳ್ಳಾಲ:** ಲಾರಿ–ಸ್ಕೂಟರ್ ಅಪಘಾತಕ್ಕೀಡಾಗಿ ಸ್ಕೂಟರ್ ಸವಾರ ಉಳ್ಳಾಲ ಸುಭಾಷ್ ನಗರ ಬಳಿಯ ಬಿರ್ಲಾ ಕಂಪೌಂಡ್ ನಿವಾಸಿ ಪಿ.ಎನ್. ಇಬ್ರಾಹಿಮ್ (70) ಮೃತಪಟ್ಟಿರುವ ಘಟನೆ ನಡೆದಿದೆ.



ಇಬ್ರಾಹಿಮ್ ಅವರು ಸೋಮವಾರ ಮಧ್ಯಾಹ್ನ ಸ್ಕೂಟರಲ್ಲಿ ಮಂಗಳೂರಿನಿಂದ ಮಂಗಳಾದೇವಿ ಒಳ ಮಾರ್ಗವಾಗಿ ಉಳ್ಳಾಲಕ್ಕೆ ಮರಳುತ್ತಿದ್ದ ವೇಳೆ ಜಪ್ಪಿನ ಮೊಗರು ಮಹಾಕಾಳಿ ಪಡ್ಪು ಕ್ರಾಸ್ ನಲ್ಲಿ ಹೆದ್ದಾರಿ ದಾಟುತ್ತಿದ್ದಾಗ ಹೆದ್ದಾರಿಯಲ್ಲಿ ಮಂಗಳೂರಿನಿಂದ ತೊಕ್ಕೊಟ್ಟು ಕಡೆಗೆ ಧಾವಿಸುತ್ತಿದ್ದ ಪಡಿತರ ಅಕ್ಕಿ ಸಾಗಾಟದ ಲಾರಿಯ ಇಂಧನ ಟ್ಯಾಂಕಿನ ಭಾಗದ ರಕ್ಷಣಾ ಸಲಾಕೆಗೆ ಢಿಕ್ಕಿ ಹೊಡೆದು ಗಂಭೀರ ಗಾಯಗೊಂಡ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾರೆನ್ನಲಾಗಿದೆ. ಮೂಲತ: ಪುತ್ತೂರು ನಿವಾಸಿಯಾಗಿರುವ ಇಬ್ರಾಹಿಮ್ ಅವರು ಈ ಹಿಂದೆ ವಿದೇಶದಲ್ಲಿದ್ದು,ಪ್ರಸ್ತುತ ಉಳ್ಳಾಲದ ಬಿರ್ಲಾ ಕಂಪೌಂಡಲ್ಲಿ ನೆಲೆಸಿದ್ದರು. ಇಬ್ರಾಹಿಮ್ ಅವರ ಏಕೈಕ ಪುತ್ರಿ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಮೃತ ಇಬ್ರಾಹಿಮ್ ಅವರು ಆರೋಗ್ಯ ಸಚಿವ ಯು.ಟಿ ಖಾದರ್ ಅವರ ಸಹೋದರ ಇಫ್ತಿಕಾರ್ ಅಲಿ ಅವರ ಮಾವ(ಪತ್ನಿಯ ತಂದೆ)ನ ಸಹೋದರರಾಗಿದ್ದಾರೆ.

## ಮುದ್ದುಕೃಷ್ಣ ಸಾಂಸ್ಕೃತಿಕ ಟ್ರಸ್ಟ್, ತೊಕ್ಕೊಟ್ಟು ಇವರ ಆಶ್ರಯದಲ್ಲಿ ನಡೆದ ಮುದ್ದುಕೃಷ್ಣ–26



**ತೊಕ್ಕೊಟ್ಟು;** ಮುದ್ದುಕೃಷ್ಣ ಸಾಂಸ್ಕೃತಿಕ ಟ್ರಸ್ಟ್, ತೊಕ್ಕೊಟ್ಟು ಇವರ ಆಶ್ರಯದಲ್ಲಿ ಮುದ್ದು ಕೃಷ್ಣ–2026 ಕಾರ್ಯಕ್ರಮ ತೊಕ್ಕೊಟ್ಟು ಒಳಪೇಟೆಯ ಅಂಬೇಡ್ಕರ್ ಮೈದಾನದಲ್ಲಿ ನಡೆಯಿತು.

29ನೇ ವರ್ಷದ ಕೃಷ್ಣವೇಷ ಸ್ಪರ್ಧೆಯ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಹಾಗೂ ಅಲ್ಪಸಂಖ್ಯಾತ ವ್ಯವಹಾರಗಳು, ಹಜ್ ಮತ್ತು ವಕ್ಫ್ ಸಚಿವರಾದ ಯು.ಟಿ.ಖಾದರ್ ಅವರು ಸಭೆಯನ್ನುದ್ದೇಶಿಸಿ ಮಾತನಾಡಿದ್ದಾರೆ. ಮಕ್ಕಳಲ್ಲಿ ಧಾರ್ಮಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳನ್ನು ಬೆಳೆಸುವಲ್ಲಿ ಇಂತಹ ಕಾರ್ಯಕ್ರಮಗಳ ಪಾತ್ರ ಮಹತ್ವದ್ದಾಗಿದೆ. ಶ್ರೀಕೃಷ್ಣನ ಜೀವನಾದರ್ಶಗಳು, ಧರ್ಮ, ಸತ್ಯ ಮತ್ತು ಮಾನವೀಯ ಮೌಲ್ಯಗಳನ್ನು ಮಕ್ಕಳಿಗೆ ಪರಿಚಯಿಸುವ ನಿಟ್ಟಿನಲ್ಲಿ ಕೃಷ್ಣವೇಷ ಸ್ಪರ್ಧೆ ಉತ್ತಮ ವೇದಿಕೆಯಾಗಿದೆ ಎಂದ್ರು. ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಗಣ್ಯರು, ಸಂಘಟಕರರು, ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು. ಸ್ಪರ್ಧೆಯಲ್ಲಿ ವಿವಿಧ ವಯೋಮಾನದ ಮಕ್ಕಳು ಕೃಷ್ಣನ ವೇಷ ಧರಿಸಿ ಭಾಗವಹಿಸಿ ಗಮನ ಸೆಳೆದಿದ್ದಾರೆ.

## ಪಟ್ಟೋರಿ ರಹ್ಮಾನಿಯಾ ಜುಮಾ ಮಸೀದಿ ವತಿಯಿಂದ ವಿಜೃಂಭಣೆಯ ಈದ್ ಮೀಲಾದ್



**ಉಳ್ಳಾಲ;** ಪಟ್ಟೋರಿ ರಹ್ಮಾನಿಯಾ ಜುಮಾ ಮಸೀದಿ ವತಿಯಿಂದ ಈದ್ ಮೀಲಾಧ್ ಸಮಾರೋಪ ಕಾರ್ಯಕ್ರಮ ಹಾಗೂ ಮದ್ರಸ ವಿದ್ಯಾರ್ಥಿಗಳ "ಇಷ್ಕೇ ಮದೀನಾ " ಕಲಾ ಸಾಹಿತ್ಯ ಸ್ಪರ್ಧಾ ಕಾರ್ಯಕ್ರಮವು ಆಡಳಿತ ಸಮಿತಿಯ ಅಧ್ಯಕ್ಷರಾದ ಜನಾಬ್ ಅಬ್ಬಾಸ್ ಕೆದುಬಲ್ಲೆ ರವರ ಅಧ್ಯಕ್ಷತೆಯಲ್ಲಿ ಮಸೀದಿ ವಠಾರದಲ್ಲಿ ನಡೆಯಿತು.

ಬಹು ಅಬ್ದುಲ್ ಅಝೀಝ್ ಫೈಝಿ ಉಸ್ತಾದರು ಆರಂಬಿಕ ದುವಾ ನೆರವೇರಿಸಿದರು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸ್ಥಳೀಯ ಖತೀಬ್ ಉಸ್ತಾದರಾದ ಬಹು ಅಶ್ಫಾಕ್ ಮನ್ನಾನಿಯವರು ಅನನ್ಯವಾದ ಪ್ರವಾದಿ ಪ್ರೇಮವು ಇಹಪರ ವಿಜಯಕ್ಕೆ ನಾಂದಿಯಾಗಲಿದೆ ಎಂದರು. ಆಡಳಿತ ಸಮಿತಿ ಪ್ರಧಾನ ಕಾರ್ಯದರ್ಶಿ ಸಿಎಂ ಶರೀಫ್ ಪಟ್ಟೋರಿ ಮಾತನಾಡಿ ಯುವಕರು ಮತ್ತು ವಿದ್ಯಾರ್ಥಿಗಳು ಚಟಗಳಿಂದ ದೂರವಿದ್ದು ಪ್ರವಾದಿ ಚರ್ಚೆಗಳನ್ನು ಮೈಗೂಡಿಸಿಕೊಂಡು, ಸರ್ವ ವಿಪತ್ತುಗಳ ಕೀಲಿ ಕೈ ಎಂದು ಪ್ರವಾದಿಯವರು ಎಚ್ಚರಿಸಿದ ಮಾದಕ ವಸ್ತುಗಳಿಂದ ದೂರವಿರಬೇಕು ಎಂದರು.

ಆರಂಭದಲ್ಲಿ ಯುವಕರ ದಫ್ ಕಾರ್ಯಕ್ರಮ ಹಾಗೂ ವಿದ್ಯಾರ್ಥಿಗಳ ಬುರ್ಧಾ ಮಜ್ಲಿಸ್, ಕವಾಲಿ ಮುಂತಾದವು ಕಾರ್ಯಕ್ರಮಕ್ಕೆ ಮೆರುಗು ನೀಡಿತು.

ಕಾರ್ಯಕ್ರಮದಲ್ಲಿ ಸಮಿತಿ ಮಾಜಿ ಅಧ್ಯಕ್ಷರಾದ ಬಾವ ಹಾಜಿ ಲಾಡ. ಕೋಶಾಧಿಕಾರಿ ಕುಂಞಿ ಮೋನು ಹಾಜಿ ಗುದುರು, ಉಪಾಧ್ಯಕ್ಷರಾದ ಮಹಮ್ಮದ್ ಲಾಡ, ಮುಅಧ್ದಿನ್ ಉಸ್ತಾದ್ ಅಬ್ದುಲ್ಲ ಮುಸ್ಲಿಯಾರ್, ಮುಅಲ್ಲಿಮ್ ಸಾದಿಕ್ ಸಫಾವಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಸುಲೈಮಾನ್, ಅಬೂಬಕರ್, ಅಬ್ಬಾಸ್, ಹಸೈನಾರ್, ಸಾಲಿಹ್, ಆಸಿಫ್, ಹಮೀದ್ ಕೆಎಲ್, ಅನ್ಸಾರ್ ಗರಡಿ, ಮಹಮ್ಮದ್, ಸಿದ್ದೀಕ್, ಅಶ್ರಫ್, ಮತ್ತಿತರರು ಉಪಸ್ಥಿತರಿದ್ದರು. ಸಿಎಂ ಶರೀಫ್ ಪಟ್ಟೋರಿ ಸ್ವಾಗತಿಸಿದರು. ಸಾಧಿಕ್ ಸಫಾವಿ ಹಾಗೂ ಮಹಮದ್ ಲಾಡ ಕಾರ್ಯಕ್ರಮ ನಿರೂಪಿಸಿದರು. ವಿವಿಧ ಸ್ಪರ್ಧೆಯಲ್ಲಿ ಭಾಗವಹಿಸಿದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು. ಸಾಲಿಹ್ ಪಟ್ಟೋರಿ ವಂದಿಸಿದರು.

### ಪಿ.ಎ. ಪಾಲಿಟೆಕ್ನಿಕ್ ಪದವಿ ಪ್ರದಾನ ಸಮಾರಂಭ 2026 ಕಾರ್ಯಕ್ರಮದಲ್ಲಿ ಡಾ. ರೋಹನ್ ಎಸ್. ಮೋನಿಸ್

# ತಾಂತ್ರಿಕವಾಗಿ ಸಜ್ಜುಗೊಂಡಿರುವ ನಾಳೆಯ ದಿಗ್ಗಜರು

ಪಿ.ಎ. ಪಾಲಿಟೆಕ್ನಿಕ್‌ನ 2026ನೇ ಸಾಲಿನ ಪದವಿ ಪ್ರದಾನ ಸಮಾರಂಭವು PACE ಆಡಿಟೋರಿಯಂನಲ್ಲಿ ಅದ್ದೂರಿಯಾಗಿ ನಡೆಯಿತು. 2026ನೇ ಸಾಲಿನ ಪದವೀಧರ ವಿದ್ಯಾರ್ಥಿಗಳು, ಅವರ ಹೆಮ್ಮೆಯ ಪೋಷಕರು ಹಾಗೂ ಗಣ್ಯರ ಉಪಸ್ಥಿತಿಯಲ್ಲಿ ನಡೆದ ಸಮಾರಂಭವು ವಿದ್ಯಾರ್ಥಿಗಳ ಶೈಕ್ಷಣಿಕ ಜೀವನದ ಮಹತ್ವದ ಮೈಲಿಗಲ್ಲಿಗೆ ಸಾಕ್ಷಿಯಾಯಿತು.



ಹಣಕಾಸು ನಿರ್ದೇಶಕರಾದ ಅಹ್ಮದ್ ಕುಟ್ಟಿ ಅವರು ಸಮಾರಂಭವನ್ನು ಔಪಚಾರಿಕವಾಗಿ ಉದ್ಘಾಟಿಸುವ ಮೂಲಕ ಪದವಿ ಪ್ರದಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಮುಖ್ಯ ಅತಿಥಿಯಾಗಿ ಕಣಚೂರು ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಮುಖ್ಯ ಆಡಳಿತಾಧಿಕಾರಿ ಡಾ. ರೋಹನ್ ಎಸ್. ಮೋನಿಸ್ ಉಪಸ್ಥಿತರಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಅಹ್ಮದ್ ಕುಟ್ಟಿ ವಹಿಸಿದ್ದರು. ಈ ಸಂದರ್ಭದಲ್ಲಿ PAETಕ್ಯಾಂಪಸ್ AGM ಶರ್ಫುದ್ದೀನ್ ಪಿ.ಕೆ., ಖರೀದಿ ವ್ಯವಸ್ಥಾಪಕ ಹಾರಿಸ್ ಟಿ.ಡಿ., PAETನ ವಿದ್ಯಾರ್ಥಿ ವ್ಯವಹಾರಗಳ ಡೀನ್ ಡಾ. ಸಯ್ಯಿದ್ ಅಮೀನ್ ಅಹ್ಮದ್, ಪಿ.ಎ. ಪಾಲಿಟೆಕ್ನಿಕ್ ಪ್ರಾಂಶುಪಾಲ ಪ್ರೊ. ಇಸ್ಮಾಯಿಲ್ ಖಾನ್, ಉಪ ಪ್ರಾಂಶುಪಾಲ ಪ್ರೊ. ಅಜಿತ್ ಕುಮಾರ್ ವಾಸು, ಸಂಯೋಜಕ ಅರ್ಫಾಜ್ ಹಾಗೂ ಎಲ್ಲಾ ವಿಭಾಗಗಳ ಮುಖ್ಯಸ್ಥರು ಉಪಸ್ಥಿತರಿದ್ದರು.

ಸಮಾರಂಭದ ಪ್ರಮುಖ ಆಕರ್ಷಣೆಯಾಗಿದ್ದ ಮುಖ್ಯ ಅತಿಥಿ ಡಾ. ರೋಹನ್ ಎಸ್. ಮೋನಿಸ್ ಅವರ ಪ್ರೇರಣಾದಾಯಕ ಭಾಷಣವು ವಿದ್ಯಾರ್ಥಿಗಳ ಗಮನ ಸೆಳೆಯಿತು. ಪದವೀಧರರನ್ನು "ತಾಂತ್ರಿಕವಾಗಿ ಸಜ್ಜುಗೊಂಡಿರುವ ನಾಳೆಯ ದಿಗ್ಗಜರು" ಎಂದು ಬಣ್ಣಿಸಿದ ಅವರು, ನಿರಂತರ ಕಲಿಕೆ, ದೃಢತೆ, ಶಿಸ್ತು, ಭಾವನಾತ್ಮಕ ಬುದ್ಧಿವಂತಿಕೆ, ಸಾಮಾಜಿಕ ಜಾಗೃತಿ, ಒಳಗೊಳ್ಳುವಿಕೆ, ಸ್ವಪ್ರಜ್ಞೆ ಹಾಗೂ ಅರ್ಥಪೂರ್ಣ ಮಾನವೀಯ ಸಂಬಂಧಗಳನ್ನು ಬೆಳೆಸಿಕೊಳ್ಳುವಂತೆ ಕರೆ ನೀಡಿದರು. ದೇಶಪ್ರೇಮದ ಮನೋಭಾವದೊಂದಿಗೆ ವೃತ್ತಿಪರ ಜಗತ್ತನ್ನು ಎದುರಿಸುವಂತೆ ಅವರು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

'ಅಪ್ಪರ್ ಬ್ರೈನ್ ಡೈನಾಮಿಕ್ಸ್' ಪರಿಕಲ್ಪನೆಯ ಕುರಿತು ಮಾತನಾಡಿದ ಡಾ. ಮೋನಿಸ್, ನಿಜವಾದ ವೃತ್ತಿಪರ ಯಶಸ್ಸು ಕೇವಲ ತಾಂತ್ರಿಕ ಕೌಶಲ್ಯಕ್ಕೆ ಸೀಮಿತವಾಗಿಲ್ಲ ಎಂದು ವಿವರಿಸಿದರು. ಜ್ಞಾನ, ಕುತೂಹಲ, ಸಹಯೋಗ, ಭಾವನಾತ್ಮಕ ಪ್ರಬುದ್ಧತೆ ಹಾಗೂ ಬದಲಾಗುತ್ತಿರುವ ಜಗತ್ತಿಗೆ ಹೊಂದಿಕೊಳ್ಳುವ ಸಾಮರ್ಥ್ಯವನ್ನು ವಿನಯದಿಂದ ಬೆಳೆಸಿಕೊಳ್ಳಬೇಕು ಎಂದು ಅವರು ತಿಳಿಸಿದರು.

ಅವರು ನೀಡಿದ ``GEAR Up" ಎಂಬ ಸಂದೇಶವು ವಿದ್ಯಾರ್ಥಿಗಳಿಗೆ ವಿಶೇಷ ಪ್ರೇರಣೆಯಾಯಿತು. Gratitude (ಕೃತಜ್ಞತೆ), Empathy (ಸಹಾನುಭೂತಿ), Accountability (ಹೊಣೆಗಾರಿಕೆ) ಮತ್ತು Resolution (ದೃಢ ನಿರ್ಧಾರ) ಎಂಬ ನಾಲ್ಕು ಮೌಲ್ಯಗಳನ್ನು ಜೀವನ ಹಾಗೂ ವೃತ್ತಿಜೀವನದಲ್ಲಿ ಅಳವಡಿಸಿ ಕೊಳ್ಳುವಂತೆ ಅವರು ಕರೆ ನೀಡಿದರು.

ಅಹ್ಮದ್ ಕುಟ್ಟಿ ತಮ್ಮ ಭಾಷಣದಲ್ಲಿ ಪಿ.ಎ. ಪಾಲಿಟೆಕ್ನಿಕ್ ಶೈಕ್ಷಣಿಕ ಶ್ರೇಷ್ಠತೆ, ಕೌಶಲ್ಯಾಭಿವೃದ್ಧಿ ಹಾಗೂ ಉದ್ಯಮ ಕ್ಷೇತ್ರದ ಬದಲಾಗುತ್ತಿರುವ ಅಗತ್ಯಗಳಿಗೆ ತಕ್ಕಂತೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ಬದ್ಧತೆಯನ್ನು ಪುನರುಚ್ಚರಿಸಿದರು. ಸಂಸ್ಥೆಯಲ್ಲಿ ಕಲಿತ ಮೌಲ್ಯಗಳನ್ನು ಜೀವನದಲ್ಲಿ ಮುಂದುವರಿಸಿಕೊಂಡು, ಪ್ರಾಮಾಣಿಕತೆ, ಸಾಮರ್ಥ್ಯ ಹಾಗೂ ಜವಾಬ್ದಾರಿಯುತ ಮನೋಭಾವದೊಂದಿಗೆ ಸಮಾಜಕ್ಕೆ ಕೊಡುಗೆ ನೀಡುವಂತೆ ಪದವೀಧರರಿಗೆ ಅವರು ಕರೆ ನೀಡಿದರು.

ಅತ್ಯುತ್ತಮ ನಿರ್ಗಮಿತ ವಿದ್ಯಾರ್ಥಿ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ ಮಾಡಿದ ಅಕಾಡೆಮಿಕ್ ಟಾಪರ್‌ಗಳನ್ನು ಸಮಾರಂಭದಲ್ಲಿ ಸನ್ಮಾನಿಸಲಾಯಿತು. ಬಳಿಕ ಎಲ್ಲಾ ಪದವೀಧರರಿಗೆ ಪದವಿ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ಇದರೊಂದಿಗೆ ಪಿ.ಎ. ಪಾಲಿಟೆಕ್ನಿಕ್‌ನಲ್ಲಿ ಅವರ ಶೈಕ್ಷಣಿಕ ಪಯಣ ಯಶಸ್ವಿಯಾಗಿ ಪೂರ್ಣಗೊಂಡಿತು.

ನಂತರ ಪಿ.ಎ. ಪಾಲಿಟೆಕ್ನಿಕ್‌ನ ಪ್ರಾಂಶುಪಾಲ ಪ್ರೊ. ಇಸ್ಮಾಯಿಲ್ ಖಾನ್ ಅವರು ಪದವೀಧರರಿಗೆ ಪದವಿ ಪ್ರಮಾಣವಚನ ಬೋಧಿಸಿದರು. ವೃತ್ತಿಪರ ನೈತಿಕತೆ, ಜವಾಬ್ದಾರಿ, ಶ್ರೇಷ್ಠತೆ ಹಾಗೂ ಸಮಾಜ ಸೇವೆಗೆ ಬದ್ಧರಾಗಿರುವುದಾಗಿ ವಿದ್ಯಾರ್ಥಿಗಳು ಪ್ರಮಾಣವಚನ ಸ್ವೀಕರಿಸಿದರು.

ಕಾರ್ಯಕ್ರಮವು ಪ್ರೊ. ಉಸ್ಮಾನ್ ಅವರ ಪ್ರಾರ್ಥನೆಯೊಂದಿಗೆ ಆರಂಭವಾಯಿತು. ಪಿ.ಎ. ಪಾಲಿಟೆಕ್ನಿಕ್‌ನ ಉಪ ಪ್ರಾಂಶುಪಾಲ ಪ್ರೊ. ಅಜಿತ್ ಕುಮಾರ್ ವಾಸು ಅವರು ಸ್ವಾಗತ ಭಾಷಣ ಮಾಡಿದರು. ಕುಮಾರಿ ಅನಿಸಾ ಅವರು ಮುಖ್ಯ ಅತಿಥಿಯನ್ನು ಸಭಿಕರಿಗೆ ಪರಿಚಯಿಸಿದರು.

ಸಮಾರಂಭವನ್ನು ಪ್ರೊ. ಆಯಿಷತ್ ಶಮೀಮಾ ಹಾಗೂ ಕುಮಾರಿ ನಿಖಿತಾ ಅವರು ನಿರೂಪಿಸಿದರು. ಕೊನೆಯಲ್ಲಿ ಪ್ರೊ. ತೇಜಸ್ವಿ ಮಾರ್ಥಾ ಅವರು ವಂದನಾರ್ಪಣೆ ಸಲ್ಲಿಸಿದರು. ಬಳಿಕ ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮವು ಮುಕ್ತಾಯಗೊಂಡಿತು.

## ಸೋಮೇಶ್ವರ ಶ್ರೀ ಸೋಮನಾಥ ದೇವಸ್ಥಾನದಲ್ಲಿ ವೈಭವದ ವರಮಹಾಲಕ್ಷ್ಮಿ ಪೂಜೆ





**ಉಳ್ಳಾಲ:** ರಾಣಿ ಅಬ್ಬಕ್ಕ ದೇವಿಯ ಆರಾಧ್ಯ ದೇವರಾದ ಹಾಗೂ ಮಾಗಣೆಯ ಭಕ್ತರ ಆರಾಧ್ಯ ಕೇಂದ್ರ ಆದ ಇತಿಹಾಸ ಪ್ರಸಿದ್ಧ ಶ್ರೀ ಸೋಮನಾಥ ದೇವಸ್ಥಾನದ ರಾಜರಾಜೇಶ್ವರಿ ಅಮ್ಮನವರ ಗುಡಿಯಲ್ಲಿ ವರ್ಷಂಪ್ರತಿ ನಡೆಯುವ ವರಮಹಾಲಕ್ಷ್ಮಿ ಪೂಜೆಯು ವೈಭವದಿಂದ ನಡೆಯಿತು. ಶ್ರೀ ಸೋಮನಾಥ ದೇವಸ್ಥಾನದ ವ್ಯವಸ್ಥಾಪನ ಸಮಿತಿ ಸದಸ್ಯರು ಹಾಗೂ ಸೋಮೇಶ್ವರ ಭಜನಾ ಮಂಡಳಿಯವರು ಮತ್ತು ಊರ ಪರವೂರ ಭಕ್ತರು ಭಾಗವಹಿಸಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಮೊದಲಿಗೆ ಸೋಮೇಶ್ವರ ಭಜನಾ ಮಂಡಳಿಯವರಿಂದ ಲಲಿತಾ ಸಹಸ್ರನಾಮ ಪಠಣ ನಂತರ ರಾಜರಾಜೇಶ್ವರಿ ಅಮ್ಮನವರಿಗೆ ವೈಭವದ ವರಮಹಾಲಕ್ಷ್ಮಿ ಪೂಜೆ ವಿಜೃಂಭಣೆಯಿಂದ ನಡೆಯಿತು. ನಂತರ ದೇವಸ್ಥಾನದ ವತಿಯಿಂದ ಅನ್ನ ಸಂತರ್ಪಣೆ ನಡೆಯಿತು. ಈ ಕಾರ್ಯಕ್ರಮದಲ್ಲಿ ಸೋಮೇಶ್ವರ ದೇವಸ್ಥಾನದ ವ್ಯವಸ್ಥಾಪನ ಸಮಿತಿಯ ಅಧ್ಯಕ್ಷರಾದ ಶ್ರೀ ರವೀಂದ್ರನಾಥ ರೈ ಮತ್ತು ಸದಸ್ಯರಾದ ಭಾಸ್ಕರ್ ಗಟ್ಟಿ, ಸುಹಾಸಿನಿ ಬಬ್ಬು ಕಟ್ಟೆ ಮುಂತಾದವರು ಉಪಸ್ಥಿತರಿದ್ದರು.

## ಗ್ರಾಮಚಾವಡಿ: ಬ್ರಹ್ಮಶ್ರೀ ನಾರಾಯಣ ಗುರುವರ್ಯರ 172ನೇ ಜನ್ಮದಿನಾಚರಣೆ



**ಕೊಣಾಜೆ:** ಮಾನವೀಯ ಮೌಲ್ಯಗಳು ದೂರವಾಗುತ್ತಿರುವ ಈ ಕಾಲಘಟ್ಟದಲ್ಲಿಯೂ ಬ್ರಹ್ಮಶ್ರೀ ನಾರಾಯಣ ಗುರುವರ್ಯರ ತತ್ವ ಚಿಂತನೆಯನ್ನು ಮೈಗೂಡಿಸಿಕೊಂಡು ಮೌಲ್ಯಯುತ ಸಮಾಜವನ್ನು ಕಟ್ಟುವ ಅಗತ್ಯವಿದೆ ಎಂದು ಮಂಗಳೂರು ವಿವಿ ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ.ಜಯರಾಜ್ ಅಮೀನ್ ಅವರು ಹೇಳಿದರು.

ಅವರು ಗ್ರಾಮಚಾವಡಿಯ ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಸಂಘ(ರಿ) ಇದರ ವತಿಯಿಂದ ಬ್ರಹ್ಮಶ್ರೀ ನಾರಾಯಣ ಗುರುವರ್ಯರ 172 ನೇ ಜನ್ಮದಿನೋತ್ಸೋವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಮುಡಿಪು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕರಾದ ಡಾ.ಶೇಷಪ್ಪ ಅಮೀನ್ ಅವರು ನಾರಾಯಣ ಗುರು ಸಂದೇಶವನ್ನು ನೀಡುತ್ತಾ, ವಿಶ್ವ ಕಂಡ ದೊಡ್ಡ ದಾರ್ಶನಿಕರ ನಡುವೆ ಬ್ರಹ್ಮಶ್ರೀ ನಾರಾಯಣ ಗುರುವರ್ಯರು ಮೊದಲಿಗರಾಗಿದ್ದಾರೆ. ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಬ್ರಹ್ನಶ್ರೀ ನಾರಾಯಣ ಗುರು ಸೇವಾ ಸಂಘದ ಅಧ್ಯಕ್ಷರಾದ ವಿಜೇತ್ ಪಜೀರು ಅವರು ವಹಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಯೆನೆಪೋಯ ವಿವಿ ಪ್ರಾಧ್ಯಾಪಕಿ ಪ್ರೊ.ಸರೋಜಿನಿ, ಪಜೀರು ಗೋಪಾಲಕೃಷ್ಣ ಭಜನಾ ಮಂದಿರದ ಅಧ್ಯಕ್ಷರಾದ ಯಶೋಧರ ಜೈನ್, ಸಾಮರಸ್ಯ ವೇದಿಕೆ ಮಂಗಳೂರು ಇದರ ಜಿಲ್ಲಾ ಸಂಯೋಜಕ ಭರತ್ ಮಂಜನಾಡಿ,ಮುಖಂಡರಾಸ ಶಿವರಾಮ ರೈ, ನಾರಾಯಣ ಗುರು ಸೇವಾ ಸಂಘದ ಗೌರವಾಧ್ಯಕ್ಷರು ರೋಹಿದಾಸ್ ಪಾಂಡೇಶ್ವರ, ಮಹಿಳಾ ಸಮಿತಿಯ ಅಧ್ಯಕ್ಷರಾದ ಬಬಿತಾ ಯಾದವ ಬಾನಬೆಟ್ಟು, ಯುವವಾಹಿನಿ ಘಟಕದ ಅಧ್ಯಕ್ಷರದ ಮುರಲೀಧರ ಕೊಣಾಜೆ ಮೊದಲಾದವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಶೈಕ್ಷಣಿಕ ಸಾಧನೆಗೈದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರದೊಂದಿಗೆ ಗೌರವಿಸಲಾಯಿತು. ಜೊತೆ ಕಾರ್ಯದರ್ಶಿ ಸುಜಾತ ಪ್ರತಿಭಾ ಪುರಸ್ಕೃತರ ಹೆಸರು ವಾಚಿಸಿದರು. ಸಾಂಸ್ಕೃತಿಕ ಕಾರ್ಯದರ್ಶಿ ಪೂರ್ಣಿಮ ಪಜೀರು ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರ ಹೆಸರು ವಾಚಿಸಿದರು. ಉಪಾಧ್ಯಕ್ಷರಾದ ಸುಭಾಷ್ ಧರ್ಮನಗರ ಸ್ವಾಗತಿಸಿದರು.

ಬಬಿತಾ ಯಾದವ ಬಾನಬೆಟ್ಟು ವಂದಿಸಿದರು, ಅಜಿತ್ ಪಜೀರು ಕಾರ್ಯಕ್ರಮ ನಿರೂಪಿಸಿದರು.

# ಉತ್ತಮ ಪ್ರಜೆಗಾಗಿ ಗರ್ಭಸಂಸ್ಕಾರ

## ಗರ್ಭಧಾರಣೆ ಪ್ರತಿ ದಂಪತಿಯ ಜೀವನದ ಮಹತ್ತರ ಘಟ್ಟ

ಹೊಸದೊಂದು ಜೀವದ ಆಗಮನ ಖುಷಿಯ ಸಂಗತಿ. ಆದರೂ ಮುಂಚಿತವಾಗಿ ಯೋಚಿಸಿರುವ ಗರ್ಭಧಾರಣೆಯು (planned pregnancy) ಅತ್ಯುತ್ತಮ ಎಂದು ವೈದ್ಯಕೀಯ ವಿಜ್ಞಾನ ಹೇಳುತ್ತದೆ. ಅಂತೆಯೇ ಇಂದಿನ ವಿಜ್ಞಾನ ಪದ್ಧತಿಯು, ದಂಪತಿಗಳ ಶಾರೀರಿಕ ಪ್ರಕ್ರಿಯೆಗಳಾದ ವೀರ್ಯಾಣುವಿನ ಪ್ರಮಾಣ, ಸಮಯಕ್ಕೆ ಮುಟ್ಟು, ಅಂಡಾಣುವಿನ



ಬಿಡುಗಡೆ (ovulation), ಪೌಷ್ಟಿಕ ಆಹಾರ ಮತ್ತು ವ್ಯಾಯಾಮ, ಇನ್ನಿತರೆ ಕಾಯಿಲೆಗಳನ್ನು ಭ್ರೂಣದ ರಚನೆಯಲ್ಲಿ ಮುಖ್ಯವೆಂದು ಪರಿಗಣಿಸಿದ್ದಾರೆ.

ಆಯುರ್ವೇದವು ಸಹ ಇಂತಹ ಕ್ರಿಯೆಯನ್ನು ಉಲ್ಲೇಖಿಸಿದೆ. ತಾಯಿಯ ಗರ್ಭಾಶಯದೊಳಗೆ ಭ್ರೂಣದ ನಿರ್ಮಾಣದ ಮೊದಲೇ ಶುರುವಾಗುವ ಈ ಪ್ರಕ್ರಿಯೆ, ಶಿಶುವಿನ ಜನನದ ನಂತರವೂ ಮುಂದುವರಿಯುವುದು. ಇದೇ "ಗರ್ಭ ಸಂಸ್ಕಾರ." ಇದರಲ್ಲಿ, ತಾಯಿಯಿಂದ ಹೊರಬರುವ ಮೊಟ್ಟೆ ಹಾಗೂ ತಂದೆಯ ವೀರ್ಯಾಣುವಿನ ಪ್ರಮಾಣ ಮಾತ್ರವಲ್ಲದೇ, ಗುಣಮಟ್ಟವೂ ಮುಖ್ಯ. ಇನ್ನು ಕನಿಷ್ಠ ಮೂರು ತಿಂಗಳು ಮುಂಚಿತವಾಗಿಯೇ ದಂಪತಿಗಳು ಸೇವಿಸುವ ಪೌಷ್ಟಿಕ ಆಹಾರ ಹಾಗೂ ನೀರಿನ ಗುಣಮಟ್ಟ, ವ್ಯಾಯಾಮ ಮತ್ತು ಅವರ ಮಾನಸಿಕ ಸ್ವಸ್ಥತೆ ಅತೀ ಮುಖ್ಯ. ಇಂದಿನ ಆಧುನಿಕ ಜಗತ್ತಿನಲ್ಲಿ ರೋಗವಿಲ್ಲದ ಮನುಷ್ಯನಿಲ್ಲ, ಅದೇ ರೀತಿ ದಂಪತಿಗಳಲ್ಲಿ ಈಗಾಗಲೇ ಆರೋಗ್ಯ ಸಮಸ್ಯೆ ಇದ್ದಲ್ಲಿ ಶೋಧನ ಕರ್ಮವಾದ ಪಂಚಕರ್ಮ ಹಾಗೂ ಔಷಧಿಯೊಂದಿಗೆ ಶಮನ ಚಿಕಿತ್ಸೆಯಿಂದ ಸಹಾಯ ಕೈಗೊಳ್ಳಬಹುದು. ಇದರಿಂದ ಗರ್ಭಧಾರಣೆಯ ಸಾಧ್ಯತೆಯು ಹೆಚ್ಚುವುದು.



ಗರ್ಭಸಂಸ್ಕಾರವು ಗರ್ಭಧಾರಣೆ ಮತ್ತು ಗರ್ಭಪೋಷಣೆಯ ಲಾಭವನ್ನು ಒಳಗೊಂಡಿದ್ದು, ಗರ್ಭಧಾರಣೆ ಆದ ಕ್ಷಣದಿಂದ ಮುಂದಿನ ಒಂಬತ್ತು ತಿಂಗಳು ಮತ್ತು ಹೆರಿಗೆಯ ತನಕ ಪಾಲಿಸತಕ್ಕದ್ದು. ಆಯುರ್ವೇದೀಯ ಕಾರ್ಯವಿಧಾನಗಳಾದ ನಸ್ಯಕರ್ಮ, ಹೊಂಬಾಳೆ ಪ್ರಯೋಗ, ಸಂಗೀತ ಚಿಕಿತ್ಸೆ (Music therapy), ಗರ್ಭಾವಸ್ಥೆಗೆ ಸೂಕ್ತ ಯೋಗ ಮತ್ತು ಪ್ರಾಣಾಯಾಮ, ಜೊತೆಗೆ ಪೌಷ್ಟಿಕ ಆಹಾರ ಮತ್ತು ವ್ಯಾಯಾಮ, ಅಂತೆ ಸಾಮಾನ್ಯ ಹೆರಿಗೆ ಪ್ರೋತ್ಸಾಹಿಸಲು ಬೇಕಾದ ಔಷಧಗಳನ್ನು ಒಳಗೊಂಡಿರುತ್ತದೆ. ಇದರಿಂದ ತಾಯಿಯ ಮೂಲಕ ಮಗುವಿನಲ್ಲಿ ಸಾತ್ವಿಕ ಭಾವಗಳು, ಶಾಂತ ಚಿತ್ತತೆ, ನೈಸರ್ಗಿಕ ರೋಗ ನಿರೋಧಕ ಶಕ್ತಿ ಹೆಚ್ಚುವುದು. ಅಂತೆಯೇ ತಾಯಿ–ಮಗುವಿನ ಅವಿನಾಭಾವ ಸಂಬಂಧ ಬೆಳೆಯುವುದು, ಹೆರಿಗೆಯ ಭಯ ದೂರಪಡಿಸುವಲ್ಲಿ ಹಾಗೂ ಮಾನಸಿಕ ಒತ್ತಡ ಕಮ್ಮಿಯಾಗುವುದು. ತಾಯಿಯಲ್ಲಿ ಹೆರಿಗೆಯ ನಂತರ ಖಿನ್ನತೆ (postpartum depression), ಮಗುವಿನಲ್ಲಿ ಆಟಿಸಮ್ (Autism), ADHD ಅಂತಹ ತೊಂದರೆಗಳು ತಡೆಗಟ್ಟಬಹುದು.

ಆದ್ದರಿಂದ ಪ್ರಾಚೀನ ಭಾರತದ ಈ ಗರ್ಭ ಸಂಸ್ಕಾರ ವಿಧಿಯು, ಉತ್ತಮ ಪ್ರಜೆಗಳನ್ನು, ಭವಿಷ್ಯವನ್ನು ನೀಡುವಲ್ಲಿ ಸಮರ್ಥವಾಗಿರುವುದು.

■ **ಪ್ರತೀಕ್ಷ ಯಂ, BAMS, MS (Ayu), ಸಹಾಯಕ ಪ್ರಾಧ್ಯಾಪಕರು,**
**ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗ, ಯೆನೆಪೋಯ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆ, ನರಿಂಗಾನ, ಮಂಗಳೂರು**

## ಕಾರ್ಯಕ್ರಮದ ತುರ್ತಿನ ನಡುವೆಯೂ ಮಾನವೀಯತೆ ಮೆರೆದ ಸಚಿವ ಖಾದರ್



**ಮುಕ್ಕಚೇರಿ:** ಸಚಿವ ಯು.ಟಿ. ಖಾದರ್ ಅವರ ಸರಳತೆ ಹಾಗೂ ಮಾನವೀಯತೆಗೆ ಮತ್ತೊಂದು ಉದಾಹರಣೆ ಎಂಬಂತೆ ಮುಕ್ಕಚೇರಿ ಒಳರಸ್ತೆಯಲ್ಲಿ ನಡೆದ ಘಟನೆ ಸಾರ್ವಜನಿಕರ ಗಮನ ಸೆಳೆದಿದೆ.

ಮಹಿಳೆಯೊಬ್ಬರ ನಿಧನಕ್ಕೆ ತೆರಳುತ್ತಿದ್ದ ಸಂದರ್ಭದಲ್ಲಿ ಮುಕ್ಕಚೇರಿ ಒಳರಸ್ತೆಯಲ್ಲಿ ವ್ಯಕ್ತಿಯೊಬ್ಬರ ಕಾರು ಹಾಳಾಗಿ ರಸ್ತೆಯಲ್ಲೇ ನಿಂತಿತ್ತು. ಸಮೀಪದಲ್ಲಿ ಸಹಾಯಕ್ಕೆ ಯಾರೂ ಇರದ ಪರಿಸ್ಥಿತಿಯಲ್ಲಿ, ಸಚಿವರಿಗೂ ಕಾರ್ಯಕ್ರಮಕ್ಕೆ ತೆರಳುವ ತುರ್ತು ಇದ್ದರೂ ಕಾರು ತೆರವುಗೊಳಿಸಲು ಮುಂದಾದರು.

ಸಚಿವ ಯು.ಟಿ. ಖಾದರ್ ಅವರ ನೇತೃತ್ವದಲ್ಲಿ ಉಳ್ಳಾಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಶೆಟ್ಟಿ ಬೋಳಿಯಾರ್ ಹಾಗೂ ಸಚಿವರ ಪಿಎಗಳು ಸೇರಿ ಹಾಳಾದ ಕಾರನ್ನು ರಸ್ತೆಯ ಬದಿಗೆ ಸರಿಸಿದರು.

ಸಚಿವರ ಈ ಸರಳ ಹಾಗೂ ಮಾನವೀಯ ನಡೆ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ. ಅಧಿಕಾರದ ಸ್ಥಾನದಲ್ಲಿದ್ದರೂ ಸಾಮಾನ್ಯರ ಸಂಕಷ್ಟಕ್ಕೆ ಸ್ಪಂದಿಸಿ ನೆರವಿಗೆ ಧಾವಿಸಿದ ಸಚಿವರ ನಡೆ ಸರಳತೆಗೆ ಮತ್ತೊಮ್ಮೆ ಸಾಕ್ಷಿಯಾಗಿದೆ ಎಂಬ ಮಾತುಗಳು ಸಾರ್ವಜನಿಕ ವಲಯದಲ್ಲಿ ಕೇಳಿಬಂದಿವೆ.

## ಕರ್ನಾಟಕ ರಾಜ್ಯ ಲೆಕ್ಕಪರಿಶೋಧಕರ ಸಂಘದ ಅಧ್ಯಕ್ಷರಾಗಿ ಸಿ.ಎ. ಸುನಿಲ್ ಭಂಡಾರಿ ಆಯ್ಕೆ

**ಮಂಗಳೂರು:** 2026–27ನೇ ಸಾಲಿನ ಕರ್ನಾಟಕ ರಾಜ್ಯ ಲೆಕ್ಕಪರಿಶೋಧಕರ ಸಂಘದ (KSCAA) ಅಧ್ಯಕ್ಷರಾಗಿ ಸಿ.ಎ. ಸುನಿಲ್ ಭಂಡಾರಿ ಬೆಂಗಳೂರು ಆಯ್ಕೆಯಾಗಿದ್ದಾರೆ.



ಸಿ ಎ ಸುನಿಲ್ ಭಂಡಾರಿ ಅವರ ನಾಯಕತ್ವ, ವೃತ್ತಿಯ ಮೇಲಿನ ಬದ್ಧತೆ ಮತ್ತು ಎಲ್ಲರನ್ನೂ ಒಗ್ಗೂಡಿಸುವ ಸಾಮರ್ಥ್ಯವು ಕರ್ನಾಟಕದ ಚಾರ್ಟರ್ಡ್ ಅಕೌಂಟೆಂಟ್ ಸಮುದಾಯದಲ್ಲಿ ನಿಸ್ಸಂದೇಹವಾಗಿ ಅರ್ಥಪೂರ್ಣ ಬದಲಾವಣೆಯನ್ನು ತರಲು ಪ್ರಯತ್ನಿಸುತ್ತೇನೆ. ಈ ಹೊಸ ಜವಾಬ್ದಾರಿಯಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುವುದಾಗಿ ಅವರು ತಿಳಿಸಿದ್ದಾರೆ.

ಸಿ.ಎ.ಸುನಿಲ್ ಭಂಡಾರಿ ಅವರು ಬೊಳಿಯಾರು ತಾರಿಪಾಡಿ ದಿ ಕಾಂತಣ್ಣ ಭಂಡಾರಿ ಹಾಗೂ ಪೆಲಪಾಡಿ ವಸಂತಿ ಕೆ ಭಂಡಾರಿಯವರ ಸುಪುತ್ರರಾಗಿದ್ದಾರೆ.

## ಕೊಲ್ಯ ಬಿಲ್ಲವ ಸೇವಾ ಸಮಾಜ ಅಧ್ಯಕ್ಷರಾಗಿ ಗೋಪಾಲ ಕೊಂಡಾಣ ಪುನರಾಯ್ಕೆ

**ಕೊಲ್ಯ:** ಬಿಲ್ಲವ ಸೇವಾ ಸಮಾಜ (ರಿ) ಕೊಲ್ಯ ಇದರ 2026–27 ನೇ ಸಾಲಿನ ಅಧ್ಯಕ್ಷರಾಗಿ ಗೋಪಾಲ ಕೊಂಡಾಣ ಇವರು ಪುನರಾಯ್ಕೆಗೊಂಡಿದ್ದಾರೆ. ಅಲ್ಲದೇ 2025–26 ಸಾಲಿನ ಪದಾಧಿಕಾರಿಗಳನ್ನೇ



2026–27ನೇ ಸಾಲಿಗೆ ಮುಂದುವರಿಸುವುದೆಂದು ವಾರ್ಷಿಕ ಮಹಾಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿದೆ.

ಉಪಾಧ್ಯಕ್ಷರಾಗಿ ಕುಸುಮಾಕರ್ ಕುಂಪಲ, ಪ್ರದಾನ ಕಾರ್ಯದರ್ಶಿ ಯಾಗಿ ಸುಂದರ್ ಸುವರ್ಣ, ಜೊತೆ ಕಾರ್ಯದರ್ಶಿ ಯಾಗಿ ದೀಪಕ್ ಪಿಲಾರ್, ಕೋಶಾಧಿಕಾರಿಯಾಗಿ ರಘುರಾಮ್ ಸುವರ್ಣ. ಹಾಗೂ ಇತರ ಕಾರ್ಯಕಾರಿ ಸದಸ್ಯರು ಆಯ್ಕೆಯಾಗಿದ್ದಾರೆ.

## ವಿಜಯ ಗೇಮ್ಸ್ ಟೀಮ್‌ನ ನೂತನ ಅಧ್ಯಕ್ಷರಾಗಿ ಮಾರ್ವಿನ್ ಡೇವಿಸ್ ಅವಿರೋಧ ಆಯ್ಕೆ

**ಉಳ್ಳಾಲ:** ಕುತ್ತಾರು, ಪಂಡಿತ್ ಹೌಸ್‌ನ ವಿಜಯ ಗೇಮ್ಸ್ ಟೀಮ್‌ನ ನೂತನ ಅಧ್ಯಕ್ಷರಾಗಿ ಮಾರ್ವಿನ್ ಡೇವಿಸ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಸಂಘದ ಕಚೇರಿಯಲ್ಲಿ ನಡೆದ ಮಹಾಸಭೆಯಲ್ಲಿ ಗೌರವ ಅಧ್ಯಕ್ಷರಾಗಿ ಚಂದ್ರಹಾಸ್ ಪಂಡಿತ್ ಹೌಸ್ ಅವರು ಮರು ಆಯ್ಕೆಯಾದರು. ಪ್ರಧಾನ ಕಾರ್ಯದರ್ಶಿಯಾಗಿ ಮನೋಹರ್ ಕಿರೋಡಿಯನ್ ಹಾಗೂ ಕೋಶಾಧಿಕಾರಿಯಾಗಿ ಭರತ್ ಶೆಟ್ಟಿ ಅವಿರೋಧವಾಗಿ ಆಯ್ಕೆಯಾದರು.

ಮಹಾಸಭೆಯಲ್ಲಿ ಧನರಾಜ್ ಪ್ರಸ್ತಾವಿಸಿ ಸ್ವಾಗತಿಸಿದರು. ಕೋಶಾಧಿಕಾರಿ ಭರತ್ ಶೆಟ್ಟಿ ಸಂಘದ ಲೆಕ್ಕಪತ್ರವನ್ನು ಮಂಡಿಸಿದರು.

## ತಲಪಾಡಿ; ಅಕ್ರಮ ಕೆಂಪು ಕಲ್ಲು ಸಾಗಾಟ ಪತ್ತೆ..!

**ಉಳ್ಳಾಲ:** ಕೇರಳದಿಂದ ಕರ್ನಾಟಕಕ್ಕೆ ಅಕ್ರಮವಾಗಿ ಸಾಗಾಟ ಮಾಡುತ್ತಿದ್ದ ಕೆಂಪು ಕಲ್ಲುಗಳನ್ನು ಉಳ್ಳಾಲ ಪೊಲೀಸರು ತಪಾಸಣೆ ಸಂದರ್ಭದಲ್ಲಿ ತಲಪಾಡಿಯಲ್ಲಿ ಪತ್ತೆ ಹಚ್ಚಿದ ಘಟನೆ ಬುಧವಾರ ನಡೆದಿದೆ.

ಪೊಲೀಸರು ತಪಾಸಣೆ ಮಾಡಿದ ಸಂದರ್ಭದಲ್ಲಿ ಲಾರಿಯಲ್ಲಿ 500 ಕೆಂಪು ಕಲ್ಲುಗಳು ಪತ್ತೆ ಆಗಿವೆ. ಇದರ ಮೌಲ್ಯ 16 ಸಾವಿರ ಎಂದು ಅಂದಾಜಿಸಲಾಗಿದೆ. ಆರೋಪಿಗಳು ಈಚರ್ ಲಾರಿಯಲ್ಲಿ ಅಕ್ರಮವಾಗಿ ಕಲ್ಲು ಸಾಗಾಟ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಈಚರ್ ವಾಹನದ ಚಾಲಕ ಅಜೂಬ ಅಬ್ದುಲ್ಲ ನೆಬಾರಿ, ಮಾಲಕ ಸಿರಾಜ್ ಹಾಗೂ ಕೋರೆಯ ಮಾಲಕ ಯಾವುದೇ ಪರವಾನಿಗೆ ಪಡೆಯದೇ ಕಲ್ಲು ಸಾಗಾಟ ಮಾಡುತ್ತಿದ್ದರು ಎಂದು ತಿಳಿದು ಬಂದಿದೆ. ಈ ಘಟನೆಗೆ ಸಂಬಂಧಿಸಿದಂತೆ ಮೂವರ ವಿರುದ್ಧ ಪ್ರಕರಣ ದಾಖಲಿಸಿದ ಪೊಲೀಸರು ಕಲ್ಲು ಮತ್ತು ಈಚರ್ ಲಾರಿಯನ್ನು ವಶಪಡಿಸಿಕೊಂಡಿದ್ದಾರೆ.





ಬೀರಿ–ಕೋಟೆಕಾರ್‌ನ
# ಪರಿವಾರ್ ರೆಸಿಡೆನ್ಸಿ
ಹೊಸ ಆಡಳಿತದೊಂದಿಗೆ
ಸೆ.16ರಂದು ಮತ್ತೆ ಶುಭಾರಂಭ

ಲೋಕಲ್ ಟು ಗ್ಲೋಬಲ್
ವ್ಯವಸ್ಥೆಯಿರುವ ಏಕೈಕ ಬಾರ್



**ಮಂಗಳೂರು:** ಕೋಟೆಕಾರ್ ಬೀರಿಯಲ್ಲಿರುವ ಪರಿವಾರ್ ರೆಸಿಡೆನ್ಸಿ ನೂತನ ಆಡಳಿತದೊಂದಿಗೆ ಹೊಸ ರೂಪದಲ್ಲಿ ಕಾರ್ಯಾಚರಣೆ ಆರಂಭಿಸುತ್ತಿದ್ದು, ಇದರ ಅಂಗವಾಗಿ 'ಬಾರ್ ಪರಿವಾರ್'ನ ಭವ್ಯ ಉದ್ಘಾಟನಾ ಸಮಾರಂಭ ಸೆಪ್ಟೆಂಬರ್ 16ರಂದು ಬುಧವಾರ ಬೆಳಗ್ಗೆ 10 ಗಂಟೆಗೆ ನಡೆಯಲಿದೆ.

ಕೋಟೆಕಾರ್ ಬೀರಿಯ ಸೋಮೇಶ್ವರ ಗ್ರಾಮದ ಪರಿವಾರ್ ರೆಸಿಡೆನ್ಸಿಯಲ್ಲಿ ನಡೆಯಲಿರುವ ಉದ್ಘಾಟನಾ ಕಾರ್ಯಕ್ರಮಕ್ಕೆ ಗ್ರಾಹಕರು ಹಾಗೂ ಸಾರ್ವಜನಿಕರನ್ನು ಆತ್ಮೀಯವಾಗಿ ಆಹ್ವಾನಿಸಲಾಗಿದೆ.

'ಗ್ಲೋಬಲ್ ಕ್ಯೂಸಿನ್, ಲೋಕಲ್ ಫ್ಲೇವರ್ಸ್, ಗ್ರೇಟ್ ಅಂಬಿಯನ್ಸ್' ಎಂಬ ಪರಿಕಲ್ಪನೆಯೊಂದಿಗೆ ಸ್ಥಳೀಯ ರುಚಿಯೊಂದಿಗೆ ಜಾಗತಿಕ ಮಟ್ಟದ ಆಹಾರ ಅನುಭವವನ್ನು ನೀಡಲು ಸಂಸ್ಥೆ ಮುಂದಾಗಿದೆ. Celebrate - Dine - Stay ಎಂಬ ಪರಿಕಲ್ಪನೆಯಡಿ ಆಹಾರ, ಆಚರಣೆ ಹಾಗೂ ಆರಾಮದಾಯಕ ವಾಸವ್ಯಕ್ಕೆ ಅಗತ್ಯವಿರುವ ಸೌಲಭ್ಯಗಳನ್ನು ಒಂದೇ ಸೂರಿನಡಿ ಒದಗಿಸಲಾಗುತಿದೆ. ಮುಂದಿನ ದಿನಗಳಲ್ಲಿ ಹೊಸ ಆಡಳಿತದಡಿ ಗ್ರಾಹಕರ ಅಗತ್ಯೆಗಳಿಗೆ ಅನುಗುಣವಾಗಿ ಇನ್ನಷ್ಟು ಹೊಸ ಸೌಲಭ್ಯಗಳು ಮತ್ತು ಸೇವೆಗಳನ್ನು ಪರಿಚಯಿಸುವ ಯೋಜನೆಯನ್ನು ಸಂಸ್ಥೆ ಹೊಂದಿದೆ. ಪರಿವಾರ್ ರೆಸಿಡೆನ್ಸಿಯ ಮ್ಯಾನೇಜಿಂಗ್ ಪಾರ್ಟ್ನರ್‌ಗಳಾದ ಕೃಷ್ಣ ಶೆಟ್ಟಿ ಮತ್ತು ರಘುನಾಥ ಶೆಟ್ಟಿ ಅವರ ನೇತೃತ್ವದಲ್ಲಿ ಸಂಸ್ಥೆ ಹೊಸ ಆಡಳಿತೆದೊಂದಿಗೆ ಕಾರ್ಯಾಚರಣೆ ಆರಂಭಿಸುತಿದ್ದು, ಗುಣಮಟ್ಟದ ಆತಿಥ್ಯ, ಉತ್ತಮ ವಾತಾವರಣ ಮತ್ತು ಕೈಗೆಟುಕುವ ದರದಲ್ಲಿ ಸೇವೆ ನೀಡಲು ಆದ್ಯತೆ ನೀಡಲಾಗಿದೆ. ಸೆ.16ರಂದು ನಡೆಯಲಿರುವ 'ಬಾರ್ ಪರಿವಾರ್' ಉದ್ಘಾಟನಾ ಸಮಾರಂಭಕ್ಕೆ ಸಾರ್ವಜನಿಕರು ಹಾಗೂ ಹಿತೈಷಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸಂಸ್ಥೆಯ ಹೊಸ ಪ್ರಯತ್ನಕ್ಕೆ ಶುಭ ಹಾರೈಸುವಂತೆ ಸಂಸ್ಥೆಯ ವತಿಯಿಂದ ಕೋರಲಾಗಿದೆ.



**ಕೃಷ್ಣ ಶೆಟ್ಟಿ ಮ್ಯಾನೇಜಿಂಗ್ ಪಾರ್ಟ್ನರ್**
ಪರಿವಾರ್ ರೆಸಿಡೆನ್ಸಿ, ಕೋಟೆಕಾರ್, ಬೀರಿ



**ರಘುನಾಥ್ ಶೆಟ್ಟಿ ಮ್ಯಾನೇಜಿಂಗ್ ಪಾರ್ಟ್ನರ್**
ಪರಿವಾರ್ ರೆಸಿಡೆನ್ಸಿ, ಕೋಟೆಕಾರ್, ಬೀರಿ

### ಹೊಸ ಆಡಳಿತದೊಂದಿಗೆ ಹೊಸ ಚೈತನ್ಯ

ಹೊಸ ಆಡಳಿತದೊಂದಿಗೆ ಪರಿವಾರ್ ರೆಸಿಡೆನ್ಸಿ ಗ್ರಾಹಕರಿಗೆ ಇನ್ನಷ್ಟು ಉತ್ತಮ ಅನುಭವ ನೀಡುವ ನಿಟ್ಟಿನಲ್ಲಿ ತನ್ನ ಸೇವೆಗಳನ್ನು ವಿಸ್ತರಿಸುತ್ತಿದೆ. ಸ್ಥಳೀಯ ಗ್ರಾಹಕರಿಂದ ಹಿಡಿದು ದೇಶ-ವಿದೇಶಗಳ ಜಾಗತಿಕ ಗ್ರಾಹಕರವರೆಗೆ ಎಲ್ಲರಿಗೂ ಅನುಕೂಲವಾಗುವಂತೆ ಗುಣಮಟ್ಟದ ಸೇವೆಗಳನ್ನು ಕೈಗೆಟುಕುವ ದರದಲ್ಲಿ ಒದಗಿಸುವ ಉದ್ದೇಶವನ್ನು ಸಂಸ್ಥೆ ಹೊಂದಿದೆ. ಪರಿವಾರ್ ರೆಸಿಡೆನ್ಸಿಯಲ್ಲಿ 'ಸ್ಪೈಸ್ ರೂಟ್' ಮಲ್ಟಿ-ಕ್ಯೂಸಿನ್ ರೆಸ್ಟೋರೆಂಟ್ & ಬಾರ್, ಆಧುನಿಕ ಸೌಲಭ್ಯಗಳನ್ನು ಹೊಂದಿರುವ 21 ಎಕ್ಸಿಕ್ಯೂಟಿವ್ ಕೊಠಡಿಗಳು ಹಾಗೂ ಎಸಿ ಬ್ಯಾಂಕ್ವೆಟ್ ಹಾಲ್‌ಗಳು ಲಭ್ಯವಿವೆ. ಸುಮಾರು 1,000 ಮಂದಿ ಅತಿಥಿಗಳಿಗೆ ಆತಿಥ್ಯ ನೀಡುವ ಸಾಮರ್ಥ್ಯ ಹೊಂದಿರುವ ಬ್ಯಾಂಕ್ವೆಟ್ ಹಾಲ್‌ಗಳು ಮದುವೆ, ಸಭೆ, ಸಮಾರಂಭ ಹಾಗೂ ವಿವಿಧ ಕಾರ್ಯಕ್ರಮಗಳಿಗೆ ಸೂಕ್ತವಾಗಿವೆ.

ವಿಳಾಸ: #5–73, ಕೋಟೇಕಾರ್ ಬೀರಿ, ಸೋಮೇಶ್ವರ ಗ್ರಾಮ, ಉಳ್ಳಾಲ ತಾಲೂಕು, ಮಂಗಳೂರು–575022. 0824–2219000


ಸಾಧಕಶ್ರೇಷ್ಠ ಪ್ರಶಸ್ತಿ ವಿಜೇತ ಪ್ರವೀಣ್ ಕುಮಾರ್ ಕೊಡಿಯಾಲ್‌ಬೈಲ್‌ಗೆ
## ಕಾಸರಗೋಡು ಪತ್ರಕರ್ತರ ಸಂಘದ ಗೌರವ!



**ಕಾಸರಗೋಡು:** ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘ (ರಿ.) ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಏಗಘಎ) ಕಾಸರಗೋಡು ಜಿಲ್ಲಾ ಘಟಕದ ಜಂಟಿ ಆಶ್ರಯದಲ್ಲಿ 'ಸ್ನೇಹ ತರಂಗ' ಪತ್ರಕರ್ತರ ಕುಟುಂಬ ಮಿಲನ ಕಾರ್ಯಕ್ರಮವು ಕಾಸರಗೋಡಿನ ಸೇವಾ ಸಹಕಾರಿ ಬ್ಯಾಂಕ್ ಸಭಾಂಗಣದಲ್ಲಿ ನಡೆಯಿತು.

ಕಾರ್ಯಕ್ರಮದಲ್ಲಿ ಗೌರವ ಪುರಸ್ಕಾರಕ್ಕೆ ಸಾಧಕಶ್ರೇಷ್ಠ ಪ್ರಶಸ್ತಿ ವಿಜೇತ ಪ್ರವೀಣ್ ಕುಮಾರ್ ಕೊಡಿಯಾಲ್ ಬೈಲ್ ಅವರನ್ನು ಸಂಘದ ವತಿಯಿಂದ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಹಿರಿಯ ಪತ್ರಕರ್ತ ಹಾಗೂ ಕನ್ನಡಪರ ಹೋರಾಟಗಾರ ಅಶೋಕ ಯಂಕಪ್ಪ ಚಂದರಗಿ, ಕಾಸರಗೋಡು ಶಾಸಕ ಕಲ್ಲಟ್ರ ಮಾಹಿನ್ ಹಾಜಿ, ಧಾರ್ಮಿಕ ಹಾಗೂ ಸಾಮಾಜಿಕ ಮುಂದಾಳು ಬ್ರಹ್ಮಶ್ರೀ ರವೀಶ ತಂತ್ರಿ ಕುಂಟಾರು, ರಾಷ್ಟ್ರೀಯ ಪ್ರಶಸ್ತಿ ವಿಜೇತ ಶ್ರೇಷ್ಠ ಪೋಷಕ ನಟಿ ಕು. ರೂಪಶ್ರೀ ವರ್ಕಾಡಿ, ರಾಷ್ಟ್ರೀಯ ಗೌರವ ಐಕಾನ್ ಪ್ರಶಸ್ತಿ?2026 ಪುರಸ್ಕೃತ ಶಾಫಿ ಬಂಡಸಾಲೆ, ಟಿ. ಶಂಕರ ನಾರಾಯಣ ಭಟ್ ,ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರವಿ ನಾಯ್ಕಾಪು, ಏಗಘಎ ಕಾಸರಗೋಡು ಜಿಲ್ಲಾ ಘಟಕದ ಅಧ್ಯಕ್ಷ ಎ.ಆರ್. ಸುಬ್ಬಯ್ಯಕಟ್ಟೆ, ರಾಜ್ಯ ಸಮಿತಿ ಸದಸ್ಯ ರಾಧಾಕೃಷ್ಣ ಕೆ. ಉಳಿಯತ್ತಡ್ಕ, ಕಾರ್ಯದರ್ಶಿ ಗಂಗಾಧರ ತೆಕ್ಕೆಮೂಲೆ, ಕೋಶಾಧಿಕಾರಿಗಳಾದ ಅಜಿತ್ ಸ್ವರ್ಗ ಹಾಗೂ ಶ್ರೀಕಾಂತ್ ನೆಟ್ಟಣಿಗೆ ಸೇರಿದಂತೆ ಹಲವರು ಭಾಗವಹಿಸಿದ್ದರು.

## ಉರ್ವಾ ಸಂತ ಅಲೋಶಿಯಸ್ ಶಾಲೆಯಲ್ಲಿ ಕೊಂಕಣಿ ಮಾನ್ಯತಾ ದಿನಾಚರಣೆ

**ಮಂಗಳೂರು:** ಸಂತ ಅಲೋಶಿಯಸ್ ಅಂಗ್ಲ ಮಾಧ್ಯಮ ಶಾಲೆ, ಉರ್ವಾ, ಮಂಗಳೂರು ವತಿಯಿಂದ ಕೊಂಕಣಿ ಮಾನ್ಯತಾ ದಿವಸವನ್ನು 31 ಆಗಸ್ಟ್ 2026ರಂದು ಬೆಳಿಗ್ಗೆ 11:15ಕ್ಕೆ ಉರ್ವ ಚರ್ಚ್ ಹಾಲ್‌ನಲ್ಲಿ ಅತ್ಯಂತ ಉತ್ಸಾಹ ಮತ್ತು ಸಂಭ್ರಮದಿಂದ ಆಚರಿಸಲಾಯಿತು.

ಕಾರ್ಯಕ್ರಮವು ಪ್ರಾರ್ಥನಾ ಗೀತೆಯೊಂದಿಗೆ ಆರಂಭವಾಯಿತು. ನಂತರ ವಿದ್ಯಾರ್ಥಿಗಳು ಸುಂದರವಾದ ಸ್ವಾಗತ ನೃತ್ಯವನ್ನು ಪ್ರದರ್ಶಿಸಿದರು. ಬಳಿಕ ಮುಖ್ಯ ಅತಿಥಿಗಳು ಹಾಗೂ ಗಣ್ಯರನ್ನು ವೇದಿಕೆಗೆ ಆತ್ಮೀಯವಾಗಿ ಆಹ್ವಾನಿಸಲಾಯಿತು.

ಸ್ವಾಗತ ಭಾಷಣವನ್ನು ಕು!ಸಾನ್ವಿ ಡಿಸೋಜಾ ಅವರು ಮಾಡಿದರು. ನಂತರ ದೀಪ ಬೆಳಗಿಸುವ ಹಾಗೂ ಗುಮ್ಟಾಂ ಬಾರಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ಅಧ್ಯಕ್ಷರು ಮತ್ತು ಮುಖ್ಯ ಅತಿಥಿಗಳು ದೀಪ ಬೆಳಗಿಸಿ ಕಾರ್ಯಕ್ರಮಕ್ಕೆ ಶುಭಾರಂಭ ನೀಡಿದರು.

ಅನಂತರ ಕೊಂಕಣಿ ಧ್ವಜಾವನ್ನು ಪ್ರತೀಷ್ಟಾ ಪಿಸಲಾತು. ಎಲ್ಲರೂ ಸೇರಿ ಕೊಂಕಣಿ ಗೀತೆಯನ್ನು ಹಾಡಿದರು.




ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀ ಲಾರೆನ್ಸ್ ಸಲ್ಡಾನ್ಹಾ, ಅಧ್ಯಕ್ಷರಾಗಿ ರೆವರೆಂಡ್ ಫಾದರ್ ಬೆಂಜಮಿನ್ ಪಿಂಟೊ, ಮುಖ್ಯೋಪಾಧ್ಯಾಯರಾದ ಶ್ರೀ ಅಲೋಶಿಯಸ್ ಡಿಸೋಜಾ ಹಾಗೂ ಹಿರಿಯ ಶಿಕ್ಷಕಿಯಾದ ಶ್ರೀಮತಿ ಲವೀನಾ ಪಿಂಟೊ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಾದ ನಂದನ್ ನಾಯಕ್ ಮತ್ತು ಆನ್ಸಿಯಾ ಸೆರಾ ಮೊಂತೆರೊ ಅವರು ಅಚ್ಚುಕಟ್ಟಾಗಿ ಕಾರ್ಯಕ್ರಮವನ್ನು ನಿರ್ವಹಿಸಿದರು.

ಮುಖ್ಯ ಅತಿಥಿಗಳಾದ ಹಿರಿಯ ಕೊಂಕಣಿ ಕಲಾವಿದ ಶ್ರೀ ಲಾರೆನ್ಸ್ ಸಲ್ಡಾನ್ಹಾ ಅವರು ಕೊಂಕಣಿ ಭಾಷೆ, ಸಂಸ್ಕೃತಿ ಮತ್ತು ಪರಂಪರೆಯ ಮಹತ್ವದ ಕುರಿತು ಪ್ರೇರಣಾದಾಯಕ ಭಾಷಣ ಮಾಡಿದರು. ನಂತರ ಅವರನ್ನು ಶಾಲೆಯ ವತಿಯಿಂದ ಗೌರವಪೂರ್ವಕವಾಗಿ ಸನ್ಮಾನಿಸಲಾಯಿತು. ಮುಖ್ಯ ಅತಿಥಿಗಳು ತಾವೇ ರಚಿಸಿದ ಸುಮಧುರವಾದ ಕೊಂಕಣಿ ಹಾಡಿನ ಮೂಲಕ ನೆರೆದಿದ್ದವರನ್ನು ರಂಜಿಸಿದರು.

ಕು! ಸ್ನೇಹಾ ಕುಡುವಾ ಅವರು ಕೊಂಕಣಿ ಮಾನ್ಯತಾ ದಿವಸದ ಮಹತ್ವದ ಕುರಿತು ಮಾತನಾಡಿದರು. ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನೃತ್ಯ, ಕಿರುನಾಟಕ ಮತ್ತು ಗುಮ್ಟಾ ಪ್ರದರ್ಶನಗಳು ನಡೆದವು .ಸೋನಿಯಾ ಫೇರಾವೊರವರು ಸರ್ವರಿಗೆ ಧನ್ಯವಾದ ನೀಡಿದರು.

ಕೊನೆಗೆ ವಿದ್ಯಾರ್ಥಿಗಳಿಗೆ ಸಿಹಿ ತಿಂಡಿ ವಿತರಿಸಲಾಯಿತು.

## ನಾರಾಯಣ ಗುರುಗಳ ತತ್ವಗಳು ಇಂದಿಗೂ ಪ್ರಸ್ತುತವಾಗಿವೆ: ಚಂದ್ರಹಾಸ್ ಪಂಡಿತ್‌ಹೌಸ್

**ಉಳ್ಳಾಲ:** ಹಿಂದುಳಿದ ಸಮಾಜವನ್ನು ಸಂಘಟಿಸಿ ಸಮಾಜದ ಮುಖ್ಯವಾಹಿನಿಗೆ ತಂದು, ಎಲ್ಲರಿಗೂ ಗೌರವದ ಸ್ಥಾನ ದೊರಕಿಸಿಕೊಟ್ಟ ನಾರಾಯಣ ಗುರುಗಳ ತತ್ವಗಳು ಇಂದಿಗೂ ಪ್ರಸ್ತುತವಾಗಿವೆ. "ಒಂದೇ ಜಾತಿ, ಒಂದೇ ಮತ, ಒಂದೇ ದೇವರು" ಎಂಬ ಗುರುಗಳ ಸಂದೇಶವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಹಿಂದೂ ಧರ್ಮದ ದೊಡ್ಡ ಸಮಾಜವಾಗಿರುವ ಬಿಲ್ಲವ ಸಮಾಜ ಎಲ್ಲರಿಗೂ ಮಾದರಿಯಾಗಬೇಕು ಎಂದು ಕೊಲ್ಯ ಶ್ರೀ ಮೂಕಾಂಬಿಕಾ ದೇವಸ್ಥಾನದ ಅಧ್ಯಕ್ಷರಾದ ಚಂದ್ರಹಾಸ್ ಪಂಡಿತ್ ಹೌಸ್ ಹೇಳಿದರು.

ಕೊಲ್ಯ?ಸೋಮೇಶ್ವರದ ಬ್ರಹ್ಮಶ್ರೀ ನಾರಾಯಣ ಗುರು ಧ್ಯಾನ ಮಂದಿರದಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಗಳ 172ನೇ ಜನ್ಮದಿನಾಚರಣೆ ಪ್ರಯುಕ್ತ ಜರಗಿದ ಧಾರ್ಮಿಕ ಸಭಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರಾಷ್ಟ್ರೀಯ ಬಿಲ್ಲವ ಮಹಾಮಂಡಲದ ಪ್ರಧಾನ ಕಾರ್ಯದರ್ಶಿ ಜಯಾನಂದ ಎಂ. ಮಾತನಾಡಿ, ಬಿಲ್ಲವ ಮಹಾಮಂಡಲದ ಕಾರ್ಯದರ್ಶಿ ಹಾಗೂ ನಿವೃತ್ತ ಮೆಸ್ಕಾಂ ಅಧಿಕಾರಿ ದಯಾನಂದ ಎಂ. ಮಾತನಾಡಿ, ಕೇರಳದಲ್ಲಿ ಆಚರಿಸುವ ಓಣಂ ಹಬ್ಬದ ಸಂದರ್ಭದಲ್ಲಿ, ಮೂರನೇ ದಿನ ಶತಭಿಷಾ ನಕ್ಷತ್ರದಲ್ಲಿ ವಿಶ್ವಮಾನವ ನಾರಾಯಣ ಗುರುಗಳು ಜನಿಸಿದರು. ಅವರ ದೈವ ದರ್ಶನಂ ಕೃತಿಯು ಇಂಗ್ಲೆಂಡ್‌ನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಅನಾವರಣಗೊಂಡಿರುವುದು ಸಂತಸದ ಸಂಗತಿ. ಈ ಕೃತಿ 137 ಭಾಷೆಗಳಿಗೆ ಅನುವಾದಗೊಂಡು ಅಧ್ಯಯನದ ವಸ್ತುವಾಗಿದೆ. ವೃದ್ಧಾಪ್ಯದಲ್ಲಿ ತಂದೆ–ತಾಯಂದಿರು ಆಶ್ರಮವಾಸಿಗಳಾಗದಂತೆ ಮಕ್ಕಳು ಅವರನ್ನು ನೋಡಿಕೊಳ್ಳಬೇಕು. ಹೆತ್ತವರ ಜವಾಬ್ದಾರಿಯನ್ನು ಪೂರ್ಣಗೊಳಿಸಿ ಗುರುಗಳ ಸಂದೇಶವನ್ನು ಪಾಲಿಸಬೇಕು. ಜೀವನದ ವಿವಿಧ ಹಂತಗಳಲ್ಲಿ ಹೆತ್ತವರನ್ನು



ಸಲಹುವುದು ಮತ್ತು ಅವರ ಆರೈಕೆ ಮಾಡುವುದು ಮಕ್ಕಳ ಕರ್ತವ್ಯವಾಗಿದೆ .ಗುರು ಚಾರಿಟೇಬಲ್ ಟ್ರಸ್ಟ್ ಹಲವು ವರ್ಷಗಳಿಂದ ಅಶಕ್ತ ಮಕ್ಕಳ ಶಿಕ್ಷಣಕ್ಕೆ ಸಹಾಯ ಮಾಡುತ್ತಾ ಬಂದಿದೆ. ಕಠಿಣ ಪರಿಸ್ಥಿತಿಯಲ್ಲಿರುವ ಮಕ್ಕಳ ಬದುಕನ್ನು ಸಮೀಕ್ಷೆಗಳ ಮೂಲಕ ಗುರುತಿಸಿ ಅವರಿಗೆ ನೆರವಾಗುವ ಕಾರ್ಯ ಮುಂದುವರಿಯಬೇಕು ಎಂದರು.

ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಮತಾ ಡಿ.ಎಸ್. ಗಟ್ಟಿ ಮಾತನಾಡಿ, ದೇಶಕ್ಕೆ ಸ್ವಾತಂತ್ರ್ಯ ದೊರಕುವಲ್ಲಿ ಗುರುಗಳ ಹೋರಾಟವೂ ಮಹತ್ವದ ಪಾತ್ರ ವಹಿಸಿದೆ. ಸಮಾಜದಲ್ಲಿ ಪ್ರತಿಯೊಬ್ಬರೂ ಗೌರವಯುತವಾಗಿ ಬದುಕಬೇಕು ಎಂಬ ನಿಟ್ಟಿನಲ್ಲಿ ನಾರಾಯಣ ಗುರುಗಳ ತತ್ವಗಳು ಮಾರ್ಗದರ್ಶನ ನೀಡುತ್ತವೆ. ಗುರುಗಳು ಕೊಲ್ಯಕ್ಕೆ ಭೇಟಿ ನೀಡಿದ ಹಿನ್ನೆಲೆ ಕೊಲ್ಯ ಪವಿತ್ರ ಮಣ್ಣಿನ ಪ್ರದೇಶವಾಗಿದ್ದು, ಅವರ ಹೆಸರಿನಲ್ಲಿ ನಡೆಯುತ್ತಿರುವ ಸಮಾಜಸೇವಾ ಕಾರ್ಯಗಳು ಶ್ಲಾಘನೀಯ .ಸಾಮಾಜಿಕ ಬದುಕಿನಲ್ಲಿ ನಾರಾಯಣ ಗುರುಗಳ ಮಂದಿರ ಸ್ಥಾಪನೆಯಾಗಲು ಜನಾರ್ದನ ಪೂಜಾರಿ ಅವರ ಕೊಡುಗೆ ಮಹತ್ವದ್ದಾಗಿದೆ. ಅದ್ದೂರಿ ಮದುವೆ ಸೇರಿದಂತೆ ಅನಗತ್ಯ ಆಡಂಬರಗಳಿಗೆ ಅವರು ವಿರೋಧ ವ್ಯಕ್ತಪಡಿಸುತ್ತಾ ಬಂದಿದ್ದು, ಸರಳತೆ ಶಾಶ್ವತ, ಪ್ರಾಮಾಣಿಕತೆ ಮಾತ್ರ ಶಾಶ್ವತ ಎಂಬ ಸಂದೇಶವನ್ನು ಸಮಾಜಕ್ಕೆ ನೀಡಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಲೆಕ್ಕ ಪರಿಶೋಧಕರು ಸಿ. ಎ. ಶ್ರೀವತ್ಸ ಎನ್. ಬಲ್ಲಕುರಾಯ, ಕೋ–ಟೆಕಾರು ಪಟ್ಟಣ ಪಂಚಾಯತ್ ಅಧ್ಯಕ್ಷರು ದಿವ್ಯ ಸತೀಶ್ ಶೆಟ್ಟಿ, ಆತ್ಮಶಕ್ತಿ ಪತ್ರಿಕೆಯ ಸಹಾಯಕ ಸಂಪಾದಕರು ವಿಶ್ವನಾಥ ಪೂಜಾರಿ ರೆಂಜಾಳ , ಬಿಲ್ಲವ ಸೇವಾ ಸಮಾಜದ ಅಧ್ಯಕ್ಷರು ಗೋಪಾಲ ಕೊಂಡಾಣ, ಟ್ರಸ್ಟ್ ಗೌರವಾಧ್ಯಕ್ಷರು ಈಶ್ವರ್ ಸುವರ್ಣ, ನಾರಾಯಣ ಗುರುಗಳ ಮಹಿಳಾ ಮಂಡಳಿ ಅಧ್ಯಕ್ಷೆ ತ್ರಿವೇಣಿ ಕುಂಪಲ, ಸಾಂಸ್ಕೃತಿಕ ಸಂಚಾಲಕರು ಜೀವನ್ ಕೊಲ್ಯ ಉಪಸ್ಥಿತರಿದ್ದರು.

ಕುಸುಮಾಕರ ಕುಂಪಲ, ಲತೀಶ್ ಎಂ. ಸಂಕೊಳಿಗೆ ನಿರೂಪಿಸಿದರು. ಟ್ರಸ್ಟ್ ಅಧ್ಯಕ್ಷರು ಶೇಷಪ್ಪ ಬೈದ್ಯಮನೆ ಸ್ವಾಗತಿಸಿದರು. ಸುಂದರ್ ಸುವರ್ಣ ವಂದಿಸಿದರು.

ಇದೇ ಸಂದರ್ಭ ನಾರಾಯಣ ಗುರು ಯಕ್ಷಗಾನ ಕಲಾ ಸಂಘ ಕೊಲ್ಯ ಇವರಿಂದ ಯಕ್ಷಗಾನ ತಾಳಮದ್ದಳೆ ಬ್ರಾಣೆ ಶರ್ತ್ ಹಾಗೂ ಶ್ರೀ ಗುರು ಕುಣಿತ ಭಜನಾ ತಂಡ ಕೊಲ್ಯ ಇವರಿಂದ ಕುಣಿತ ಭಜನಾ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ವ್ಯವಹಾರಿಕ ಪ್ರಬಂಧ ಮಂಡಣೆಯಲ್ಲಿ ರಾಷ್ಟ್ರಮಟ್ಟದಲ್ಲಿ ವಿಜೇತ ರಕ್ಷಿತ್ ಜೈ ಕುಮಾರ್ ಕೊಲ್ಯ ಸೇರಿದಂತೆ ಪಿಯುಸಿ, ಎಸ್ ಎಸ್ ಎಲ್ ಸಿಯಲ್ಲಿ ಅಧಿಕ ಅಂಕ ಪಡೆದು ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಕಾರ್ಯಕ್ರಮದ ಪ್ರಯುಕ್ತ ಏರ್ಪಡಿಸಿದ್ದ ವಿವಿಧ ಕ್ರೀಡಾ ವಿಜೇತರ ಪ್ರಶಸ್ತಿಗಳನ್ನು ವಿತರಿಸಲಾಯಿತು.

# ಶ್ರೀ ಕೃಷ್ಣ ಜನ್ಮಾಷ್ಟಮಿಯ ಸಲುವಾಗಿ ಸನಾತನ ಹಿಂದೂ ಸೇವಾ ಪ್ರತಿಷ್ಠಾನದ ವತಿಯಿಂದ ಬಡ 200ಕುಟುಂಬಗಳಿಗೆ ಅಕ್ಕಿ ವಿತರಣೆ



**ಕುತ್ತಾರು:** ಕುತ್ತಾರು ದುರ್ಗಾವಾಹಿನಿ ಮಹಿಳಾ ಮಂಡಲ ಕಚೇರಿಯಲ್ಲಿ ಕುತ್ತಾರಿನ ಸನಾತನ ಹಿಂದೂ ಸೇವಾ ಪ್ರತಿಷ್ಠಾನದ ವತಿಯಿಂದ ಶ್ರೀ ಕೃಷ್ಣ ಜನ್ಮಾಷ್ಟಮಿಯ ಸಲುವಾಗಿ ಬಡ 200ಕುಟುಂಬಗಳಿಗೆ ಅಕ್ಕಿ ವಿತರಿಸಲಾಯಿತು. ಈ ಸಂದರ್ಭ ಎಂದು ಸನಾತನ ಹಿಂದೂ ಸೇವಾ ಪ್ರತಿಷ್ಠಾನ ಕೋಶಾಧಿಕಾರಿ ಸುನಿಲ್ ಕುಮಾರ್ ಮಾತನಾಡಿ, ಜನಸೇವೆ ಜನಪರ ಕಾರ್ಯಗಳನ್ನು ಮಾಡುವುದಕ್ಕೆ ದೊಡ್ಡ ತಂಡದ ಅಗತ್ಯವಿಲ್ಲ. ಸಮಾನಮನಸ್ಕ ನಾಲ್ಕು ಜನರಿಂದ ಆರಂಭವಾದ ಸಂಘಟನೆ ಇಂದು ನಲ್ವತ್ತು ಮಂದಿ ಸದಸ್ಯರಿದ್ದು ಸನಾತನ ಹಿಂದೂ ಸೇವಾ ಪ್ರತಿಷ್ಠಾನವಾಗಿ ರೂಪುಗೊಂಡಿದ್ದು ಇದು ಯಾವುದೇ ರಾಜಕೀಯ ವೇದಿಕೆ ಆಗಿರದೆ ಸೇವೆಯನ್ನು ಗುರಿಯಾಗಿಸಿಕೊಂಡಿದ್ದು ಪ್ರಸ್ತುತ ಈ ಸಂಸ್ಥೆಯಲ್ಲಿ 60ವರ್ಷ ದಾಟಿದವರೇ 75ಶೇ. ಸದಸ್ಯರು ಇದ್ದಾರೆ ಅಂತ ಹೇಳಿದ್ದಾರೆ. ಬಳಿಕ ದೈಹಿಕ ಶಿಕ್ಷಣ ಶಿಕ್ಷಕಿ ಹರ್ಷಲ್ ಸ್ಮಿತಾ ಸುನಿಲ್ ಮಾತನಾಡಿ ಮಕ್ಕಳು ಇತರರ ಜನ್ಮ ದಿನದಂದು ಸಂಭ್ರಮಿಸುವ ಹಾಗೇ ತಾಯಂದಿರ ದಿನದಂದು ತಮ್ಮ ತಾಯಿಯನ್ನು, ತಂದೆಯರ ದಿನದಂದು ತಂದೆಯನ್ನು ಗೌರವಿಸಬೇಕು. ಈಗಿನ ಮಕ್ಕಳಿಗೆ ಪೋಷಕರನ್ನು ಗೌರವಿಸುವ ಗುಣ ಇಲ್ಲ. ಶಾಲೆಯಲ್ಲಿ ಶಿಕ್ಷಕರು ಹೊಡೆಯುವ ಅಧಿಕಾರ ಇಲ್ಲ. ಶಾಲೆಯಲ್ಲಿ ಉತ್ತಮ ಶಿಕ್ಷಣ ಕೊಡಬಹುದೇ ಹೊರತು ಸಂಸ್ಕೃತಿ ಸಂಸ್ಕಾರ ಮನೆಯಿಂದಲೇ ಆರಂಭವಾಗಬೇಕು. ಜೊತೆಯಲ್ಲಿ ಮಕ್ಕಳು ಬಾಲ್ಯದಿಂದಲೇ ತಾಯಿ, ಪ್ರಕೃತಿ ಮಾತೆ , ಭಾರತ ಮಾತೆಯನ್ನು ಗೌರವಿಸುವ ವಾತಾವರಣ ಮೂಡಿಸಬೇಕು ಎಂದ್ರು.

> ದಶಕದ ಹಿಂದೆ ನಾಲ್ಕು ಸಾವಿರ ಅಕ್ಕಿ ಮಿಲ್, ಒಂದು ಲಕ್ಷ ರೈತರಿದ್ದ ಉಭಯ ಜಿಲ್ಲೆಗಳಲ್ಲಿ ಪ್ರಸ್ತುತ ಕೇವಲ 20ಅಕ್ಕಿ ಮಿಲ್, ಭತ್ತ ಬೆಳೆಯುವ ನಾಲ್ಕು ಸಾವಿರ ರೈತರಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಬೆಳೆಯುವ ಅಕ್ಕಿಯನ್ನು ಬಳಸಿಕೊಂಡು ಇಲ್ಲಿಯ ರೈತರಿಗೆ ಬಲ ಕೊಡಬೇಕು.
> ■ **ಪವನ್ ಕುಮಾರ್,**
> ಉರ್ಪೆಲ್ ರೈಸ್ ಮಿಲ್ ಮಾಲೀಕರು

ಮಾಜಿ ಶಾಸಕ ಕೆ. ಜಯರಾಮ್ ಶೆಟ್ಟಿ, ಉರ್ಪೆಲ್ ರೈಸ್ ಮಿಲ್ ಮಾಲೀಕ ಪವನ್ ಕುಮಾರ್, ಜಿಲ್ಲಾ ಕಂಬಳ ಸಮಿತಿ ಉಪಾಧ್ಯಕ್ಷ ಹಾಗೂ ಉದ್ಯಮಿ ಗಿರೀಶ್ ಆಳ್ವ ಮೋರ್ಲ, ದುರ್ಗಾವಾಹಿನಿ ಮಹಿಳಾ ಮಂಡಲದ ಅಧ್ಯಕ್ಷೆ ಆಶಾಲತಾ ಕುಶಾಲಪ್ಪ, ಪ್ರತಿಷ್ಠಾನದ ಪ್ರಧಾನ ಸಂಚಾಲಕರಾದ ರಮೇಶ್ ಕೊಲ್ಯ, ಪವಿತ್ರ ಕುಮಾರ್ ಗಟ್ಟಿ, ಕೃಷ್ಣ ಶೆಟ್ಟಿ ತಾಮಾರ್, ಜಗನ್ನಾಥ ಸಾಲಿಯಾನ್, ಶಿವರಾಂ ಶೆಟ್ಟಿ ಬಿಜೈ, ವಸಂತ್ ಅಡಪ್ಪ ಕೋಟೆಕಾರ್, ಸುಂದರ ಶೆಟ್ಟಿ ಕೊಂಡಾಣ, ಲೋಕೇಶ್ ಎಕ್ಕೂರು, ಭಾಸ್ಕರ್ ಶೆಟ್ಟಿ ಹರೇಕಳ, ಲತೀಶ್ ರೈ ಅಂಬಲಮೊಗರು, ಸುರೇಶ್ ಶೆಟ್ಟಿ ಅಂಬಲಮೊಗರು, ರಾಮಚಂದ್ರ ಶೆಟ್ಟಿ, ವೇದ ಪವಿತ್ರ ಕುಮಾರ್, ಸುನೀತಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸನಾತನ ಸೇವಾ ಪ್ರತಿಷ್ಠಾನದ ಅಧ್ಯಕ್ಷ ಸುರೇಶ್ ಚೌಟ ಕಕ್ಕೆಮಜಲು ಸ್ವಾಗತಿಸಿದರು.

ರಾಜೇಶ್ ಎಂ. ಗಟ್ಟಿ ಕಾರ್ಯಕ್ರಮ ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿ ದಿನೇಶ್ ಗಟ್ಟಿ ವಂದಿಸಿದರು.

# ಅಮ್ಮ ನ್ಯಾಚುರಲ್ ಪ್ರಾಡಕ್ಟ್ಸ್‌ನ ನೂತನ ಮಳಿಗೆ ಶುಭಾರಂಭ!

**ನೈಸರ್ಗಿಕ ಆರೈಕೆಯತ್ತ ಮತ್ತೊಂದು ಹೆಜ್ಜೆ....**



**ಪುತ್ತೂರು:** ಪುತ್ತೂರಿನ ಕಬಕ ಜಂಕ್ಷನ್‌ನಲ್ಲಿರುವ ಮಹಾದೇವಿ ಕಾಂಪ್ಲೆಕ್ಸ್‌ನಲ್ಲಿ, ನೈಸರ್ಗಿಕ ಹಾಗೂ ಗುಣ ಮಟ್ಟದ ಉತ್ಪನ್ನಗಳನ್ನು ಗ್ರಾಹಕರಿಗೆ ಪರಿಚಯಿಸುವ ಅಮ್ಮ ನ್ಯಾಚುರಲ್ ಪ್ರೊಡೆಕ್ಟ್ಸ್‌ನ ನೂತನ ಮಳಿಗೆ ಕವಿತಾ ಗಣೇಶ್ ಮಾಲಕತ್ವದಲ್ಲಿ ಶುಭಾ ರಂಭಗೊಂಡಿದೆ. ಅಮ್ಮ ನ್ಯಾಚುರಲ್ ಪ್ರಾಡಕ್ಟ್ಸ್ ರೂವಾರಿ ವಸಂತಿ ಹಾಗೂ ಮಾಲಕರಾದ ಕವಿತಾ ಗಣೇಶ್ ಅವರ ಅತ್ತೆ ರೋಹಿಣಿಯವರು ರಿಬ್ಬನ್ ಕತ್ತರಿಸುವಮೂಲಕಮಳಿಗೆಯನ್ನು ಉದ್ಘಾಟಿಸಿದರು. ಕಹಳೆ ನ್ಯೂಸ್‌ನ ಪ್ರಧಾನ ಸಂಪಾದಕರಾದ ಶ್ಯಾಮ್ ಸುದರ್ಶನ್ ಹೊಸಮೂಲೆ ಅವರು ಕಾರ್ಯಕ್ರಮವನ್ನು ದೀಪ ಬೆಳಗುವ ಮೂಲಕ ಉದ್ಘಾಟಿ ಸಿದರು. ಬಳಿಕ ಮಾತನಾಡಿ ನೂತನ ಮಳಿಗೆಗೆ ಶುಭ ಹಾರೈಸಿ ದ್ದಾರೆ. ಖ್ಯಾತ ನಿರೂಪಕರು ಹಾಗೂ ಸೋಶಿಯಲ್ ಮೀಡಿಯ ಇನ್ಫ್ಲುನ್ಸರ್ ವಿಜೆ ವಿಖ್ಯಾತ್ ಅಮ್ಮ ನ್ಯಾಚುರಲ್ ಪ್ರಾಡಕ್ಟ್ಸ್‌ನ ನೂತನ ಪ್ರಾಡಕ್ಟ್‌ಗಳನ್ನು ಅನಾವರಣ ಗೊಳಿಸಿ, ಮಾತನಾಡಿ ಶುಭ ಹಾರೈಸಿದ್ದಾರೆ.

ಜೊತೆಗೆ ಕಾಮಿಡಿ ಕಿಲಾಡಿಗಳು ಖ್ಯಾತಿಯ ಪ್ಯಾಕು ಪ್ಯಾಕು ಹಿತೇಶ್, ಸೋಶಿಯಲ್ ಇನ್ಫು ಲಯೆನ್ಸರ್ ಜೆಪಿ ಬ್ರೋ ಆಗಮಿಸಿ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಮಳಿಗೆಯ ಮಾಲಕರಾದ ಕವಿತಾ ಗಣೇಶ್, ಗಣೇಶ್, ಬಂಧು ಬಳಗ, ಉಪಸ್ಥಿತ ರಿದ್ದರು. ನಿರೂಪಕಿ ಅಖಿಲಾ ಅಗರಿ ಕಾರ್ಯಕ್ರಮ ನಿರೂಪಿಸಿದರು.

ಹೇರ್ ಆಯಿಲ್, ಹರ್ಬಲ್ ಶಾಂಪೂ, ಬೇಬಿ ಮಸಾಜ್ ಆಯಿಲ್ ಸೇರಿದಂತೆ ನೈಸರ್ಗಿಕ ಪದಾರ್ಥಗಳಿಂದ ತಯಾರಿಸ ಲಾದ ವಿವಿಧ ಉತ್ಪನ್ನಗಳು ಆನ್ಲೈನ್ ಮೂಲಕವೂ ಗ್ರಾಹಕರಿಗೆ ಲಭ್ಯವಿದೆ.

**ನಿಧನ ಸುದ್ದಿ**

## ಮುನ್ನೂರು ಗ್ರಾಮದ ಸಿಪಿಎಂ ಪಕ್ಷದ ನಿಷ್ಠಾವಂತ ಕಾರ್ಯಕರ್ತ ನಾರಾಯಣ ಸಪಲ್ಯ ಬಿಲ್ಲರಗುಡ್ಡೆ ನಿಧನ

ಮುನ್ನೂರು ಗ್ರಾಮ ಸಿಪಿಎಂ ಪಕ್ಷದ 1 ನೇ ಶಾಖಾ ಸದಸ್ಯರು ಪಕ್ಷದ ನಿಷ್ಠಾವಂತ ಸರಳ ಸಜ್ಜನಿಕೆಯ ಪ್ರಾಮಾಣಿಕ ಕಾರ್ಯಕರ್ತರು ಆಗಿದ್ದ ನಾರಾಯಣ ಸಪಲ್ಯ ಬಿಲ್ಲರ ಗುಡ್ಡೆ ಅನಾರೋಗ್ಯ ನಿಮಿತ್ತ ನಿಧನ ರಾಗಿದ್ದಾರೆ.



ಮುನ್ನೂರು ಗ್ರಾಮ ಸಿಪಿಎಂ ಪಕ್ಷದ ಮಾಜಿ ತಾಲೂಕು ಪಂಚಾಯತ್ ಸದಸ್ಯೆಯಾಗಿದ್ದ ಶ್ರೀಮತಿ ದಯಾವತಿ ಕುತ್ತಾರ್ ರವರ ಪತಿಯಾದ ನಾರಾಯಣ್ ಸಣ್ಣ ಪ್ರಾಯದಲ್ಲೇ ಸಿಪಿಎಂ ಪಕ್ಷದ ಸದಸ್ಯರಾಗಿ ಕಾರ್ಮಿಕ ಸಂಘಟನೆಯಲ್ಲಿ ಸಕ್ರಿಯ ಕಾರ್ಯಕರ್ತರಾಗಿ ಸಾಮಾಜಿಕವಾಗಿ ತನ್ನನ್ನು ತೊಡಗಿಸಿ ಕೊಂಡಿದ್ದರು ಕುತ್ತಾರಿನ ಶ್ರೀ ಜೈ ಹನುಮಾನ್ ಕ್ರೀಡಾ ಮಂಡಳಿ ಮತ್ತು ಶ್ರೀ. ವೀರಾಂಜನೇಯ ವ್ಯಾಯಾಮ ಶಾಲೆಯ ಹಿತೈಷಿಯಾಗಿ ಗುರುತಿಸಿಕೊಂಡಿದ್ದರು.

ಮಂಗಳವಾರ ತನ್ನ ಸ್ವಗ್ರಹದಲ್ಲಿ ಪಕ್ಷದ ನಾಯಕರು, ಕಾರ್ಯಕರ್ತರು ಸ್ಥಳೀಯ ಸಂಘ ಸಂಸ್ಥೆ ಸದಸ್ಯರುಸೇರಿ ಅವರಿಗೆ ಅಂತಿಮ ನಮನ ಸಲ್ಲಿಸಿದರು.

ಸಿಪಿಎಂ ಪಕ್ಷದ ಜಿಲ್ಲಾ ನಾಯಕರಾದ ಕೆ. ಕೃಷ್ಣಪ್ಪ ಸಾಲಿಯಾನ್,ಯು. ಜಯಂತ್ ನಾಯಕ್, ಶೇಖರ್ ಕುಂದರ್ ಮುನ್ನೂರು ಗ್ರಾಮ ಪಂಚಾಯತ್ ಉಪಾಧ್ಯಕ್ಷ ಮಹಾಬಲ ಟಿ ದೆಪ್ಪೆಲಿ ಮಾರ್, ಸ್ಥಳೀಯ ಸಿಪಿಎಂ ನಾಯಕ ಕೆ. ವಿಶ್ವನಾಥ್ ತೇವುಲಮಾಜಿ ಪಂಚಾಯತ್ ಸದಸ್ಯ ಗಣೇಶ್ ಟೈಲರ್, ಗಣೇಶ್ ತಲೆನೀರ್, ನವೀನ್ ಗಿರಿಯ ಮೂಲೆ ಕಾರ್ಮಿಕ ಮುಖಂಡರುಗಳಾದ ಕೆ. ಜನಾರ್ಧನ್ ಕುತ್ತಾರ್, ಜಯರಾಮ್ ತೇವುಲ, ಯುವಜನ ನಾಯಕರಾದ ಅಡ್ವಾಕೇಟ್ ನಿತಿನ್ ಕುತ್ತಾರ್ ಸುನಿಲ್ ತೇವುಲ, ಮಿಥುನ್ ಕುತ್ತಾರ್ ಪದವು, ಸ್ವೀಕೃತ್ ಕುತ್ತಾರ್ ಮತ್ತಿತರರು ಭಾಗವಹಿಸಿ ಅಂತಿಮ ವಿದಾಯ ಸಲ್ಲಿಸಿದರು.

## ಹೆಸರಾಂತ ಶಾಮಿಯಾನ ಮಾಲೀಕ ಕೆ.ಎನ್.ಹೆಚ್. ಅಬ್ದುಲ್ ಖಾದರ್ ನಿಧನ

**ದೇರಳಕಟ್ಟೆ:** ಕಾನಕೆರೆಯ ಹೆಸರಾಂತ ಶಾಮಿಯಾನ ಸಂಸ್ಥೆಯ ಮಾಲೀಕರಾಗಿದ್ದ ಕೆ.ಎನ್.ಹೆಚ್. ಅಬ್ದುಲ್ ಖಾದರ್ ಅವರು ಅಸೌಖ್ಯದಿಂದ ನಿಧನರಾದರು.ಅವರು ಮಂಗಳೂರಿನ ಫಸ್ಟ್ ನ್ಯೂರೋ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಚಿಕಿತ್ಸೆ ಫಲಕಾರಿಯಾಗದೆ ನಿಧನ ಹೊಂದಿದ್ದಾರೆ.



ಮೃತರು ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಬಂಧುಬಳಗ, ಸ್ನೇಹಿತರು ಹಾಗೂ ಹಿತೈಷಿಗಳು ಮೃತರ ಮಗ್ಫಿರತ್‌ಗಾಗಿ ದುಆ ಮಾಡುವಂತೆ ಕುಟುಂಬಸ್ಥರು ಮನವಿ ಮಾಡಿದ್ದಾರೆ.

### ವಾಲ್ಮೀಕಿ ಹಗರಣ: ನಾಗೇಂದ್ರಗೆ ಮತ್ತೆ ಸಚಿವ ಸ್ಥಾನ ನೀಡಿರುವುದಕ್ಕೆ ಬಿಜೆಪಿ ಆಕ್ರೋಶ

# ಸಚಿವ ನಾಗೇಂದ್ರ ರಾಜೀನಾಮೆಗೆ ಆಗ್ರಹಿಸಿ ತೊಕ್ಕೊಟ್ಟಿನಲ್ಲಿ ಬಿಜೆಪಿ ಮಂಗಳೂರು ಮಂಡಲ ಪ್ರತಿಭಟನೆ




**ಉಳ್ಳಾಲ:** ವಾಲ್ಮೀಕಿ ನಿಗಮದ ಹಗರಣದಲ್ಲಿ ಭಾಗಿಯಾಗಿರುವವರ ಮತ್ತಷ್ಟು ಹೆಸರುಗಳು ಬಹಿರಂಗಗೊಳ್ಳುವ ಆತಂಕದಿಂದ ಮಾಜಿ ಸಚಿವ ಬಿ. ನಾಗೇಂದ್ರ ಅವರನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಸಚಿವ ಸಂಪುಟಕ್ಕೆ ಮತ್ತೆ ಸೇರ್ಪಡೆಗೊಳಿಸಲಾಗಿದೆ ಎಂದು ಬಿಜೆಪಿ ಮಂಗಳೂರು ಮಂಡಲ ಪ್ರಧಾನ ಕಾರ್ಯದರ್ಶಿ ಮೋಹನ್ ರಾಜ್ ಕೆ.ಆರ್. ಆರೋಪಿಸಿದರು.

ವಾಲ್ಮೀಕಿ ನಿಗಮದ ಹಗರಣದ ರೂವಾರಿಯಾಗಿರುವ ಬಿ. ನಾಗೇಂದ್ರ ಅವರ ರಾಜೀನಾಮೆಗೆ ಆಗ್ರಹಿಸಿ ಹಾಗೂ ರಾಜ್ಯ ಕಾಂಗ್ರೆಸ್ ಸರ್ಕಾರದ ವೈಫಲ್ಯಗಳ ವಿರುದ್ಧ ಬಿಜೆಪಿ ಮಂಗಳೂರು ಮಂಡಲ ವತಿಯಿಂದ ಬುಧವಾರ ತೊಕ್ಕೊಟ್ಟು ಫ್ಲೈಓವರ್ ಕೆಳಗಡೆ ನಡೆದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

ನಾಗೇಂದ್ರ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸುವವರೆಗೆ ಬಿಜೆಪಿ ಹೋರಾಟ ಮುಂದುವರಿಯಲಿದೆ ಎಂದು ಅವರು ಎಚ್ಚರಿಸಿದರು. ಸಚಿವ ಸ್ಥಾನದಲ್ಲಿದ್ದ ಸಂದರ್ಭ ವಾಲ್ಮೀಕಿ ನಿಗಮದ ಕೋಟ್ಯಂತರ ರೂಪಾಯಿ ಹಣ ಅಕ್ರಮವಾಗಿ ವರ್ಗಾವಣೆಯಾದ ಪ್ರಕರಣದಲ್ಲಿ ಆರೋಪ ಎದುರಿಸಿ ಜೈಲು ಸೇರಿದ್ದ ನಾಗೇಂದ್ರ ಅವರನ್ನು ಮತ್ತೆ ಸಚಿವ ಸಂಪುಟಕ್ಕೆ ಸೇರ್ಪಡೆಗೊಳಿಸಿರುವುದು ನಾಚಿಕೆಗೇಡಿನ ಸಂಗತಿ ಎಂದರು.

ಕಾಂಗ್ರೆಸ್ ಭ್ರಷ್ಟಾಚಾರ ಮುಕ್ತ ಆಡಳಿತ ನೀಡುವುದಾಗಿ ಭರವಸೆ ನೀಡಿ ಜನರಿಂದ ಮತ ಪಡೆದಿತ್ತು. ಆದರೆ ಭ್ರಷ್ಟಾಚಾರದ ಆರೋಪ ಎದುರಿಸುತ್ತಿರುವ ವ್ಯಕ್ತಿಯನ್ನೇ ಮತ್ತೆ ಸಚಿವರನ್ನಾಗಿ ಮಾಡುವ ಮೂಲಕ ಸರ್ಕಾರದ ನಿಲುವಿನ ಬಗ್ಗೆ ಅನುಮಾನ ಮೂಡಿದೆ ಎಂದು ಮೋಹನ್ ರಾಜ್ ಹೇಳಿದರು.

ಬಿಜೆಪಿ ಮಂಗಳೂರು ಮಂಡಲ ಅಧ್ಯಕ್ಷ ಜಗದೀಶ್ ಆಳ್ವ ಕುವೆತ್ತಬೈಲು ಪ್ರತಿಭಟನೆಯ ಅಧ್ಯಕ್ಷತೆ ವಹಿಸಿದ್ದರು.

ಮಾಜಿ ಶಾಸಕ ಕೆ. ಜಯರಾಮ ಶೆಟ್ಟಿ ಮಾತನಾಡಿ, ವಾಲ್ಮೀಕಿ ಹಗರಣದಲ್ಲಿ ನಾಗೇಂದ್ರ ಅವರು ಭಾಗಿಯಾಗಿರುವ ಆರೋಪವಿದೆ. ಹಿಂದಿನ ಸರ್ಕಾರದ ಅವಧಿಯಲ್ಲಿ ಜೈಲು ಸೇರಿದ್ದ ಅವರು ಇದೀಗ ಮತ್ತೆ ಸಚಿವ ಸಂಪುಟಕ್ಕೆ ಸೇರ್ಪಡೆಯಾಗಿದ್ದಾರೆ. ಉಳ್ಳಾಲ ಕ್ಷೇತ್ರದಲ್ಲಿ ಹಲವು ವರ್ಷಗಳಿಂದ ತಂದೆ–ಮಗನ ಆಡಳಿತವಿದ್ದರೂ ನಿರೀಕ್ಷಿತ ಮಟ್ಟದ ಅಭಿವೃದ್ಧಿಯಾಗಿಲ್ಲ ಎಂದು ಆರೋಪಿಸಿದರು.

**ಪರಿಹಾರ ನೀಡುವುದರಲ್ಲೂ ಪಕ್ಷಪಾತವೇಕೆ?**

ಇತ್ತೀಚೆಗೆ ವಿದ್ಯುತ್ ಆಘಾತದಿಂದ ಮೃತಪಟ್ಟ ಮೆಸ್ಕಾಂ ಲೈನ್‌ಮ್ಯಾನ್ ಕುಟುಂಬಕ್ಕೆ ಸಚಿವ ಯು.ಟಿ. ಖಾದರ್ ಭೇಟಿ ನೀಡಿ ಪರಿಹಾರದ ಆದೇಶ ಪತ್ರ ನೀಡಿರುವುದನ್ನೂ ಮೋಹನ್ ರಾಜ್ ಪ್ರಶ್ನಿಸಿದರು. ವಿಮಾ ಕಂಪನಿಯಿಂದ ಪರಿಹಾರ ನೀಡುವ ಪ್ರಕ್ರಿಯೆ ನಡೆಯುತ್ತಿರುವ ಸಂದರ್ಭದಲ್ಲಿ ಇದರ ನಡುವೆ ಸಚಿವರು ರಾಜಕೀಯ ನಾಟಕ ಮಾಡುವ ಅಗತ್ಯವೇನು ಎಂದು ಅವರು ಪ್ರಶ್ನಿಸಿದರು.

ಮಾನವೀಯತೆ ಇದ್ದರೆ ಲೈನ್‌ಮ್ಯಾನ್ ಕುಟುಂಬಕ್ಕೆ ಸರ್ಕಾರದಿಂದ ಹೆಚ್ಚಿನ ಪರಿಹಾರ ಕೊಡಿಸುವ ಕೆಲಸ ಮಾಡಬೇಕಿತ್ತು ಎಂದರು. ಕಳೆದ ವರ್ಷ ಮಂಜನಾಡಿಯಲ್ಲಿ ನಡೆದ ಗುಡ್ಡ ಕುಸಿತ ದುರಂತದಲ್ಲಿ ಕುಟುಂಬ ಸದಸ್ಯರನ್ನು ಕಳೆದುಕೊಂಡು, ಎರಡೂ ಕಾಲುಗಳನ್ನು ಕಳೆದುಕೊಂಡು ಅಂಗವಿಕಲರಾದ ಅಶ್ವಿನಿ ಅವರಿಗೆ ಬಿಜೆಪಿ ಹಾಗೂ ಆರ್‌ಎಸ್‌ಎಸ್ ನೆರವು ನೀಡಿತ್ತು. ಪರಿಹಾರ ನೀಡುವ ವಿಚಾರದಲ್ಲೂ ಪಕ್ಷಪಾತ ಮಾಡುವುದು ಸರಿಯೇ ಎಂದು ಅವರು ಪ್ರಶ್ನಿಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಮಂಡಲ ಪ್ರಧಾನ ಕಾರ್ಯದರ್ಶಿ ಧನಲಕ್ಷ್ಮಿ ಗಟ್ಟಿ, ಜಿಲ್ಲಾ ವಕ್ತಾರ ಜೀವನ್ ಕುಮಾರ್ ತೊಕ್ಕೊಟ್ಟು, ಜಿಲ್ಲಾ ಮಾಧ್ಯಮ ಸಹ ಸಂಚಾಲಕ ಹೇಮಂತ್ ಶೆಟ್ಟಿ, ಕೋಟೆಕಾರು ಪ.ಪಂ. ಅಧ್ಯಕ್ಷೆ ದಿವ್ಯಾ ಶೆಟ್ಟಿ, ಮಂಡಲ ಉಪಾಧ್ಯಕ್ಷರಾದ ಸುಮನಾ ಹರೀಶ್ ಶೆಟ್ಟಿ, ಮನೋಜ್ ಆಚಾರ್ಯ, ಶೈಲೇಶ್ ಶೆಟ್ಟಿ ತಲಪಾಡಿ, ಕಾರ್ಯದರ್ಶಿಗಳಾದ ರಮೇಶ್ ಬೆದ್ರೋಳಿಕೆ, ಭರತ್ ರಾಜ್ ಗಟ್ಟಿ, ಕಿಶೋರ್ ಕುತ್ತಾರು, ಬಿಜೆಪಿ ಯುವ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ನಿಶಾನ್ ಪೂಜಾರಿ, ಮಂಡಲ ಅಧ್ಯಕ್ಷ ಮುರಳಿ ಕೊಣಾಜೆ, ಮಹಿಳಾ ಮೋರ್ಚಾ ಮಂಡಲ ಅಧ್ಯಕ್ಷೆ ಮಾಧವಿ ಉಳ್ಳಾಲ್, ಪ್ರಧಾನ ಕಾರ್ಯದರ್ಶಿ ಸ್ವಪ್ನ ಶೆಟ್ಟಿ ಸೇರಿದಂತೆ ಪಕ್ಷದ ವಿವಿಧ ಘಟಕಗಳ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷೆ ಪೂಜಾ ಪೈ ಜಿಲ್ಲಾ ಉಪಾಧ್ಯಕ್ಷ ಕೆ. ರವೀಂದ್ರ ಶೆಟ್ಟಿ ಉಳಿದೊಟ್ಟು, ಮಹಾಶಕ್ತಿ ಕೇಂದ್ರಗಳ ಅಧ್ಯಕ್ಷರಾದ ಸುರೇಂದ್ರ ಶೆಟ್ಟಿ, ಪುರುಷೋತ್ತಮ ಗಟ್ಟಿ ಪರ್ಯತ್ತೂರು, ಅಶೋಕ್ ಕೆಂಜಿಲ, ನಿತ್ಯಾನಂದ ಭಂಡಾರಿ, ಮಂಡಲ ಕಾರ್ಯಾಲಯ ಕಾರ್ಯದರ್ಶಿ ಸುಜಾತ ಶೆಟ್ಟಿ, ಜಿತೇಂದ್ರ ಶೆಟ್ಟಿ, ಹರಿಯಪ್ಪ ಸಾಲ್ಯಾನ್, ಅತುಲ್ ಬಗಂಬಿಲ, ಸಿದ್ಧೀಕ್ ತಲಪಾಡಿ, ಸಿರಾಜ್ ಮುಡಿಪು, ಪದ್ಮನಾಭ ಗಟ್ಟಿ, ದೀಕ್ಷಿತ್ ಉಳ್ಳಾಲಬೈಲ್, ಶರಣ್ ಶೆಟ್ಟಿ, ಆನಂದ ಶೆಟ್ಟಿ, ಗಣೇಶ್ ಭಂಡಾರಿ ನಡಾರ್ ಮತ್ತಿತರರು ಉಪಸ್ಥಿತರಿದ್ದರು.

ಮಂಡಲ ಪ್ರಧಾನ ಕಾರ್ಯದರ್ಶಿ ದಯಾನಂದ ತೊಕ್ಕೊಟ್ಟು ಸ್ವಾಗತಿಸಿದರು. ಉಪಾಧ್ಯಕ್ಷ ರವಿಶಂಕರ್ ಸೋಮೇಶ್ವರ ವಂದಿಸಿದರು.

# ಸರ್ಕಾರಿ ಜಾಗದಲ್ಲಿದ್ದ ಮರಗಳ ಕಡಿತ ಆರೋಪ; ಅಧಿಕಾರಿಯ ವಿರುದ್ಧ ಕಾಂಗ್ರೆಸ್ ದೂರು





**ಮಂಗಳೂರು:** ಸರ್ಕಾರಿ ಜಾಗದಲ್ಲಿದ್ದ ಸಾಗುವಾನಿ, ಹೆಬ್ಬಲಸು, ಹಲಸು ಸೇರಿದಂತೆ ವಿವಿಧ ಜಾತಿಯ ಮರಗಳನ್ನು ಕಡಿದು ಸಾಗಿಸಿ ಮಾರಾಟ ಮಾಡಲಾಗಿದೆ ಎಂದು ಆರೋಪಿಸಿ ಬಿಜೆಪಿ ಮುಖಂಡರು ಹಾಗೂ ಪಾಲಿಕೆ ಅಧಿಕಾರಿಯ ವಿರುದ್ಧ ಕಾಂಗ್ರೆಸ್ ದೂರು ನೀಡಿದೆ. ಮಂಗಳೂರು ಹೊರವಲಯದ ಸುರತ್ಕಲ್‌ನ ಮಾದವನಗರದಲ್ಲಿರುವ ಮಂಗಳೂರು ಮಹಾನಗರ ಪಾಲಿಕೆಗೆ ಸೇರಿದ ಎಸ್‌ಟಿಪಿ ಜಾಗದಲ್ಲಿ ಘಟನೆ ನಡೆದಿದೆ ಎನ್ನಲಾಗಿದೆ. ಪಾಲಿಕೆಯ ವತಿಯಿಂದ ಇಲ್ಲಿ ಕಾಂಪೌಂಡ್ ನಿರ್ಮಾಣ ಕಾಮಗಾರಿಗೆ ಗುತ್ತಿಗೆ ನೀಡಲಾಗಿದ್ದು, ಕಾಮಗಾರಿ ನೆಪದಲ್ಲಿ ಹತ್ತಾರು ಮರಗಳನ್ನು ಕಡಿದು ಸಾಗಿಸಲಾಗಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಕಡಿದ ಮರಗಳನ್ನು ಲಕ್ಷಾಂತರ ರೂಪಾಯಿಗೆ ಮಾರಾಟ ಮಾಡಲಾಗಿದೆ ಎಂಬ ಆರೋಪವೂ ಕೇಳಿಬಂದಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಕಾರ್ಪೊರೇಟರ್ ಹಾಗೂ ರಾಜ್ಯ ಬಿಜೆಪಿ ಮಹಿಳಾ ಮೋರ್ಚಾ ಕಾರ್ಯದರ್ಶಿ ಶ್ವೇತಾ ಪೂಜಾರಿ ಮತ್ತು ಬಿಜೆಪಿ ಮುಖಂಡ ಹಾಗೂ ಗುತ್ತಿಗೆದಾರ ಪುಷ್ಪರಾಜ್ ಮುಕ್ಕ ವಿರುದ್ಧ ದೂರು ನೀಡಲಾಗಿದೆ. ಈ ಕುರಿತು ಮುಖ್ಯಮಂತ್ರಿ, ಅರಣ್ಯ ಸಚಿವರು, ಅರಣ್ಯಾಧಿಕಾರಿಗಳು ಹಾಗೂ ಪೊಲೀಸರಿಗೆ ದೂರು ಸಲ್ಲಿಸಲಾಗಿದೆ.

ಮಂಗಳೂರು ಮಹಾನಗರ ಪಾಲಿಕೆಯ ವತಿಯಿಂದಲೂ ಆರ್‌ಎಫ್‌ಒಗೆ ದೂರು ನೀಡಲಾಗಿದೆ. ದೂರಿನ ಆಧಾರದ ಮೇಲೆ ಅರಣ್ಯ ಇಲಾಖೆ ಅಧಿಕಾರಿಗಳು ಪ್ರಕರಣದ ಕುರಿತು ತನಿಖೆ ನಡೆಸುತ್ತಿದ್ದಾರೆ.

ಮರಗಳನ್ನು ಕಡಿದು ಮಾರಾಟ ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಕಳ್ಳತನವಾಗಿ ಸಾಗಿಸಲಾದ ಮರಗಳ ಪೈಕಿ ಸುಮಾರು ಶೇ.50ರಷ್ಟು ಮರಗಳನ್ನು ಅರಣ್ಯ ಇಲಾಖೆ ವಶಕ್ಕೆ ಪಡೆದಿದೆ ಎಂದು ತಿಳಿದುಬಂದಿದೆ. ಪ್ರಕರಣದ ತನಿಖೆ ಮುಂದುವರಿದಿದ್ದು, ಮರಗಳ ಕಡಿತ,

ಸಾಗಾಟ ಹಾಗೂ ಮಾರಾಟದ ಕುರಿತು ಅರಣ್ಯಾಧಿಕಾರಿಗಳು ಮಾಹಿತಿ ಸಂಗ್ರಹಿಸುತ್ತಿದ್ದಾರೆ.

# ಕೋಟೆಕಾರ್ ಮರ್ಕಝುಲ್ ಹಿದಾಯ ಶಾಲೆಗೆ ಖೋ ಖೋ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ



**ಉಳ್ಳಾಲ:** ಹೋಬಳಿ (ಎ)ಮಟ್ಟದ ಖೋ–ಖೋ ಪಂದ್ಯಾವಳಿಯ ಅಂಡರ್–14 ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಕೋಟೆಕಾರ್‌ನ ಮಾರ್ಕಝುಲ್ ಹಿದಾಯ ಆಂಗ್ಲ ಮಾಧ್ಯಮ ಶಾಲೆ ಪ್ರಥಮ ಸ್ಥಾನ ಪಡೆದು ಗಮನಾರ್ಹ ಸಾಧನೆ ಮಾಡಿದೆ.

ವಿದ್ಯಾರ್ಥಿಗಳ ಈ ಅತ್ಯುತ್ತಮ ಸಾಧನೆಗೆ ಶಾಲಾ ದೈಹಿಕ ಶಿಕ್ಷಣ ಶಿಕ್ಷಕರಾದ ಹಮೀದ್ ತಲಪಾಡಿ ಅವರ ಮಾರ್ಗದರ್ಶನ ಹಾಗೂ ತರಬೇತಿ ಮಹತ್ವದ ಪಾತ್ರ ವಹಿಸಿದೆ.

ವಿದ್ಯಾರ್ಥಿಗಳ ಸಾಧನೆಗೆ ಶಾಲಾ ಸಂಚಾಲಕರಾದ ಎನ್ ಎಸ್ ಉಮರ್ ಮಾಸ್ಟರ್, ಆಡಳಿತ ಮಂಡಳಿ, ಶಿಕ್ಷಕರ ವೃಂದ ಹಾಗೂ ವಿದ್ಯಾರ್ಥಿಗಳ ಪರವಾಗಿಹೃತ್ಪೂರ್ವಕಅಭಿನಂದನೆಗಳನ್ನು ಸಲ್ಲಿಸಲಾಯಿತು. ಮುಂದಿನ ಹಂತದ ಪಂದ್ಯಾವಳಿಗಳಲ್ಲಿಯೂ ಶಾಲೆ ಇನ್ನಷ್ಟು ಯಶಸ್ಸು ಸಾಧಿಸಲಿ ಎಂದು ಶುಭ ಹಾರೈಸಲಾಗಿದೆ.

## ಮಂಗಳೂರು ವಿ.ವಿ.ಯ ಹಳೇ ವಿದ್ಯಾರ್ಥಿ ಸಂಘದ ಮಂಗಳಾ ಅಲ್ಯುಮ್ನಿ ಅಸೋಸಿಯೇಷನ್‌ನಲ್ಲಿ

# ಭಾರೀ ಅವ್ಯವಹಾರದ ಆರೋಪ: ಹಾಲಿ ಅಧ್ಯಕ್ಷರಿಂದ ತನಿಖೆಗೆ ಒತ್ತಾಯ

**ಉಳ್ಳಾಲ:** ಮಂಗಳೂರು ವಿಶ್ವವಿದ್ಯಾಲಯದ ಮಂಗಳಾ ಅಲ್ಯುಮ್ನಿ ಅಸೋಸಿಯೇಷನ್ 15 ವರ್ಷಗಳ ಕಾಲ ನೋಂದಣಿ ನವೀಕರಣವಿಲ್ಲದೆ ಕಾರ್ಯನಿರ್ವಹಿಸಿದ್ದು, ಅಲ್ಯುಮ್ನಿಯೇ ಅಲ್ಲದ ಅಂತಿಮ ವರ್ಷದ ವಿದ್ಯಾರ್ಥಿಗಳಿಂದಲೂ ಕಡ್ಡಾಯವಾಗಿ ಸಂಗ್ರಹಿಸಲಾದ ಶುಲ್ಕದ ಹಣದ ಬಳಕೆಯಲ್ಲಿ ಗಂಭೀರ ಅಕ್ರಮಗಳು ನಡೆದಿದೆ. ಈ ಕುರಿತು ಮಂಗಳೂರು ವಿಶ್ವವಿದ್ಯಾನಿಲಯದ ಅಧಿಕಾರಿಗಳ ನಿಯೋಗ ರಚಿಸಿ ತನಿಖೆ ನಡೆಸಬೇಕು ಎಂದು ಮಂಗಳಾ ಅಲ್ಯುಮ್ನಿ ಚುನಾಯಿತ ಅಧ್ಯಕ್ಷರಾದ ರಾಮಕೃಷ್ಣ ರಾವ್ ಒತ್ತಾಯಿಸಿದ್ದಾರೆ.

ಮಂಗಳೂರು ವಿಶ್ವವಿದ್ಯಾಲಯದ ಮಂಗಳಾ ಅಲ್ಯುಮ್ನಿ ಅಸೋಸಿಯೇಷನ್‌ನ ವಿಶೇಷ ಸಭೆಯನ್ನು ಸೆಪ್ಟೆಂಬರ್ 19, 2026ರಂದು ನಡೆಸಲು ಆಡಳಿತ ಮಂಡಳಿ ಸೂಚನೆ ನೀಡಿದೆ. ಈ ನಡುವೆ ಸಂಘದ ನೋಂದಣಿ 2010ರ ಬಳಿಕ ನವೀಕರಣಗೊಂಡಿಲ್ಲ ಎಂಬ ಆರೋಪ ಸೇರಿದಂತೆ ಹಲವು ಗಂಭೀರ ಆರ್ಥಿಕ ಮತ್ತು ಆಡಳಿತಾತ್ಮಕ ಅಕ್ರಮಗಳು ಬೆಳಕಿಗೆ ಬಂದಿವೆ. ವಿದ್ಯಾರ್ಥಿಗಳಿಂದ ಕಡ್ಡಾಯ ಶುಲ್ಕ ಸಂಗ್ರಹ, ವಿಶ್ವವಿದ್ಯಾಲಯದ ಅಂತಿಮ ವರ್ಷದ ವಿದ್ಯಾರ್ಥಿಗಳ ಕಡ್ಡಾಯ ಶುಲ್ಕ ಪುಸ್ತಕದಲ್ಲೇ ಅಲ್ಯುಮ್ನಿ ಅಸೋಸಿಯೇಷನ್ ಶುಲ್ಕವನ್ನು ಸೇರಿಸಿ, ವಿದ್ಯಾರ್ಥಿಗಳು ಪದವಿ ಪೂರ್ಣಗೊಳಿಸುವ ಮುನ್ನವೇ ಹಣ ಪಾವತಿಸುವಂತೆ ಮಾಡಲಾಗಿತ್ತು ಅನ್ನುವ ಆರೋಪವೂ ಇದೆ.

ಅಲ್ಯುಮ್ನಿಯಾಗುವ ಮುನ್ನವೇ ವಿದ್ಯಾರ್ಥಿಗಳಿಂದ ಸಂಘದ ಸದಸ್ಯತ್ವ ಶುಲ್ಕ ಸಂಗ್ರಹಿಸಿರುವುದು ಪ್ರಶ್ನೆಗೆ ಕಾರಣವಾಗಿದೆ. ಸಂಘದ ಬೈಲಾ ಪ್ರಕಾರ ಸದಸ್ಯತ್ವ ಶುಲ್ಕ ಗರಿಷ್ಠ ರೂ.200 ಇರಬೇಕೆಂದು ಹೇಳಲಾಗಿದ್ದರೂ, ವಿದ್ಯಾರ್ಥಿಗಳಿಂದ ತಲಾ ರೂ.350 ಸಂಗ್ರಹಿಸಲಾಗಿದೆ. ಈ ಹೆಚ್ಚುವರಿ ಮೊತ್ತದ ಸಂಗ್ರಹ ಮತ್ತು ವರ್ಗಾವಣೆಗೆ ವಿಶ್ವವಿದ್ಯಾಲಯದ ಹಣಕಾಸು ವಿಭಾಗದ ಅಧಿಕಾರಿಗಳ ಜವಾಬ್ದಾರಿಯನ್ನೂ ಪರಿಶೀಲಿಸಬೇಕಿದೆ.

ಸತತವಾಗಿ ಕಾರ್ಯನಿರ್ವಹಿಸಿದ ವಿಶ್ವವಿದ್ಯಾಲಯದ ಮುಖ್ಯ ಹಣಕಾಸು ಅಧಿಕಾರಿಗಳ ಅನುಮತಿ ಮತ್ತು ಮೇಲ್ವಿಚಾರಣೆಯಿಲ್ಲದೆ ವಿದ್ಯಾರ್ಥಿಗಳಿಂದ ಈ ರೀತಿಯ ಹಣ ಸಂಗ್ರಹಿಸಲು ಸಾಧ್ಯವಿಲ್ಲ. ನೋಂದಣಿ ನವೀಕರಣವಿಲ್ಲದ ಸಂಘದ ಖಾತೆಗೆ ವಿದ್ಯಾರ್ಥಿಗಳ ಹಣ ವರ್ಗಾವಣೆಯಾಗಿದ್ದರೆ, ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಬಹಿರಂಗಪಡಿಸಬೇಕಿದೆ. ನೋಂದಣಿ ನವೀಕರಣವಿಲ್ಲದೆ ಸಂಘದ ಬ್ಯಾಂಕ್ ಖಾತೆಗಳು 16 ವರ್ಷಗಳ ಕಾಲ ಕಾರ್ಯನಿರ್ವಹಿಸಿದ್ದರೆ, ಸಂಬಂಧಪಟ್ಟ ಬ್ಯಾಂಕ್‌ಗಳು ಕಡ್ಡಾಯ ಕೆವೈಸಿ ಹಾಗೂ ಸಂಸ್ಥೆಯ ನೋಂದಣಿ ದಾಖಲೆಗಳ ಪರಿಶೀಲನೆಯನ್ನು ಹೇಗೆ ನಡೆಸಿದೆ. ಈ ಕುರಿತು ತನಿಖೆ ನಡೆಯಬೇಕಿದೆ ಅನ್ನುವ ಆಗ್ರಹವನ್ನು ಮಾಡಿದ್ದಾರೆ.



2006ರಲ್ಲಿ ಸ್ಥಾಪನೆಯಾದ ಸಂಘದ ನೋಂದಣಿ 2010ರ ಬಳಿಕ ನವೀಕರಣಗೊಂಡಿಲ್ಲ. ಬಳಿಕವೂ ಸಂಘವು ನಿರಂತರವಾಗಿ ಕಾರ್ಯನಿರ್ವಹಿಸಿದೆ . ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ ಸಂಘದ ಕಾನೂನುಬದ್ಧ ಸ್ಥಿತಿಯನ್ನು ಸದಸ್ಯರಿಗೆ ತಿಳಿಸಲಾಗಿಲ್ಲ. ಸಂಘದಲ್ಲಿ ಕಡ್ಡಾಯವಾಗಿ ಇರಬೇಕಾದ ಸದಸ್ಯರ ನೋಂದಣಿ, ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ಒಟ್ಟು ಹಣ, ಬ್ಯಾಂಕ್ ಖಾತೆಗಳ ಮೂಲಕ ನಡೆದ ವಹಿವಾಟು ಹಾಗೂ ಹಣವನ್ನು ಯಾವ ಉದ್ದೇಶಕ್ಕೆ ಬಳಸಲಾಗಿದೆ ಎಂಬುದಕ್ಕೆ ಸಂಬಂಧಿಸಿದ ಸಮಗ್ರ ದಾಖಲೆಗಳು ಲಭ್ಯವಿಲ್ಲ.

ಈ ಆರೋಪಗಳು ಬೆಳಕಿಗೆ ಬಂದಿರುವ ಸಂದರ್ಭದಲ್ಲಿ ಸೆಪ್ಟೆಂಬರ್ 19ರಂದು ವಿಶೇಷ ಸಭೆ ಕರೆಯಲಾಗಿರುವುದು ಮತ್ತಷ್ಟು ಅನುಮಾನಕ್ಕೆ ಕಾರಣವಾಗಿದೆ. ಸಾಮಾನ್ಯ ಸದಸ್ಯರು ಸಂಘದ ಪದಾಧಿಕಾರಿ ಸ್ಥಾನಗಳಿಗೆ ಸ್ಪರ್ಧಿಸುವುದನ್ನು ನಿರ್ಬಂಧಿಸುವ ರೀತಿಯಲ್ಲಿ ಬೈಲಾ ತಿದ್ದುಪಡಿ ತರಲು ಪ್ರಯತ್ನಿಸಲಾಗುತ್ತಿದೆ. ಇದರಿಂದ ಹಾಲಿ ಆಡಳಿತ ಮಂಡಳಿಗೆ ಮುಂದುವರಿಯಲು ಅನುಕೂಲವಾಗಲಿದೆ ಮತ್ತು ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಪ್ರಯತ್ನ ನಡೆಯುತ್ತಿದೆ ಅನ್ನುವ ಆರೋಪ ಮಾಡಿರುವ ಅವರು ಮಂಗಳಾ ಅಲ್ಯುಮ್ನಿ ಅಸೋಸಿಯೇಷನ್‌ನ ಸುಮಾರು 20 ವರ್ಷಗಳ ಇತಿಹಾಸದಲ್ಲಿ ಇದುವರೆಗೆ ಕೇವಲ ಮೂವರು ಮಾತ್ರ ಅಧ್ಯಕ್ಷರಾಗಿ ಮುಂದುವರಿದಿರುವುದು ಸಂಘದ ಆಡಳಿತ ವ್ಯವಸ್ಥೆ ಎಷ್ಟರ ಮಟ್ಟಿಗೆ ಕೆಲವರ ಹಿಡಿತದಲ್ಲಿತ್ತು ಎಂಬ ಪ್ರಶ್ನೆಯನ್ನು ಹುಟ್ಟುಹಾಕಿದೆ.

ಸಂಘದ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ಪಾರದರ್ಶಕವಾಗಿತ್ತೇ? ಸಾಮಾನ್ಯ ಸದಸ್ಯರಿಗೆ ನಾಯಕತ್ವದ ಅವಕಾಶ ನೀಡಲಾಗಿತ್ತೇ? ಎಂಬ ಪ್ರಶ್ನೆಗಳೂ ಇದೆ. ಈ ಎಲ್ಲ ಆರೋಪಗಳ ಹಿನ್ನೆಲೆಯಲ್ಲಿ ಜಿಲ್ಲಾ ನೋಂದಣಿ ಸಂಘಗಳ ಅಧಿಕಾರಿಗಳು ಹಾಗೂ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಇಲಾಖೆ ತಕ್ಷಣ ಮಧ್ಯಪ್ರವೇಶಿಸಿ ಸೆ.19ರ ವಿಶೇಷ ಸಭೆಗೆ ತಡೆ ನೀಡಬೇಕು. ವಿಶ್ವವಿದ್ಯಾಲಯದ ಹಣಕಾಸು ವಿಭಾಗ, ಸಂಘದ ಆಡಳಿತ ಮಂಡಳಿ ಮತ್ತು ಸಂಬಂಧಪಟ್ಟ ಬ್ಯಾಂಕ್‌ಗಳ ಪಾತ್ರದ ಕುರಿತು ಸ್ವತಂತ್ರ ಹಾಗೂ ಸಮಗ್ರ ತನಿಖೆ ನಡೆಸಬೇಕು. ಅಗತ್ಯವಿದ್ದಲ್ಲಿ ಸಂಬಂಧಪಟ್ಟ ಬ್ಯಾಂಕ್ ಖಾತೆಗಳ ವಹಿವಾಟುಗಳನ್ನು ಸ್ಥಗಿತಗೊಳಿಸಿ, ವಿದ್ಯಾರ್ಥಿಗಳಿಂದ ಸಂಗ್ರಹಿಸಲಾದ ಹಣದ ಸಂಪೂರ್ಣ ಲೆಕ್ಕಪತ್ರವನ್ನು ಪರಿಶೀಲಿಸಬೇಕು. ತಪ್ಪಿತಸ್ಥರು ಕಂಡುಬಂದಲ್ಲಿ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಅನ್ನುವ ಆಗ್ರಹವನ್ನು ಮಾಡಿದ್ದಾರೆ.

